Last point which I would like to make is about trainiog institutes. So many training institutions have come up throughout the State. There is one Training Institute at K. G. F. started by the All India Bovis Association. Their medium of instruction is tamil, but the Karnataka Bovis do not know tamil and they do not take tamil, they will only take kannada language as their medium of instruction, If they are trained there, they have to go to Tamilnadu. Last year, the Government gave permission for 100 seats, but the intake was 200. 100 ladies came from Kerala and Tamilnadu, after permitt their admission they have refused them to take up examinations Some of them are married, and are with children As they haoe not be per mitted to take examinationsall of them are crying like any thing that I could not tolerate it. They have come all the way from Tamilnadu and Kerala after selling their belongings, such as piece of lands and other properties. And they are spending Rs. 100 every month for rent. This is what has happened there. I was told that they are collecting Rs. 5,000 to Rs. 6,000 for each and every seat. The person

who has started that Institution works in Southern Railway. They are training in tamil and after completing the course all of them will go to Tamilnadu and Kerela. What is the good of it? If they train in Kannada it is all right, but if they train in other languages, it will become commercial. As you are aware, most, of the population consists of SCs/STs and working class. They cannot pay Rs. 5,000 for a single seat. This is what is going on, what is the action you have taken? Why not you take some action against these institutions? You control them; at least some percentage should be reserved to the people of Karnataka.

SRI G. B. SHANKAR RAO.—We have set right all those things. And we have regulated admissions also. This year, there is no scope for such things.

SRI C. M. ARUMUGHAM.—It is a quite good thing. Again I appeal to the Minister to take action on all these things. Also, I appeal to the Minister to bring a comprehensive education Bill in this Session itself. Please do not delay it. I think you have no interest in bringing it. Have you not applied your mind; have you not studied it; don't you have energy, enthusiasm and interest to bring this Bill; what is the reason? When you bring all sundry bills, why can't you bring a Comprehensive Education Bill which will have control through-out the State? It will be a guideline for all institutions.

3-00 P. M.

Sir, I am glad that there is some improvement of late, both in Sri G. B. Shankar Rao and Smt. Nagamma Keshava murthy. The Hon. Menister for Primary and Secondary Educacion is doing a very fine job in the field of Primary education. Yesterday, she has sanctioned some schools and I hope, she will sanction some more schools in other areas of our State. My only appeal to the Government is, not to sanction more than one high school in one taluka. The High Schools must be spread over every part of Karnataka. Smt. Nagammn Keshavmurthy, the Hon. Minister for Primary and Secondary Education is doing fine in meeting the people, hearing them receiving the representations from them and taking a quick action in the matters too. My last appeal to the Government is to have a little soft corner towards Scheduled Caste teachers. The Scheduled Caste teachers in Bhalki are serving under trouble and tension. They are afraid of their lives and property. I request the Government to accommodate them somewhere. I think, they will have less trouble, if they are posted in urban areas. I request the Hon. Minister for Education Sri G. B. Shankar Rao to pay some attention towards the improvement of education, shake up the secretariate, shake up the

department, shake up the Directorate and ask them to do a particular work at particular time. We have M.A.,LLB., Sanskrit Pandit, an educationist as a Minister for Education. Therefore, I request him to do his best fothe student community of this State.

Thank you Sir,

ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಮಾನ್ಯ ಸಭಾಧ್ಯಕ್ಷರೇ, ಪ್ರಾಥಮಿಕ ವಿದ್ಯಾಭ್ಯಾಸ ಮಂತ್ರಿಯವರು ಉನ್ನತ ಶಿಕ್ಷಣ ಮಂತ್ರಿಯವರು ಹಾಗೂ ಯುವಜನ ಮತ್ತು ವಾರ್ತಾ ಮಂತ್ರಿಯವರು ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಪೂರ್ಣ ಸಮ್ಮತಿಯನ್ನು ಕೊಡುತ್ತಾ, ಕೆಲವು ಸಲಹೆಗಳನ್ನು ಸೂಚಿಸಲಿಚ್ಛಿಸುತ್ತೇನೆ. ಮೊದಲನೆಯದಾಗಿ, ಪ್ರಾಥಮಿಕ ಹಾಗೂ ಉನ್ನತ ವಿದ್ಯಾಭ್ಯಾಸ ಖಾತೆ ಕುರಿತ ಕೆಲವು ಸಲಹೆಗಳನ್ನು ಕೊಟ್ಟು ಮಾಡಿರತಕ್ಕ ಕೆಲವು ಕಾರ್ಯಕ್ರಮಗಳನ್ನು ಪ್ರಶಂಸಿಸಲು ಇಚ್ಛಿಸುತ್ತೇನೆ. ಪ್ರಥಮತಃ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸದ ಸಚಿವರನ್ನು ಮತ್ತು ನಮ್ಮ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಹೋದ ವರ್ಷ ಹಿಂದಿನ ವರ್ಷ ಜಿಲ್ಲಾ ನೇಮಕಾತಿ ಸಮಿತಿಗಳು ಇದ್ದವು. ಈಗ್ಗೆ ಎರಡು ವರ್ಷಕ್ಕೆ ಮುಂಚೆ, ಕೆಲವರು ಹೇಳುತ್ತಿದ್ದರು, ಶಾಸಕರು ಏತಕ್ಕೆ ಬೇಕು ? ಮೂರು ಸಾವಿರ ಮತ್ತು ಐದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡು ಬಂದು ಬಿಡುತ್ತಾರೆಂದು ಹೇಳುತ್ತಿದ್ದರು. ಲಂಚ ಕೊಡುವವರನ್ನು ವಿರೋಧಿಸಬೇಕು, ಲಂಚಕ್ಕೆ ಅವಕಾಶ ಕೊಡಬಾರದು ಇಂಥ ಮಾತುಗಳನ್ನು ಆಡುತ್ತಿದ್ದರು ? ನಮಗೂ ಕೂಡ ಕೇಳಿ ಬೇಸರವಾಗುತ್ತಿತ್ತು, ವಿಷಾದವಾಗುತ್ತಿತ್ತು. ಆದರೆ, ಸಾರಿ ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರು ಜಿಲ್ಲಾ ನೇಮಕಾತಿ ಸಮಿತಿಗಳನ್ನು ತೆಗೆದುಹಾಕಿ, ಬೇರೆ ರೂಪದಲ್ಲಿ ಅದಕ್ಕೆ ಕಾನೂನು ತಂದು, ನಾಮಕರಣ ಮಾಡಿದಂತ ಸದಸ್ಯರುಗಳು ಸಮಿತಿಯನ್ನು ಇಲ್ಲದೇ ಈಗ ಉಪಾಧ್ಯಾಯರನ್ನು ನೇಮಕ ಮಾಡುವಂತ ಪದ್ಧತಿಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಇವತ್ತು ಅದೇ ಜನ ಬಂದು ಹೇಳುತ್ತಾರೆ, ಒಂದು ಕಾಸೂ ಖರ್ಚು ಮಾಡುವ ಹಾಗಿಲ್ಲ, ಒಳ್ಳೆಯ ಪದ್ಧತಿಯಲ್ಲಿ ನಮ್ಮ ಮಕ್ಕಳಿಗೆ ಉಪಾಧ್ಯಾಯರ ಕೆಲಸ ಸಿಗುವಂತ ವ್ಯವಸ್ಥೆ ಮಾಡಿದ್ದಾರೆಂದು ಇದಕ್ಕಾಗಿ ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರನ್ನೂ, ನಮ್ಮ ಮುಖ್ಯ ಮಂತ್ರಿಗಳನ್ನು ಪ್ರಶಂಸಿಸಬೇಕಾಗಿದೆ. ಜೊತೆಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಸ್ವಾಮಿ, ತಮ್ಮ ಮುಖಾಂತರ ಪ್ರಾಥಮಿಕ ವಿದ್ಯಾ ಮಂತ್ರಿಗಳಲ್ಲಿ ನನ್ನದೊಂದು ವಿನಂತಿಯನ್ನು ಕೂಡ ಸಲ್ಲಿಸುತ್ತೇನೆ. ಹಿಂದೆ ನಮ್ಮ ಹಳೇ ಮೈಸೂರು ಭಾಗದಲ್ಲಿ ಅಂದರೆ, ಕೋಲಾರ, ತುಮಕೂರು, ಮಂಡ್ಯ ಇನ್ನಿತರ ಜಿಲ್ಲೆಗಳಲ್ಲಿ ಉರ್ದು ಮಾಧ್ಯಮದ ಪ್ರೌಢ ಶಾಲೆಗಳಿರಲಿಲ್ಲ 7ನೇ ತರಗತಿಯವರೆಗೆ ಉರ್ದು ಶಾಲೆಯಲ್ಲಿ ಓದಿ ಪ್ರೌಢ ಶಾಲೆಯ ಮಟ್ಟದಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರೌಢ ಶಾಲೆಗಳಲ್ಲಿ ಓದಿ ತೇರ್ಗಡೆಯಾಗಿ, ಉರ್ದು ಶಾಲೆಗಳಲ್ಲಿ ಉಪಾಧ್ಯಾಯರಾಗುವಂತ ಅವಕಾಶ ಇತ್ತು, ಇತ್ತೀಚೆಗೆ ನನಗೆ ಬಂದಂತ ವರದಿ ಪ್ರಕಾರ ಅಂಥವರಿಗೆ ಉಪಾಧ್ಯಾಯರಾಗಲು ಅವಕಾಶವಿಲ್ಲವೆಂದು ಗೊತ್ತಾಗಿದೆ. ಬಿಜಾಪುರ, ಗುಲ್ಬರ್ಗ ಹಾಗೂ ಬೆಳಗಾಂ ಕಡೆಗಳಲ್ಲಿ ಉರ್ದು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡಿದವರಿಗೆ ಉಪಾಧ್ಯಾಯರಾಗುವಂತ ಅವಕಾಶವಿದೆ. ಹಿಂದೆಲ್ಲಾ ಹಳೆ ಮೈಸೂರು ಭಾಗದಲ್ಲಿ ವ್ಯಾಸಂಗ ಮಾಡಿದವರನ್ನು ಉರ್ದು ಉಪಾಧ್ಯಾಯರಾಗಿ ಆರಿಸಿದ್ದಾರೆ, ಆದ್ದರಿಂದ ಈ ತಾರತಮ್ಯವನ್ನು ತೆಗೆದು, ಹಳೆ ಮೈಸೂರು ಭಾಗದಲ್ಲಿ ಉರ್ದು ಭಾಷೆಯಲ್ಲಿ ಓದಿದಂತ ವಿದ್ಯಾರ್ಥಿಗಳಿಗೆ ಉಪಾಧ್ಯಾಯರಾಗಲು ಅನುಕೂಲವಾಗುವಂತ ಕಾನೂನು ತರಬೇಕೆಂದು ಮಾನ್ಯ ಪ್ರಾಥಮಿಕ ವಿದ್ಯಾ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಸರ್ಕಾರಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಫಲಿತಾಂಶ ಬಂದಿರುವ ಬಗ್ಗೆ, ನಾನು ಕೆಲವಾರು ಕಡೆ ವಿಚಾರಿಸಿದ್ದಕ್ಕೆ, ಸ್ಥಳಾವಕಾಶದ ಅಭಾವ ಇರುವುದನ್ನು ಅನೇಕ ಶಾಲೆಗಳ ಉಪಾಧ್ಯಾಯರು ವ್ಯಕ್ತಪಡಿಸಿದರು. ಮಕ್ಕಳಿಗೆ ಸರದಿಯ ವ್ಯವಸ್ಥೆಯಲ್ಲಿ ಪಾಠಪ್ರವಚನಗಳನ್ನು ಮಾಡುತ್ತಿದ್ದೇವೆ. ಜೊತೆಗೆ ಒಂದೇ ಕೊಠಡಿಯಲ್ಲಿ ಎರಡೆರಡು ತರಗತಿಗಳನ್ನು ಮಾಡಬೇಕಾಗಿದೆ. ಆದ್ದರಿಂದ ಕಡಿಮೆ

---

† Indicates that remarks or speeches have not been revised by the member concerned.

ಪ್ರಮಾಣದಲ್ಲಿ ಫಲಿತಾಂಶ ಬರುವುದಕ್ಕೆ ಕಾರಣವಾಯಿತೆಂದು ಹೇಳುತ್ತಾರೆ. ಆದರೆ ಹೊಸ ಸಿಲಬಸ್ ಬಂದಿದ್ದರಿಂದ ತೊಂದರೆಯಾಯಿತು ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ೭೧ ಪರ್ಸೆಂಟ್ ಬಂದಿದೆ. ಹಾಸನ ಜಿಲ್ಲೆಯಲ್ಲಿ ೧೬ ಪರ್ಸೆಂಟ್ ಬಂದಿದೆ, ಆದರೆ ಹೊಸ ಮೈಸೂರು ಭಾಗದಲ್ಲಿ ೬೮–೭೦ ಪರ್ಸೆಂಟ್ ಫಲಿತಾಂಶ ಬಂದಿದೆ. ಹೊಸ ಸಿಲಬಸ್ ಅವರಿಗೆ ಅನುಕೂಲವಾಗಿದ್ದು ನಮಗೆ ಏತಕ್ಕೆ ಅನುಕೂಲವಾಗಿಲ್ಲ ಎನ್ನುವ ಸಮಸ್ಯೆ ಬರುತ್ತೆ, ಆದ್ದರಿಂದ ಇದನ್ನು ನಾನು ಒಪ್ಪುವುದಿಲ್ಲ ಇತ್ತೀಚೆಗೆ ತಾವು ಸಹ ಡೆಲ್ಲಿಗೆ ಹೋಗಿದ್ದಿರಿ, ಶಾಲಾಕಟ್ಟಡಗಳನ್ನು ಕಟ್ಟಲಿಕ್ಕಾಗಿ ಒಂದು ಸಂಸ್ಥೆ ಮಾಡಿಕೊಂಡು, ಜೀವ ವಿಮಾ ನಿಗಮದಿಂದ ೧೬ ಕೋಟಿ ರೂಪಾಯಿಗಳು, ರಾಜ್ಯ ಸರ್ಕಾರದಿಂದ ಎರಡು ಕೋಟಿ ರೂಪಾಯಿಗಳನ್ನು ಪಡೆದು ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಆದ್ಯತೆ ಕೊಡುವುದು ಒಳ್ಳೆಯದು. ಇಂಥ ಒಂದು ವ್ಯವಸ್ಥೆ ಆಂಧ್ರ ಮತ್ತು ತಮಿಳುನಾಡಿನಲ್ಲಿದೆ. ಇಂಥ ಒಂದು ಪದ್ಧತಿಯನ್ನು ರಾಜ್ಯ ಸರ್ಕಾರದವರು ಜಾರಿಗೆ ತರಬೇಕೆಂದು ಸೂಚನೆ ಕೊಡುತ್ತೇನೆ, ತಾವು ಈಗಾಗಲೇ ಕೊಟ್ಟಿರತಕ್ಕ ಖಾಸಗೀ ಶಾಲೆಗಳಿಗೆ ೫ ವರ್ಷಗಳಿಗೆ ಎರಡೂವರೆ ಕೋಟಿ ರೂಪಾಯಿಗಳು ಗ್ರ್ಯಾಂಟ್ ಕೊಡಬೇಕಾಗುತ್ತದೆ. ಇದೆಲ್ಲಾ ಯೋಚನೆ ಮಾಡಿ ಆದಷ್ಟು ಬೇಗ ಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ ಒಂದು ಕಾರ್ಪೊರೇಷನ್ ತೆರೆಯುತ್ತೀರೆಂಬ ನಂಬಿಕೆ ನನಗೆ ಇದೆ,

ಅಧ್ಯಕ್ಷರೆ, ನಮ್ಮ ಸರ್ಕಾರದ ಪದ್ಧತಿಯ ಪ್ರಕಾರ ಎಲ್ಲಾ ಕಡೆಗಳಲ್ಲೂ ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯಬೇಕು ಎಂದು ಹೇಳುತ್ತಾರೆ. ಅದಕ್ಕೆ ನನ್ನ ವಿರೋಧ ಇಲ್ಲ, ಆದರೆ ಎಲ್ಲಾ ಕಡೆ ಕನ್ನಡ ಮಾಧ್ಯಮ ತರುವುದರಿಂದ ಏನು ತೊಂದರೆಯಾಗುತ್ತದೆ ಎಂದರೆ, ಈಗ ಟೆಕ್ನಿಕಲ್ ಕೋರ್ಸ್, ಮೆಡಿಕಲ್ ಕೋರ್ಸ್, ಎಂ.ಎಸ್.ಸಿ. ಫಿಸಿಕ್ಸ್, ಕೆಮಿಸ್ಟ್ರಿ ಇಂತಹ ಮೇಜರ್ ಸಬ್ಜೆಕ್ಟ್ ತೆಗೆದುಕೊಂಡಂತವರಿಗೆಲ್ಲಾ ಬಹಳ ಅನಾನುಕೂಲವಾಗುತ್ತದೆ. ಕನ್ನಡದಲ್ಲಿ ಓದಲಿಕ್ಕೆ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ, ಒಂದೊಂದು ಸೆಕ್ಷನ್ ಇಂಗ್ಲೀಷ್ ಮೀಡಿಯಂ ತೆಗೆಯಲಿಕ್ಕೂ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ಇಲ್ಲಿ ಕನ್ನಡದಲ್ಲಿ ರಿಪೋರ್ಟ್ ಕೊಟ್ಟಿದ್ದೀರಿ, ಇದೇ ರಿಪೋರ್ಟ್ ಇಂಗ್ಲಿಷ್‌ನಲ್ಲಿಯೂ ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು. ಎಲ್ಲಾ ವಿದ್ಯಾರ್ಥಿಗಳು ಓದಲಿಕ್ಕೆ ಅವಕಾಶವಾಗುತ್ತಿತ್ತು. ಇನ್ನು ಮುಂದೆಯೂ ಕೂಡ ಇಂಗ್ಲಿಷ್ ಮೀಡಿಯಂ ಒಂದೊಂದು ಸೆಕ್ಷನ್ ತೆಗೆಯಬೇಕಾಗುತ್ತದೆ ಎಂದು ಹೇಳುತ್ತೇನೆ. ಈಗ ತೆರೆದಿರತಕ್ಕ ಶಾಲೆಗಳಿಗೆ ಆದಷ್ಟು ಜಾಗ್ರತೆ ಸಿಬ್ಬಂದಿಯನ್ನು ಒದಗಿಸಲು ಏರ್ಪಾಡು ಮಾಡಬೇಕು, ಅದನ್ನು ಮಾಡದೇ ಹೋದರೆ ಸ್ಕೂಲುಗಳಲ್ಲಿ ಸರಿಯಾದಂಥ ಪಾಠ ಪ್ರವಚನಗಳು ನಡೆಯುವುದಿಲ್ಲ. ಇನ್ನೊಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಪ್ರತಿಯೊಬ್ಬ ಉಪಾಧ್ಯಾಯರು ಯಾವ ಶಾಲೆಯಲ್ಲಿ ಪಾಠ ಮಾಡುತ್ತಾರೆ, ಆ ಉಪಾಧ್ಯಾಯರು ಅದೇ ಊರಿನಲ್ಲಿ ವಾಸ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಆ ಉಪಾಧ್ಯಾಯರು ಅದೇ ಊರಿನಲ್ಲಿ ವಾಸ ಮಾಡದೇ ಇದ್ದರೆ ಏನು ತೊಂದರೆ ಆಗುತ್ತದೆ ಎಂದರೆ, ವಿದ್ಯಾರ್ಥಿಗಳಿಗೆ ಅರ್ಥವಾಗದೇ ಇರತಕ್ಕ ವಿಚಾರಗಳನ್ನು ಉಪಾಧ್ಯಾಯರಿಂದ ಕೇಳಿ ತಿಳಿದುಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಉಪಾಧ್ಯಾಯರುಗಳು ಬೇರೆ ಊರಿನಲ್ಲಿ ವಾಸವಾಗಿದ್ದು, ಬಸ್ಸುಗಳಲ್ಲಿ ಅಥವಾ ರೈಲುಗಳಲ್ಲಿ ಶಾಲೆಗೆ ಸಮಯಕ್ಕೆ ಸರಿಯಾಗಿ ಬಂದು ಸಮಯಕ್ಕೆ ಸರಿಯಾಗಿ ಬಸ್ಸುಗಳು ಸಿಕ್ಕುವುದಿಲ್ಲ, ರೈಲು ಸಿಕ್ಕುವುಧಿಲ್ಲ ಎಂದು ಹೊರಟು ಹೋದರ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಯುವುದಿಲ್ಲ. ಆದುದರಿಂದ ಯಾವ ಶಾಲೆಯ ಉಪಾಧ್ಯಾಯರೆ ಆಗಲಿ ಸ್ಕೂಲುಗಳು ಎಲ್ಲಿ ಇರುತ್ತವೆ ಅದೇ ಊರಿನಲ್ಲಿ ವಾಸ ಮಾಡುವಂತೆ ಒಂದು ಕಡ್ಡಾಯವಾದ ಆಜ್ಞೆಯನ್ನು ಹೊರಡಿಸಬೇಕು ಎಂದು ನಾನು ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈಗ ನಮಗೆ ಒಂದು ಸರ್ಕಾರಿ ಸ್ಕೂಲು ಕೊಟ್ಟಿರುವ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಮ್ಮ ಮಾಲೂರು ತಾಲೂಕಿನಲ್ಲಿ ಈಗ ಸುಮಾರು ೪೦೦ ರಿಂದ ೬೦೦ರ ವರೆಗೆ ವಿದ್ಯಾರ್ಥಿನಿಯರ ಸಂಖ್ಯೆ ಇರುವುದರಿಂದ ಮುಂದಿನ ವರ್ಷವಾದರೂ ನಮಗೆ ಒಂದು ಗರ್ಲ್ಸ್ ಹೈಸ್ಕೂಲು ಮಾನ್ಯ ಮಂತ್ರಿಗಳು ಸ್ಯಾಂಕ್ಷನ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನೆಲ್ಲಾ ಮಾನ್ಯ ವಿದ್ಯಾ ಮಂತ್ರಿಗಳು ಈಗಲೇ ತರಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಹೈಯರ್ ಎಜುಕೇಷನ್ ಬಗ್ಗೆ ಹೇಳಬೇಕು ಎಂದರೆ ಬಹಳಷ್ಟು ಸಮಸ್ಯೆಗಳಿವೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು. ತಮಗೆ ೧೦ ನಿಮಿಷ ಮಾತ್ರ ಮಾತನಾಡಲಿಕ್ಕೆ ತಮ್ಮ ಚೀಫ್ ಏಪ್ ಟೈಮ್ ಅಲಾಟ್ ಮಾಡಿ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಪಿ. ಎನ್. ರೆಡ್ಡಿ.—ಉಪಾಧ್ಯಕ್ಷರೆ, ಇವೊತ್ತು ಮೂರು ಜನ ಮಂತ್ರಿಗಳ ಬೇಡಿಕೆ ಬಗ್ಗೆ ಮಾತನಾಡಬೇಕಾಗಿದೆ. ಆದುದರಿಂದ ಇನ್ನು ಹತ್ತು ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ ಅಧ್ಯಕ್ಷರೆ, ಪಿ.ಯು.ಸಿ. ಪರೀಕ್ಷೆ ಪಾಸ್ ಮಾಡಿದಂಥ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಕಾಲೇಜಿಗೆ ಅಪ್ಲಿಕೇಷನ್ ಹಾಕಬೇಕಾದರೆ ೫೦ ಪರ್ಸೆಂಟ್ ಅಂಕಗಳನ್ನು ನಿಗದಿ ಮಾಡಿದ್ದಾರೆ. ಎಸ್.ಸಿ. ಮತ್ತು ಎಸ್.ಟಿ. ಬ್ಯಾಕ್‌ವರ್ಡ್ ಟ್ರೈಬ್‌ಗಳಿಗೆ ತಮ್ಮ ವರದಿಯಲ್ಲಿ ನೋಡಿದರೆ ೪೫ ಪರ್ಸೆಂಟ್ ಎಂದು ಇದೆ. ಇದು ನನಗೆ ಸ್ವಲ್ಪ ಅರ್ಥವಾಗುತ್ತಿಲ್ಲ. ಆದುದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಾವು ಎಷ್ಟು ಪರ್ಸೆಂಟ್ ತೆಗೆದುಕೊಂಡಿದ್ದರೆ ಅಪ್ಲಿಕೇಷನ್ ಹಾಕಬೇಕು ಎನ್ನುವುದು ಅವರಿಗೆ ಅರಿವಾಗುತ್ತಿಲ್ಲ. ಈ ಬಗ್ಗೆ ಕನ್ನಡ ಪತ್ರಿಕೆಗಳಿಗೆ ಒಂದು ಜಾಹಿರಾತು ಕೊಟ್ಟು ಇಂತಿಂಥ ಕೋಮಿನವರು ಇಷ್ಟಿಷ್ಟು ಪರ್ಸೆಂಟ್ ತೆಗೆದುಕೊಂಡಿದ್ದರೆ ಇಂತಿಂಥ ಕೋರ್ಸ್‌ಗಳಿಗೆ ಅಪ್ಲಿಕೇಷನ್ ಹಾಕಿಕೊಳ್ಳಬಹುದು ಎನ್ನುವುದನ್ನು ತಿಳಿಸಬೇಕು. ಇನ್ನು ಹೊಸದಾಗಿ ಟೆಕ್ನಿಕಲ್ ಕಾಲೇಜುಗಳನ್ನು ಓಪನ್ ಮಾಡಿದ್ದೀರಿ ಇದರಿಂದ ಯಾರಿಗೆ ಪ್ರಯೋಜನ ಆಗುತ್ತದೆ ಎನ್ನುವುದನ್ನು ನೋಡಬೇಕು. ಪ್ರೈವೇಟ್ ಕಾಲೇಜುಗಳನ್ನು ಓಪನ್ ಮಾಡುವುದರಿಂದ ಹಳ್ಳಿಯ ರೈತರಿಗೆ ಅದರಿಂದ ಪ್ರಯೋಜನವಾಗುತ್ತದೆಯೇ ಎನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ನೀವು ಗಮನಕ್ಕೆ ತೆಗೆದುಕೊಳ್ಳದೇ ಇದ್ದರೆ ೮೫ ಪರ್ಸೆಂಟ್ ಇರತಕ್ಕ ಹಳ್ಳಿ ರೈತರಿಗೆ ಇದರಿಂದ ಪ್ರಯೋಜನವಾಗುವುದಿಲ್ಲ. ಈಗ ಅಗ್ರಿಕಲ್ಚರಲ್ ಕಾಲೇಜುಗಳು ಏನಿವೆ ಅಲ್ಲಿ ರೈತರ ಮಕ್ಕಳಿಗೆ ೧೦–೨೦ ಮಾರ್ಕ್‌ಗಳನ್ನು ಹೆಚ್ಚು ಹಾಕುವುದು ಇದೆ. ರೈತರ ಮಕ್ಕಳು ೪೦ ಅಂಕಗಳನ್ನು ಪಡೆದಿದ್ದರೆ ೬೦ ಅಂಕಗಳನ್ನು ಕೊಡತಕ್ಕದ್ದು ಇದೆ. ಹಳ್ಳಿಗಳಲ್ಲಿ ಸರಿಯಾದಂಥ ಸ್ಕೂಲು ಬಿಲ್ಡಿಂಗ್ ಇರುವುದಿಲ್ಲ, ಸರಿಯಾದಂಥ ಉಪಾಧ್ಯಾಯರು ಇರುವುದಿಲ್ಲ. ಇದರಿಂದ ಹಳ್ಳಿಯ ಮಕ್ಕಳು ೪೦–೪೫ ಅಂಕಗಳನ್ನು ತೆಗೆದುಕೊಂಡು ಪಾಸ್ ಮಾಡುವುದೇ ಕಷ್ಟವಾಗಿರುತ್ತದೆ. ಈ ರೀತಿ ಇರುವುದರಿಂದ ಹಳ್ಳಿಯಿಂದ ಬಂದವರು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಹೋಗಲಿಕ್ಕೆ ಸಾಧ್ಯವೇ ? ಆದುದರಿಂದ ಇಂತಹ ವಿಚಾರಗಳ ಬಗ್ಗೆ ಸಮಸ್ಯೆಗಳನ್ನು ಬಗೆಹರಿಸಬೇಕಾಗುತ್ತದೆ. ಇವೊತ್ತು ತಾವು ಪ್ರೈವೇಟ್ ಕಾಲೇಜುಗಳನ್ನು ತೆರೆಯಲಿಕ್ಕೆ ಅನುಮತಿ ಕೊಡುತ್ತಿದ್ದೀರಿ. ಅವರು ಕಾಲೇಜುಗಳನ್ನು ತೆರೆಯುವಾಗ ನಾವು ಅವರನ್ನು ಉದ್ಧಾರ ಮಾಡುತ್ತೇವೆ ಇವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಾರೆ. ಇವರುಗಳು ಯಾರೂ ಹಳ್ಳಿಯವರನ್ನು ಉದ್ಧಾರ ಮಾಡುವುದಿಲ್ಲ. ಪ್ರೈವೇಟ್ ಕಾಲೇಜುಗಳಿಂದ ಯಾರಿಗೆ ಅನುಕೂಲವಾಗುತ್ತದೆ ಎಂದರೆ. ಯಾರು ಸಾಹುಕಾರರು ಇರುತ್ತಾರೆ, ಯಾರು ಅಧಿಕಾರದಲ್ಲಿ ಇರುತ್ತಾರೆ ಅಂತಹವರು ೧೦–೧೫ ಸಾವಿರ ರೂಪಾಯಿ ಕ್ಯಾಪಿಟೇಷನ್ ಶುಲ್ಕ ಕೊಟ್ಟು ತಮ್ಮ ಮಕ್ಕಳನ್ನು ಕಾಲೇಜುಗಳಿಗೆ ಸೇರಿಸಲಿಕ್ಕೆ ಅನುಕೂಲವಾಗುತ್ತದೆಯೇ ವಿನಹ ಯಾವ ಹಳ್ಳಿಯ ರೈತರು ೧೦–೧೫ ಸಾವಿರ ರೂಪಾಯಿ ಕ್ಯಾಪಿಟೇಷನ್ ಶುಲ್ಕ ಕೊಟ್ಟು ತಮ್ಮ ಮಕ್ಕಳನ್ನು ಕಾಲೇಜಿಗೆ ಸೇರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಪ್ರೈವೇಟ್ ಕಾಲೇಜುಗಳನ್ನು ತೆರೆಯುವಾಗ ನಾವು ತೆರೆಯುತ್ತಾ ಇರತಕ್ಕದ್ದು ಬಡ ಮಕ್ಕಳಿಗಾಗಿ ಎಂದು ಹೇಳುತ್ತಾರೆ ಅನಂತರ ಅವರ ಕಾಲೇಜುಗಳನ್ನು ಪ್ರಾರಂಭ ಮಾಡಿದ ಮೇಲೆ ನಾವು ಲೆಕ್ಚರರ್‌ಗಳಿಗೆ ಒಂದು ಸಾವಿರ ರೂಪಾಯಿ ಕೊಡಬೇಕು, ಆ ಹಣ ಯಾರು ಕೊಡುತ್ತಾರೆ. ಈಗ ನೀವು ೧೦–೧೫ ಸಾವಿರ ರೂಪಾಯಿ ಕೊಟ್ಟರೆ ನಿಮಗೆ ಅಡ್ಮಿಷನ್ ಕೊಡುತ್ತೇವೆಂದು ಹೇಳುತ್ತಾರೆ. ತಾವು ಸುಮ್ಮನೆ ಪ್ರೈವೇಟ್ ಕಾಲೇಜುಗಳಿಗೆ ಅನುಮತಿ ಕೊಟ್ಟುಕೊಂಡು ಬಂದಿದ್ದೀರಿ. ಇದರಿಂದ ಯಾವ ರೈತ ಮಕ್ಕಳಿಗೂ ಅನುಕೂಲವಾಗುತ್ತಿಲ್ಲ. ಆದ್ದರಿಂದ ತಾವು ಇನ್ನು ಮುಂದೆ ಅನುಮತಿ ಕೊಡಬೇಕಾದರೆ ೨೦ ಪರ್ಸೆಂಟ್ ಸೀಟುಗಳನ್ನು ರೈತರ ಮಕ್ಕಳಿಗೆ ಕೊಡಲೇ ಬೇಕು ಎನ್ನುವ ಒಂದು ನಿಯಮವನ್ನು ಹಾಕಬೇಕೆಂದು ಹೇಳುತ್ತೇನೆ ಇಲ್ಲದೇ ಹೋದರೆ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಮಾಡಿದಂತೆ ಒಂದು ಆಜ್ಞೆ ಮಾಡಿ. ಇಲ್ಲದೇ ಹೋದರೆ ತಾವು ಇಂಜಿನಿಯರಿಂಗ್ ಕಾಲೇಜ್ ಕೊಟ್ಟು ಪ್ರಯೋಜನವಾಗುವುದಿಲ್ಲ. ಹಳ್ಳಿಯಿಂದ ಬರತಕ್ಕ ರೈತ ಮಕ್ಕಳಿಗೆ ೬೦ ಪರ್ಸೆಂಟ್ ನಿಗದಿ ಮಾಡಿದರೆ ಅವರಿಗೆ ಸೀಟುಗಳು ಸಿಕ್ಕುವುದಿಲ್ಲ, ಅವರಿಗೆ ೪೦ ಪರ್ಸೆಂಟ್ ನಿಗದಿ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಹಳ್ಳಿಗಳಲ್ಲಿ ಸರಿಯಾದ ಕಾಲೇಜು ಕಟ್ಟಡಗಳು ಇರುವುದಿಲ್ಲ, ಉಪಾಧ್ಯಾಯರುಗಳಿಂದ ಸರಿಯಾದ ತರಬೇತಿ ಇರುವುದಿಲ್ಲ, ಈ ತರಹ ಅನೇಕ ಸಮಸ್ಯೆಗಳು ಅವರಿಗೆ ಇರುವುದರಿಂದ ಅವರು ಪಾಸ್ ಆಗುವುದೇ ಕಷ್ಟವಾಗಿರುತ್ತದೆ. ಅವರಿಗೆ ೪೦ ಪರ್ಸೆಂಟ್ ಬಂದಿದ್ದರೆ ಅವರು ಅಪ್ಲಿಕೇಷನ್ ಹಾಕಲಿಕ್ಕೆ ಅನುಮತಿ ಮಾಡಿಕೊಡಬೇಕು. ಇಲ್ಲದೇ ಹೋದರೆ ರೈತರ ಮಕ್ಕಳಿಗೆ ಸ್ಪೆಷಲ್ ಮಾರ್ಕ್ ೨೦ ಅಂಕಗಳನ್ನು ಹಾಕುವಂತ ವ್ಯವಸ್ಥೆ ಮಾಡ

ಬೇಕು, ಆ ರೀತಿ ಅಂಕಗಳನ್ನು ಹೆಚ್ಚು ಹಾಕದೇ ಇದ್ದರೆ ೮೫ ಪರ್ಸೆಂಟ್ ಇರತಕ್ಕ ರೈತ ಮಕ್ಕಳಿಗೆ ಅನುಕೂಲ ಮಾಡಲಿಕ್ಕೆ ಆಗುವುದಿಲ್ಲ. ಇನ್ನು ನ್ಯಾಷನಲ್ ಲೋನ್ಸ್ ಸ್ಕಾಲರ್‌ಷಿಪ್ ಏನು ಕೊಡುತ್ತಿದ್ದಾರೆ ಅದರ ಬಗ್ಗೆ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಸ್ವಲ್ಪ ಜಾಸ್ತಿ ಮಾಡಿಸುವುಂತಾದ್ದು ಉತ್ತಮ. ಇನ್ನು ಅಡಲ್ಟ್ ಎಜುಕೇಷನ್ ಮಾಡಿದ್ದೀರಿ, ಅದಕ್ಕೆ ಒಂದು ಡೈರೆಕ್ಟರೇಟ್ ಆಫ್ ಅಡಲ್ಟ್ ಎಜುಕೇಷನ್ ಎಂದು ಇದೆ. ಜೊತೆಗೆ ಕರ್ನಾಟಕ ಸ್ಟೇಟ್ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಎಂದು ಇದೆ. ಅಲ್ಲಿ ಏನು ಮಾಡುತ್ತಿದ್ದಾರೆ ಎನ್ನುವುದೇ ಅರ್ಥವಾಗುವುದಿಲ್ಲ. ಅಲ್ಲಿ ಏನು ನಡೆಯುತ್ತದೆ ಎಂದರೆ, ವರ್ಷಕ್ಕೆ ಒಂದು ಸಾರಿ ಅಡಲ್ಟ್ ಎಜುಕೇಷನ್ ಅದರ ಸಮಾರಂಭ ಏರ್ಪಡಿಸುವುದು ಅಲ್ಲಿಗೆ ಶಾಸಕರನ್ನು ಇತರೆ ಅಧಿಕಾರಿಗಳನ್ನು ಕರೆಸಿ ಅತಿಥಿಗಳನ್ನು ಕರೆಸಿ ಭಾಷಣ ಮಾಡಿಸುವುದು ನಡೆಯುತ್ತದೆ. ಅಲ್ಲಿ ನಿಜವಾದಂಥ ಕಾರ್ಯಕ್ರಮ ಏನು ನಡೆಯಬೇಕು ಆ ರೀತಿಯಲ್ಲಿ ನಡೆಯುವುದಿಲ್ಲ. ಇವೊತ್ತು ೮೦ ಲಕ್ಷ ಇದ್ದಾರೆ ಎಂದು ಹೇಳಿದರೆ, ಅವರು ನಿಜವಾಗಿಯೂ ಖರ್ಚು ಮಾಡುತ್ತಾ ಇರತಕ್ಕಂಥ ಹಣ ಪ್ರತಿಯೊಂದು ಹಳ್ಳಿಗೂ ಖರ್ಚಾಗುತ್ತಿದೆಯೋ ಎನ್ನುವುದನ್ನು ನೋಡಬೇಕಾಗುತ್ತದೆ. ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಅಡಲ್ಟ್ ಎಜುಕೇಷನ್ ಆಫೀಸರ್ ಇರುವುದಿಲ್ಲ. ಎಲ್ಲಿಯೋ ಡಿಸ್ಟ್ರಿಕ್ಟ್‌ನಲ್ಲಿ ಒಂದು ಕಡೆ ಅಡಲ್ಟ್ ಎಜುಕೇಷನ್ ಆಫೀಸರ್ ಇರುತ್ತಾರೆ ಅವರು ಏನು ಮಾಡಲಿಕ್ಕೂ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕಾಗುತ್ತದೆಂದು ಹೇಳುತ್ತೇನೆ. ಈ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಅವರು ಕೆಲವು ಕಾರ್ಯಕ್ರಮಗಳನ್ನು ಹಾಕಿ ಕೊಂಡಿರುತ್ತಾರೆ. ಒಂದೊಂದು ಕಡೆ ಸಂಯುಕ್ತ ವಿದ್ಯಾ ಪೀಠ ತೆಗೆಯಬೇಕೆಂದು ಮಾಡಿರುತ್ತಾರೆ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಕರ್ನಾಟಕ ಸ್ಟೇಟ್ ಎಜುಕೇಷನ್ ಕೌನ್ಸಿಲ್‌ನಲ್ಲಿ ಖಾಸಗಿಯವರು ಇದ್ದರೂ ಅವರಿಗೆ ಒಂದು ಕಾರು ಕೊಡುವುದಿಲ್ಲವೇ ? ಅವರಿಗೆ ಗೌರವಧನ ಕೊಡುವುದಿಲ್ಲವೇ ? ಅವರಿಗೆ ಸಿಬ್ಬಂದಿ ಕೊಟ್ಟಿರುವುದಿಲ್ಲವೇ ?

ಅಲ್ಲಿ ಹೋಗಿ ಇಂಥ ಕಡೆ ಮಾಡಬೇಕು ಎಂದು ಹೇಳಿದರೆ ಅದಕ್ಕೆ ೧೦ ಸಲ ತಿರುಗುವುದಕ್ಕೆ ಟಿ.ಎ.ಡಿ.ಎ. ಕೊಡುವುದಿಲ್ಲವೇ? ಅಥವಾ ರೆವಿನ್ಯೂ ಇಲಾಖೆಯವರು ಜಮೀನಿನ ವಿಷಯವಾಗಿ ಓಡಾಡಬೇಕಾದರೆ ೧೦-೧೨ ಸಲ ತಿರುಗುವುದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ಎಂಬುದನ್ನು ಲೆಕ್ಕ ಹಾಕಿ. ಒಂದು ಸಲ ಪ್ರಪೋಸಲ್ ಇದ್ದರೆ ಅದನ್ನು ಮಾಡುವುದಕ್ಕೆ ಯಾವ ರೀತಿಯಾದರೂ ಪ್ರಯತ್ನ ಮಾಡಬೇಕು. ಒಂದು ಕಡೆ ಅಭಿವೃದ್ಧಿ ಮಾಡುವುದಕ್ಕೆ ಆಸ್ಪದವಿರುವಾಗ ಜನರು ಉತ್ಸಾಹದಿಂದಿರುವಾಗ ಅಂಥ ಕಡೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಕರ್ನಾಟಕ ರಾಜ್ಯ ಅಡಲ್ಟ್ ಎಜುಕೇಷನ್ ಕೌನ್ಸಿಲ್‌ನ ಛೇರ್ಮನ್ನರು ಮತ್ತು ಡೈರೆಕ್ಟರ್‌ರವರು ಬಂದು ಜಮೀನು ನೋಡಿಕೊಂಡು ಹೋಗಿ ರಾಷ್ಟ್ರಾಧ್ಯಕ್ಷರಿಗೆ ಅರ್ಜಿ ಕೂಡ ಕೊಟ್ಟರು. ತಾವು ಬಂದು ಫೌಂಡೇಷನ್ ಹಾಕಬೇಕು, ಅದಕ್ಕೆ ತಾರೀಖನ್ನು ತಾವು ಕೊಡಬೇಕು ಎಂದು ರಾಷ್ಟ್ರಾಧ್ಯಕ್ಷರಿಗೆ ಕೇಳಿ ಕೊಂಡರು. ಇದೆಲ್ಲಾ ಆದಮೇಲೆ ಒಂದು ಜಿಲ್ಲೆಯಲ್ಲಿ ಎರಡು ಮಾಡುವುದು ಬೇಡ, ಇನ್ನೊಂದು ಜಿಲ್ಲೆಯಲ್ಲಿ ಮಾಡೋಣಎಂದು ಬಿಟ್ಟರು. ಇಷ್ಟು ದಿವಸ ಪ್ರಚಾರ ಮಾಡಿ ಕೆಲಸ ಮಾಡದಿದ್ದರೆ ಜನರಿಗೆ ಏನೆಂದು ಉತ್ತರವನ್ನು ಕೊಡುವುದಕ್ಕಾಗುತ್ತದೆ? ಆದ್ದರಿಂದ ಇಂಥ ಸಮಸ್ಯೆ ಬಂದಾಗ ಅಭಿವೃದ್ಧಿ ಕಾರ್ಯಗಳು ಮಾಡುವುದಕ್ಕೆ ಅವಕಾಶ ಇದ್ದರೆ, ಅಲ್ಲಿ ಉತ್ತೇಜನ ಇದ್ದರೆ ಅದನ್ನು ಮಾಡಬೇಕು ಎಂದು ಹೇಳುತ್ತಿದ್ದೇನೆ. ಮಾನ್ಯ ಆಮರ್ನಾಗು ಅವರು ಕೋಲಾರ ಜಿಲ್ಲೆ ಬಗ್ಗೆ, ಕೆ. ಜಿ. ಎಫ್. ಬಗ್ಗೆ ಏನು ಮಾಡಿದ್ದೀರಿ ಎಂದು ಕೇಳಿದರು. ನಾನೂ ಕೂಡ ಅದನ್ನೇ ಕೇಳುತ್ತೇನೆ, ಕೋಲಾರಕ್ಕೆ ಏನು ಮಾಡಿದ್ದೀರಿ? ಒಂದು ಇಂಜನಿಯರಿಂಗ್ ಕಾಲೇಜನ್ನು ಅಲ್ಲಿ ಪ್ರಾರಂಭ ಮಾಡಿದ್ದೀರಾ? ಮೆಡಿಕಲ್ ಕಾಲೇಜ್ ಪ್ರಾರಂಭ ಮಾಡಿದ್ದಿರಾ? ಯಾತಕ್ಕೆ ನಿಮಗೆ ಕೋಲಾರ ಜಿಲ್ಲೆ ಬಗ್ಗೆ ಅನಾಸಕ್ತಿ? ಅಲ್ಲಿಗೆ ಒಂದು ಫಸ್ಟ್ ಗ್ರೇಡ್ ಕಾಲೇಜನ್ನಾದರೂ ಕೊಟ್ಟಿದ್ದೀರಾ? ನಮ್ಮ ಮಾಲೂರು ತಾಲ್ಲೂಕಿಗೆ ಕೊಟ್ಟದ್ದೀರಾ? ಕೋಲಾರ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ ಮತ್ತು ಅದು ಹಿಂದುಳಿದ ಜಿಲ್ಲೆಯಾಗಿರುವುದರಿಂದ ಅಲ್ಲಿಗೆ ಇಂಜನಿಯರಿಂಗ್ ಕಾಲೇಜು ಕೊಡಿ. ಈ ಸಲವಾದರೂ ಮನಸ್ಸು ಮಾಡಿ. ಪ್ರೈವೇಟ್ ಕಾಲೇಜನ್ನು ಕೊಡಬೇಡಿ, ಸರ್ಕಾರೀ ಕಾಲೇಜು ಬೇಕು ನಮಗೆ. ಬಡವರಿಗೆ ಸಹಾಯವಾಗುವಂಥ ಕಾಲೇಜು ಬೇಕು. ನಮ್ಮ ಮಾಲೂರು ತಾಲ್ಲೂಕಿಗೆ ಫಸ್ಟ್ ಗ್ರೇಡ್ ಕಾಲೇಜನ್ನು ಕೊಡಿ. ಇದನ್ನು ಕೊಡುತ್ತೀರಿ ಎಂಬ ಆಸೆಯನ್ನು ನಾನಿಟ್ಟು ಕೊಂಡಿದ್ದೇನೆ. ಇನ್ನು ಯುವಜನಸೇವಾ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಯುವಜನ ಸೇವಾ ಮಂತ್ರಿಗಳು ಯುವಕರು. ಏನೋ ಸ್ವಲ್ಪ ಕೆಲಸ ಮಾಡಬೇಕು ಎಂದು

ಹೊರಟಿದ್ದಾರೆ. ಅವರ ಇಲಾಖೆಯಲ್ಲಿ ಬರೀ ಡಿಸ್ಟ್ರಿಕ್ಟ್ ಯೂತ್ ಸರ್ವೀಸ್ ಆಫೀಸರ್‍ಸ್ ಇದ್ದಾರೆಯೋ ಹೊರತು ತಾಲ್ಲೂಕು ಮಟ್ಟದ ಯೂತ್ ಸರ್ವೀಸ್ ಆಫೀಸರ್‍ಸ್ ಇಲ್ಲ ಈ ಬಗ್ಗೆ ಮಾನ್ಯ ಸಚಿವರಾದ ಗಂಗಾಧರಗೌಡರು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ತಾವು ಅನೇಕ ಯೂತ್ ಕ್ಲಬ್ ಗಳನ್ನು ಮಾಡಿದ್ದೀರಿ ಬಹಳ ಸಂತೋಷದ ವಿಷಯ. ಆದರೆ ಅದಕ್ಕೆ ಸರಿಯಾದ ಮೇಲ್ವಿಚಾರಕರಿರಬೇಕು. ಮತ್ತು ಅವು ಸರಿಯಾಗಿ ಕೆಲಸ ಮಾಡಬೇಕಾದರೆ ಈ ಇಲಾಖೆಯಲ್ಲಿ ತಾಲ್ಲೂಕು ಮಟ್ಟದ ಕಛೇರಿಗಳಿರಬೇಕು. ನ್ಯಾಷನಲ್ ಸರ್ವೀಸ್ ಸ್ಕೀಂ ಏನಿದೆ ಅದು ಕಾಲೇಜಿಗೂ ಸಂಬಂಧಪಡುತ್ತದೆ ಜೊತೆಗೆ ನಿಮ್ಮ ಇಲಾಖೆಗೂ ಸಂಬಂಧಪಡುತ್ತದೆ. ಇದಕ್ಕೆ ಬರೀ ೧೫ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ವಿದ್ಯಾರ್ಥಿಗಳ ಮನಸ್ಸನ್ನು ಸೇವಾ ಮನೋಭಾವಕ್ಕೆ ಒಳಪಡಿಸಿಕೊಳ್ಳಬೇಕಾದರೆ ಇದಕ್ಕೆ ಹೆಚ್ಚು ಉತ್ತೇಜನವನ್ನು ಕೊಡಬೇಕು. ಇದಕ್ಕೆ ಬರೀ ೧೫ ಲಕ್ಷ ರೂಪಾಯಿ ಸಾಲದು. ನಮ್ಮಲ್ಲಿ ಎಷ್ಟೋ ಕಾಲೇಜುಗಳಿವೆ. ಮಹಿಳಾ ಕಾಲೇಜುಗಳೂ ಇವೆ. ಇದಕ್ಕೆಲ್ಲಾ ಒಂದೂವರೆ ಕೋಟಿ ರೂಪಾಯಿಯನ್ನಾದರೂ ಖರ್ಚು ಮಾಡಬೇಕಾಗುತ್ತದೆ. ಸರ್ಕಾರದಿಂದ ಈ ಹಣವನ್ನು ಪಡೆಯಬೇಕಾಗುತ್ತದೆ. ಭಾರತೀಯ ಸೇವಾದಳ ಇದೆ. ಇದಕ್ಕೆ ಹೆಚ್ಚಿನ ಉತ್ತೇಜನ ಕೊಡುತ್ತಿದ್ದೀರಿ. ೫ ಲಕ್ಷ ರೂಪಾಯಿಗಳನ್ನು ಹೋದ ವರ್ಷ ಕೊಟ್ಟಿದ್ದೀರಿ. ಸಂತೋಷ ಇದು ಚೆನ್ನಾಗಿ ಕೆಲಸ ಮಾಡಬೇಕಾದರೆ ಇನ್ನೂ ಹೆಚ್ಚಾಗಿ ಧನಸಹಾಯ ಮಾಡಬೇಕು. ಈ ಬಗ್ಗೆ ಕೇಂದ್ರ ಸಮಿತಿ ಮತ್ತು ರಾಜ್ಯ ಸಮಿತಿಗಳೇನಿವೆ ಇದರಲ್ಲಿ ನಾನ್-ಅಫಿಷಿಯಲ್ಸ್ ಇರಬೇಕಾಗುತ್ತದೆ ಸರ್ಕಾರೀ ಅಧಿಕಾರಿಗಳಿಗೆ ಇದರಲ್ಲಿ ಅವಕಾಶ ಕೊಡಬೇಡಿ. ಸರ್ಕಾರೀ ನೌಕರರು ಇದಕ್ಕೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಾಗುವುದಕ್ಕೆ ಅವಕಾಶ ಕೊಡಬೇಡಿ. ಮತ್ತು ಅದಕ್ಕೆ ಹೆಚ್ಚಿನ ಆರ್ಥಿಕ ಸಹಾಯ ನೀಡಿ ಇನ್ನು ಕುಸ್ತಿ ಪಟುಗಳ ಬಗ್ಗೆ ಹೇಳಬೇಕೆಂದರೆ ಅನೇಕ ಕಡೆಗಳಲ್ಲಿ ೫೦-೬೦ ವರ್ಷ ವಯಸ್ಸಾಗಿರುವ ಕುಸ್ತಿ ಪಟುಗಳಿದ್ದು ಅವರ ಜೀವನಕ್ಕೆ ಕಷ್ಟವಾಗಿದೆ. ಸರ್ಕಾರದವರು ಅವರಿಂದ ಅರ್ಜಿಗಳನ್ನು ತೆಗೆದುಕೊಂಡಿದ್ದಾರೆ. ಅರ್ಜಿ ತೆಗೆದುಕೊಂಡು ಒಂದು ಒಂದೂವರೆ ವರ್ಷವಾಗಿದ್ದರೂ ಅವರಿಗೆ ಸಹಾಯ ನೀಡಿಲ್ಲ. ಆ ಅರ್ಜಿಗಳ ಸಮಾಚಾರ ಏನಾಯಿತು? ಅವರಿಗೆ ಯಾವ ರೀತಿ ಮಾಸಾಶನ ನೀಡುತ್ತೀರಿ ಎಂಬ ಬಗ್ಗೆ ಯೋಚನೆ ಮಾಡಬೇಕು. ದಯವಿಟ್ಟು ಆದಷ್ಟು ಜಾಗ್ರತೆ ಅದನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER,—Please conclude.

ಶ್ರೀ ಪಿ. ಎನ್. ರೆಡ್ಡಿ.—ವಾರ್ತಾ ಇಲಾಖೆಯವರು ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚು ಪ್ರಚಾರ ಮಾಡುತ್ತಿಲ್ಲ. ನಮ್ಮ ಸರ್ಕಾರ ಅನೇಕ ಉತ್ತಮವಾದ ಕೆಲಸಗಳನ್ನು ಮಾಡುತ್ತಿದೆ, ೨೦ ಅಂಶಗಳ ಕಾರ್ಯಕ್ರಮ ಮಾಡುತ್ತಿದೆ. ಕಲೆಗಾರರಿಗೆ ಪ್ರೋತ್ಸಾಹ ನೀಡುತ್ತಿದೆ. ಶಾಸಕರೂ ಸೇರಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಡಾಕ್ಯುಮೆಂಟರಿ ಫಿಲಂ ತೆಗೆದು ಪ್ರಚಾರ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನು ಸಣ್ಣ ಪತ್ರಿಕೆಗಳ ಬಗ್ಗೆ ಹೇಳಬೇಕಾದರೆ ಈ ಸಣ್ಣ ಪತ್ರಿಕೆಗಳಿಗೆ ಸರಿಯಾಗಿ ಜಾಹೀರಾತುಗಳನ್ನು ಕೊಡುತ್ತಿಲ್ಲ ನಾನು Yellow Journal ಗಳಿಗೆ ಪ್ರೋತ್ಸಾಹ ಕೊಡಬೇಡಿ. ಉತ್ತಮ ರೀತಿಯಲ್ಲಿ ನಡೆಯುತ್ತಿರುವ ಸಣ್ಣ ಪತ್ರಿಕೆಗಳಿಗೆ ಸರ್ಕಾರ ಜಾಹೀರಾತಿನ ಮೂಲಕ ಧನ ಸಹಾಯ ಮಾಡಬೇಕು ಎಂದು ಹೇಳಿ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಉಪಾಧ್ಯಕ್ಷರೇ, ಈ ವಿದ್ಯಾಭ್ಯಾಸ ಇಲಾಖೆ ಬೇಡಿಕೆ ಮೇಲೆ ನಾನು ಕೂಲಂಕುಷವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಬಹಳ ವರ್ಷಗಳಿಂದ ವಿದ್ಯಾಭ್ಯಾಸ ಇಲಾಖೆ ಎತ್ತಿನಗಾಡಿಯೋಪಾದಿಯಲ್ಲಿ ನಿಧಾನವಾಗಿ ನಡೆಯುತ್ತಿದೆ. ಈಗ ಕಾಲ ಬದಲಾವಣೆಯಾಗಿದೆ. ಸಮಾಜ ಬದಲಾವಣೆಯಾಗಿದೆ ದೇಶದಲ್ಲಿ ವಿಚಾರಶಕ್ತಿಗಳು ಬದಲಾವಣೆಯಾಗುತ್ತಿವೆ. ಆದರೆ ನಮ್ಮ ವಿಧ್ಯಾಭ್ಯಾಸ ಇಲಾಖೆ. ಅದರ ನೀತಿ, ಅಲ್ಲಿನ ವ್ಯವಹಾರ, ಮತ್ತು ಪಠ್ಯ ಪುಸ್ತಕಗಳೇನಿವೆ ಅದು ಮಾತ್ರ ಹಳೆಯದೇ ಇದೆ. ಹಳೇ ನೀತಿಗಳೇ ಇನ್ನೂ ಇವೆ ಹಳೆಯ ನೀತಿಯ ಆಧಾರಗಳ ಮೇಲೆ ನಾವು ಹೊಸ ಸಮಾಜವನ್ನು ನಿರ್ಮಾಣ ಮಾಡುವುದಕ್ಕಾಗುತ್ತದೆಯೋ ಇಲ್ಲವೇ ಎಂಬ ಬಗ್ಗೆ ಉತ್ತರ ನಿರೀಕ್ಷಿಸಿದರೆ ಉತ್ತರ ಬರುವುದಿಲ್ಲ. ದೇಶ ಬದಲಾವಣೆಯಾಗಿದೆ. ಮುಂದಿನ ಪೀಳಿಗೆ ದೇಶ ಭಕ್ತಿಯಿಂದ. ದೇಶ ಪ್ರೇಮದಿಂದ ಕೆಲಸ ಮಾಡಬೇಕಾಗುತ್ತದೆ. ಇವತ್ತು ಏನು ಗುರಿ ಸಾಧನೆ ಮಾಡಬೇಕು ಅದನ್ನು ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ಎಂದರೆ ವ್ಯವಸ್ಥೆ ಮಾಡಿಲ್ಲ. ಅನೇಕ ಉಪಾಧ್ಯಾಯರು

ಗಳಿದ್ದಾರೆ, ಅದೇ ವ್ಯವಸ್ಥೆ ಇದೆ, ಹೇಳಿದ್ದೇ ಹೇಳುತ್ತಾರೆ. ವಿದ್ಯಾ ಮಂತ್ರಿಗಳೂ ಅದನ್ನು ನೋಡು ತ್ತಿರುತ್ತಾರೆ, ಏನು ಮಾಡಬೇಕು ಎಂಬ ಬಗ್ಗೆ ಹೇಳುವುದಿಲ್ಲ. ಈ ಹಿನ್ನೆಲೆಯಲ್ಲಿ ನಾನುಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಸುಮಾರು ೧೦ ವರ್ಷಗಳ ಹಿಂದೆ ಆರ್ಥಿಕ ತಜ್ಞರೊಬ್ಬರು ಕೇಂದ್ರದಲ್ಲಿ ಮಂತ್ರಿಗಳಾಗಿ ನಿವೃತ್ತಿಯಾದ ಮೇಲೆ ಬೆಂಗಳೂರಿನಲ್ಲಿಬಂದು ಒಂದು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕೆಂದು ಪ್ರಯತ್ನ ಮಾಡಿದರು. ಈಗ ಅದು ಕೆಂಗೇರಿ ಹತ್ತಿರ ಇದೆ. ಅದನ್ನು ಪ್ರಾರಂಭ ಮಾಡಿದಾಗಲೆ ಬಗ್ಗೆ ಬಹಳ ಆಸೆಯಾಯಿತು. ಭ್ರಮೆಯಾಯಿತು, ಭ್ರಾಂತಿಯೂ ಆಯಿತು. ಇದರಿಂದ ಸಮಾಜಕ್ಕೆ ಒಳ್ಳೆಯದಾ ದೀತು, ಅಲ್ಲಿ ವಿದ್ಯಾಭ್ಯಾಸ ಮಾಡತಕ್ಕವಿದ್ಯಾರ್ಥಿಗಳು ಪರಿಣತರಾಗಿ ಮುಂದೆ ಮಾಜ ಸೇವೆ ಮಾಡುವು ದಕ್ಕೆ ಅನುಕೂಲವಾಗುತ್ತದೆ ಎಂಬ ಎಂಬ ವಿಶ್ವಾಸ ಮತ್ತು ನಂಬಿಕೆಯನ್ನು ನಾನಿಟ್ಟುಕೊಂಡಿದ್ದೆ. ಅದು ಪ್ರಾರಂಭವಾಗಿ ೧೦ ವರ್ಷವಾಗಿದೆ. ಆದರೆ ಈಗ ಅಲ್ಲಿನ ವ್ಯವಸ್ಥೆ ನಿರಾಶದಾಯಕವಾಗಿದೆ. ಕಟ್ಟಡ ಗಳನ್ನು ಕಟಿದ್ದಾರೆ. ಎಷ್ಟು ವಿದ್ಯಾರ್ಥಿಗಳು ಅಲ್ಲಿ ತಯಾರಾಗಿದ್ದಾರೆ. ನನಗನ್ನಿಸುತ್ತದೆ. ೧೦ಂಕ್ಕಿಂತ ಮೇಲಾಗಿ ಆಗೇ ಇಲ್ಲ. ಒಂದು ವರ್ಷದಲ್ಲಿ ೯ ಜನ ವಿದ್ಯಾರ್ಥಿಗಳು ಇರುತ್ತಾರೆ. ಅಖಿಲ ಭಾರತ ಮಟ್ಟದಿಂದ ಅವರನ್ನು ಚುನಾಯಿಸಿ ಸೇರಿಸಿಕೊಳ್ಳುತ್ತಾರೆ. ಆದರೂ ಕೂಡ ೯ ಜನ ವಿದ್ಯಾರ್ಥಿಗಳು ಇದ್ದಾರೆ.

೩-೩೦ ಪಿ. ಎಂ.

ಇಲ್ಲಿ ವ್ಯಾಸಂಗ ಮಾಡುತ್ತಿರುವ ೯ ಜನ ವಿದ್ಯಾರ್ಥಿಗಳಿಗೆ ಸುಮಾರು ೨೨ ಲಕ್ಷ ರೂಪಾಯಿಗಳನ್ನು ಪತ್ರಿವರ್ಷವೂ ಸರ್ಕಾರದವರು ಕೊಡುತ್ತಿರುತ್ತಾರೆ. ಇದರಲ್ಲಿ ಎಷ್ಟು ಜನರು ಕೆಲಸ ಮಾಡಿಕೊಂಡಿರು ತ್ತಾರೆಂಬುದನ್ನು ಹೇಳಿದರೆ ತಮಗೆ ದಿಗ್‌ಭ್ರಮೆಯಾಗಬಹುದು. ಇದರಲ್ಲಿ ಇರತಕ್ಕಂಥವರು ಡಾ॥ ಡಿ. ಎಂ. ರಾವ್, ಡಾ॥ ಜಿ. ವಿ. ಕೆ. ರಾವ್, ಡಾ॥ ವಿ. ಕೆ. ಆರ್. ವಿ. ರಾವ್, ಹೀಗೆ ಸೀನಿಯರ್ ಫೆಲೋಸ್ ಎಂದು ಹೇಳತಕ್ಕಂಥವರು ೧೨ ಜನರು ಇದ್ದಾರೆ. ಫೆಲೋಸ್ ಎಷ್ಟು ಜನರು ಇದ್ದಾರೆಂದರೆ ೧೭ ಜನರು ಇದ್ದಾರೆ. ಇವರು ಪ್ರೊಫೇಸರ್ ಹಾಗೆ ಕೆಲಸ ಮಾಡ ತ್ತಿರುತ್ತಾರೆ. ರಿಸರ್ಚ್ ಅಸಿಸ್ಟೆಂಟ್ಸ್ ಆಗಿ ೧೫ ಜನರು ಕೆಲಸ ಮಾಡುತ್ತಿರುತ್ತಾರೆ ೩ ಜನ ರಿಸರ್ಚ ಲಿನಾಲೆಸ್ಟಿಸ್, ಡ್ರಾಫ್ಟ್ಸ್‌ಮೆನ್ ಒಬ್ಬರು, ಟೆಕ್ನಿಕಲ್ ಅಸಿಸ್ಟೆಂಟ್ಸ್ ಮತ್ತು ಫೀಲ್ಡ್ ಇನ್‌ವೆಸ್ಟಿಗೇಟರ್ಸ್ ಎಂದು ಒಟ್ಟಿಗೆ ೧೯ ಜನರು. ಕಾಂಪ್ಯು ಟೇಷನಲ್ ಅಸಿಸ್ಟೆಂಟ್ಸ್ ಎಂದು ೪ ಜನ. ಅನಂತರ ಇಲ್ಲಿ ಇತರೆ ಕೆಲಸ ಮಾಡತಕ್ಕಂಥ ಜನ ೭೦ ಜನರು ಇದ್ದಾರೆ. ಒಟ್ಟಿಗೆ ಸಮಾರು ೩೦೦ ಜನರು ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಎಷ್ಟು ಜನರು ಇದ್ದಾರೆಂದರೆ ಕೇವಲ ೯ ಜನ. ಈ ಸೀನಿಯರ್ ಫೆಲೋಸ್‌ಗೆ ಕಾರಿನ ವ್ಯವಸ್ಥೆ ಮನೆಗಳ ವ್ಯವಸ್ಥೆಯನ್ನೂ ಕೂಡ ಮಾಡಿಕೊಡಲಾಗಿದೆ. ಇವರಿಗೆ ಸಂಬಳ ಕೊಡತಕ್ಕಂಥದ್ದು ಎಷ್ಟು ಎಂದರೆ ಮೂರುಸಾವಿರದಿಂದ ನಾಲ್ಕುಸಾವಿರದವರೆಗೆ ಕೊಡುತ್ತಿರುತ್ತಾರೆ. ಒಟ್ಟು ೧೨ ಲಕ್ಷರೂಪಾಯಿಗಳನ್ನು ಸಂಬಳಕ್ಕಾಗಿಯೇ ಖರ್ಚುಮಾಡುತ್ತಿರುತ್ತಾರೆ. ಇಷ್ಟು ಖರ್ಚು ಮಾಡಿ ಇವರು ಮಾಡಿದ್ದಾದರೂ ಏನು ಎನ್ನುವುದನ್ನು ನಾವು ಪ್ರಸ್ತಾಪ ಮಾಡಪೇಕಾಗುತ್ತದೆ. ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಬದಲಾವಣೆಯಾಗಬೇಕು ಎನ್ನುವ ಉದ್ದೇಶಕ್ಕಾಗಿ, ಈ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಆ ಗುರಿಯನ್ನು ಇವರು ಸಾಧನೆ ಮಾಡಿದ್ದಾರೆಯೇ ಎನ್ನುವುದನ್ನು ಪ್ರಸ್ತಾಪ ಮಾಡಿದರೆ, ಇವರು ಸಾಧನೆ ಮಾಡಿದ್ದು ಏನೂ ಇಲ್ಲ. ಅಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳು ಯಾರ ಎಂದರೆ ಅವರಿಗೆ ಬೇಕಾದಂಥ ವಿದ್ಯಾರ್ಥಿಗಳು ಮಾತ್ರ ವ್ಯಾಸಂಗ ಮಾಡುತ್ತಿರುತ್ತಾರೆ ಇಲ್ಲಿ ಸ್ಯಾಂಪಲ್‌ಗಾಗಿ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್‌ನವನನ್ನು ತೆಗೆದುಕೊಂಡಿದ್ದಾರೆ ಬೇರೆ ಯಾವ ಹುದ್ದೆಗೂ ತೆಗೆದುಕೊಂಡಿಲ್ಲ. ಇವರು ಮಾಡಿದ ಸೋಶಿಯಲ್ ಚೇಂಜ್ ಏನು, ಇವರ ಸಾಧನೆ ಏನು, ಇವರ ನಿರೀಕ್ಷಣೆ, ಏನು ಎಂದರೆ ಯಾರು ರಿಟೈರ್ಡ್ ಆಗಿರುತ್ತಾರೋ ಡಾ॥ ಜಿ. ವಿ. ಕೆ. ರಾವ್, ಡಾ॥ ವಿ. ಕೆ. ಆರ್. ವಿ. ರಾವ್ ಡಾ॥ ಡಿ. ಎಂ. ರಾವ್, ಇವರುಗಳು ಸಮಾಜದ ಒಂದು ಬದಲಾವಣೆಯ ಹೆಸರಿನಲ್ಲಿ ತಮ್ಮ ಒಂದು ಆರ್ಥಿಕ ವ್ಯವಸ್ಥೆಯನ್ನು ಬದಲಾವಣೆ ಮಾಡಿಕೊಳ್ಳುವಸಲು ವಾಗಿ ಈ ಒಂದು ಸಂಸ್ಥೆಯನ್ನು ಮಾಡಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇದಲ್ಲದಕ್ಕೂ ಹಣವನ್ನು ಸರ್ಕಾರದವರು ವ್ಯಯ ಮಾಡುವಾಗ ಅದರಿಂದ ಸರಿಯಾದ ಪ್ರತಿಫಲ ದೊರೆಯದೇ ಹೋದರೆ ಅದನ್ನು ನಾವು ಅಸೆಂಬ್ಲಿಯಲ್ಲಿರತಕ್ಕಂಥವರು ತೆಗೆದುಕೊಂಡು ಅಲ್ಲಿರತಕ್ಕಂಥವರನ್ನೆಲ್ಲ ಹೊಡೆದು ಓಡಿಸ

ಬೇಕು. ಇಂದು ಅಂಥ ಸಂಸ್ಥೆಗಳನ್ನು ಡೀಮ್ಡ್ ಯೂನಿವರ್ಸಿಟಿಯಾಗಿ ಪರಿವರ್ತನೆ ಮಾಡಬೇಕು ಈಗ ಅಲ್ಲಿರತಕ್ಕಂಥವರನ್ನು ನೋಡಿದರೆ ಸೆಕ್ರೆಟರಿ, ಚೀಫ್ ಸೆಕ್ರೆಟರಿಪ್ರೊಫೇಸರ್ ಇವರೆಲ್ಲರಿಗೂ. ಸರ್ಕಾರಕ್ಕೂ ಒಂದು ರೀತಿಯಾದ ಕನೆಕ್ಷನ್ ಇದೆ ಎಂದು ನನಗನಿಸುತ್ತದೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಸರ್ಕಾರಕ್ಕೂ ಅದಕ್ಕೂ ಏನು ಸಂಬಂಧವಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈವತ್ತು ಇಲ್ಲದಿದ್ದರೆ ನಾಳೆ ಬರುತ್ತದೆ. ಈವೊತ್ತು ನಾನು ಹೇಳುತ್ತಿದ್ದೇನೆ ಸರ್ಕಾರದವರು ೨೨ ಲಕ್ಷ ರೂಪಾಯಿಗಳನ್ನು ಏನು ಕೊಡುತ್ತಿದ್ದಾರೆ. ಅದನ್ನು ತಕ್ಷಣ ನಿಲ್ಲಿಸಬೇಕು. ಅವರಿಂದ ಏನು ಸಮಾಜದ ಬದಲಾವಣೆ ಆದದ್ದನ್ನು ನಾವು ನೋಡಿಲ್ಲ. ಅವರಿಂದ ಏನು ಪ್ರಯೋಜನವಾಗಿಲ್ಲ. ರಿಟೈರ್ಡ್‌ಆದವರ ಜೀವನಕ್ಕೋಸ್ಕರವಾಗಿ ಇಷ್ಟೆಲ್ಲ ದುಡ್ಡು ಖರ್ಚುಮಾಡಿ ಸಂಸ್ಥೆಯನ್ನು ಸ್ಥಾಪನೆ ಮಾಡಿ ಅವರ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸತಕ್ಕಂಥದ್ದು ಇದು ಒಂದು ದೊಡ್ಡ ಅಪಚಾರವಾಗುತ್ತದೆ. ಇದನ್ನು ಹಗಲು ದರೋಡೆ ಎಂದು ಹೇಳಿದರೆ ಇದು ಒಂದು ಸಣ್ಣಮಾತೇ ಎಂದು ನನಗನಿಸುತ್ತದೆ. ಯಾರಿಗೋಸ್ಕರ ಉಪಕಾರ ಮಾಡುವುದಕ್ಕೆ ಈ ಸಂಸ್ಥೆಯನ್ನು ಮಾಡಿದ್ದೀರಿ, ಯಾರಿಗೋಸ್ಕರವಾಗಿ ಹಣವನ್ನು ವ್ಯಯಮಾಡುತ್ತಿದ್ದೀರಿ, ದಯಮಾಡಿಟ್ಟು ಸರ್ಕಾರದವರು ಇದನ್ನು ಸೂಕ್ಷ್ಮವಾಗಿ ವಿಚಾರ ಮಾಡಬೇಕು. ಆದಷ್ಟು ಜಾಗ್ರತೆಯಾಗಿ ಇದನ್ನು ತೆಗೆಯಿರಿ. ಬೇಕಾದಷ್ಟು ಶಾಲಾ ಕಾಲೇಜುಗಳನ್ನು ಪ್ರಾರಂಭಮಾಡುವುದು ಇರುತ್ತದೆ. ಬೇಕಾದಷ್ಟು ಶಾಲಾ ಕಾಲೇಜುಗಳಿಗೆ ಹಣವನ್ನು ಖರ್ಚು ಮಾಡುವುದು ಇರುತ್ತದೆ. ಈ ೨೨ ಲಕ್ಷ ರೂಪಾಯಿಗಳನ್ನು ಅವುಗಳಿಗೆ ಖರ್ಚುಮಾಡಿದರೆ ನಾವು ನಿರೀಕ್ಷಣೆ ಮಾಡಿರತಕ್ಕಂಥ ಆರ್ಥಿಕ ಸಾಮಾಜಿಕ ಬದಲಾವಣೆಯನ್ನು ಮಾಡಲು ಸಾಧ್ಯವಾಗುತ್ತದೆ. ಯಾರು ೮೧–೮೫ ಪರ್ಸೆಂಟ್ ಸಮಾಜದಲ್ಲಿ ಹಿಂದುಳಿದಿರುತ್ತಾರೆ ಅವರ ಸ್ಥಿತಿ ಸುಧಾರಣೆಗೆ ಕಾಂಟ್ರಿಬ್ಯೂಷನ್ ಮಾಡಿದರೆ ನಿಜವಾಗಿಯೂ ಕೂಡ ಒಂದು ರೀತಿಯಾದ ಬದಲಾವಣೆಯಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ತೀವ್ರವಾಗಿ ಗಮನಿಸಿ ಆದಷ್ಟು ಜಾಗ್ರತೆಯಾಗಿ ಈ ಒಂದು ಸಂಸ್ಥೆಗೆ ಏನು ಗ್ರಾಂಟನ್ನು ಕೊಡತಕ್ಕಂಥದ್ದು ಇರುತ್ತದೆ ಅದನ್ನು ನಿಲ್ಲಿಸಬೇಕೆಂದು ಮಾನ್ಯ ವಿದ್ಯಾಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಮತ್ತೊಂದು ಮುಖ್ಯವಾದ ವಿಷಯವೇನೆಂದರೆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡತಕ್ಕಂಥ ಸಂದರ್ಭದಲ್ಲಿ ಪ್ರಾರಂಭ ಮಾಡುವ ಹೊತ್ತಿಗೆ ಅಂದರೆ ಪ್ರೈಮರಿಸ್ಕೂಲ್ ಮೆಟ್ರಿಕ್ಯುಲೇಷನ್ ಸ್ಟೇಜ್‌ನಲ್ಲಿಯೇ ಬೈಫರ್‌ಕೇಷನ್‌ಮಾಡಿ ಒಂದು ಪ್ಲಾಟ್‌ಫಾರಮ್, ಒಂದು ವೇದಿಕೆಯನ್ನು ಮಾಡಬೇಕು. ಯಾರು ಎಸ್. ಎಸ್. ಎಲ್. ಸಿ. ಯಲ್ಲಿ ಪಾಸ್‌ಮಾಡಿರುತ್ತಾರೆ ಅವರಿಗೆ ಮುಂದೆ ಯಾವ ಯಾವ ಕೆಲಸದಲ್ಲಿವ ಅವರಿಗೆ ಅಭಿರುಚಿ ಇರುತ್ತದೆ ಅದನ್ನು ಪರೀಕ್ಷೆಮಾಡಿ, ಅದರಲ್ಲಿ ಪ್ರೈಪ್ರೋಟಿ, ಪರೀಕ್ಷೆಯನ್ನು ಮಾಡಿ ಯಾರು ಯಾರಿಗೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಅಭಿರುಚಿ ಇರುತ್ತದೆ, ಲೆಕ್ಚರರ್ ಆಗುವುದಕ್ಕೆ ಇಷ್ಟವಿರುತ್ತದೆ, ಟೆಕ್ನಾಲಜಿಸ್ಟ್ ಆಗುವುದಕ್ಕೆ ಅಭಿರುಚಿ ಇರುತ್ತದೆ. ಯಾರು ಯಾರಿಗೆ ಸರ್ಕಾರವನ್ನು ನಡೆಸಲಿಕ್ಕೆ ಅಭಿರುಚಿ ಇರುತ್ತದೆ, ಸೈಂಟಿಸ್ಟ್ ಆಗುವುದಕ್ಕೆ, ಅಗ್ರಿಕಲ್ಚರಿಸ್ಟ್ ಆಗುವುದಕ್ಕೆ, ಯಾರು ಯಾರಿಗೆ ನ್ಯಾಷನಲ್ ಆಕ್ಟಿವಿಟೀಸ್‌ನಲ್ಲಿ ಪರಿಣತರಾಗುವುದಕ್ಕೆ ಇಷ್ಟವಿರುತ್ತದೆ ಅಂಥವರನ್ನು ಪರೀಕ್ಷೆಮಾಡಿ ಆಯಾ ಬ್ರಾಂಚ್‌ಗೆ ಕಳುಹಿಸಿಕೊಟ್ಟು ವ್ಯಾಸಂಗ ಮಾಡಲು ಸರ್ಕಾರದವರು ವ್ಯವಸ್ಥೆಯನ್ನು ಮಾಡಬೇಕು. ಆ ರೀತಿಯಾದ ಒಂದು ವ್ಯವಸ್ಥೆಯನ್ನು ಮಾಡದೆ ದೊಡ್ಡಿಗಳಲ್ಲಿ ಕುರಿಗಳನ್ನು ತುಂಬಿದ ಹಾಗೆ ತುಂಬಿ ವಿದ್ಯಾಭ್ಯಾಸವನ್ನು ಮಾಡಿಸತಕ್ಕಂಥದ್ದು ಸರಿಯಲ್ಲ. ಇದು ಯಾವ ರೀತಿ ಯಾಗುತ್ತದೆಂದರೆ ಕುರಿಗಳನ್ನು ಊರಿನಿಂದ ಕಾಡಿಗೆ ಹೊಡೆದುಕೊಂಡುಹೋಗಿ ಮತ್ತೆ ಕಾಡಿನಿಂದ ಊರಿಗೆ ಹೊಡೆದುಕೊಂಡು ಬಂದಂತಾಗುತ್ತದೆ. ಆದ್ದರಿಂದ ಇಂಥ ಒಂದು ಪ್ಲಾಟ್‌ಫಾರಮ್ ಮಾಡಿ ಯಾವ ಯಾವ ವಿದ್ಯಾರ್ಥಿಗೆ ಯಾವ ಯಾವ ವಿಷಯದಲ್ಲಿ ಅಭಿರುಚಿ ಇರುತ್ತದೆಂದು ಪರೀಕ್ಷೆಮಾಡಿ ಆಯಾ ಬ್ರಾಂಚ್‌ಗೆ ಕಳುಹಿಸಿ ಕೊಡಬೇಕೆಂಬುದನ್ನು ಸರ್ಕಾರದವರು ತೀರ್ಮಾನಮಾಡಿ ಈ ರೀತಿಯಾದ ವಿದ್ಯಾಭ್ಯಾಸವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರ್ ಆನಂದರಾವ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಮಂತ್ರಿಗಳು. ಶಿಕ್ಷಣ ಇಲಾಖೆಯ ಬೇಡಿಕೆಯನ್ನು ಸದನದ ಮುಂದೆ ಮಂಡಿಸಿದ್ದಾರೆ. ಸುಮಾರು ೧೮೫ ಕೋಟಿ ರೂಪಾಯಿಗಳಿಗೆ ಮೀರಿದಂತಹ ಬಡ್ಜೆಟ್ ಶಿಕ್ಷಣ ಇಲಾಖೆಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಯುವಜನ ಇಲಾಖೆಗೆ ಹಣವನ್ನು ಕೇಳಿದ್ದಾರೆ. ಕಳೆದ ವರ್ಷವೂ ಆಯವ್ಯಯದಲ್ಲಿ

ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದೆವು. ಕಳೆದ ವರ್ಷಕ್ಕಿಂತ ಈ ವರ್ಷ ಸುಮಾರು ೨೦ ಕೋಟಿ ರೂಪಾಯಿ ಹೆಚ್ಚು ಹಣವನ್ನು ಕೇಳಿದ್ದಾರೆ. ಸ್ವಾಮಿ ನಾನು ವಿಧಾನಸೌಧಕ್ಕೆ ಬಂದಮೇಲೆ ಇದು ನನ್ನ ೧೧ನೆಯ ಬಡ್ಜೆಟ್ ಭಾಷಣವಾಗಿದೆ. ೧೦ ಭಾಷಣಗಳನ್ನು ನಾನು ವಿರೋಧಪಕ್ಷದಲ್ಲಿ ಕುಳಿತು ಮಾಡಿದ್ದೇನೆ. ನನಗೆ ಇನ್ನೊಂದು ಭಾಷಣ ಮಾಡುವುದಕ್ಕೆ ಅವಕಾಶ ಸಿಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನನ್ನ ಅನೇಕ ಮಾನ್ಯ ಮಿತ್ರರು ನನ್ನ ಬಡ್ಜೆಟ್ ಭಾಷಣವನ್ನು ಕೇಳಿದ್ದಾರೆ. ಶಿಕ್ಷಣದ ಗುರಿ ಬಗ್ಗೆ, ಶಿಕ್ಷಣದ ವೈಪರೀತ್ಯದ ಬಗ್ಗೆ, ಅದರ ಸವಲತ್ತುಗಳ ಬಗ್ಗೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೆ ಆದರಿಂದ ಏನನ್ನು ವಾಪಸ್ಸು ಪಡೆದಿದ್ದೇವೆ ಅದರ ಬಗ್ಗೆ ವ್ಯಾಪಕವಾಗಿ ನಾವು ಬಡ್ಜೆಟ್ ಭಾಷಣದಲ್ಲಿ ಕೇಳಿದ್ದೇವೆ. ಈ ವಿಷಯಗಳ ಬಗ್ಗೆ ನಾನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಈ ಬಗ್ಗೆ ನಾನಂತೂ ಹೇಳುತ್ತಿದ್ದೇನೆ. ಭಾಷಣ ಕೇಳುವುದಕ್ಕೆ ಚೆನ್ನಾಗಿರುತ್ತದೆಂದು ಕೆಲವರು ಹೇಳುತ್ತಾರೆ. ಆದರೆ ಶಿಕ್ಷಣ ಇಲಾಖೆ ಮಾತ್ರ ಎಲ್ಲಿದೆಯೋ ಅಲ್ಲೇ ಇದೆ. ಅದು ಮುಂದಕ್ಕೆ ಹೋಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರ ಮಾತಿನಲ್ಲಿ ಹೇಳುವುದಾದರೆ ಅವರು ಶಿಕ್ಷಣ ಇಲಾಖೆ ಎತ್ತಿನಗಾಡಿ ತರಹ ಹೋಗುತ್ತಿದೆ ಎಂದು ಹೇಳಿದರು. ಈ ಇಲಾಖೆ ಇಷ್ಟು ಚಾಲನೆ ಇದ್ದರೂ ಕೂಡಾ ನಾನು ಬಹಳ ಸಂತೋಷ ಪಡುತ್ತಾ ಇದ್ದೆ. ಆ ವೇಗದಲ್ಲೂ ಈ ಇಲಾಖೆ ಹೋಗುತ್ತಿಲ್ಲ. ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ, ಈ ಇಲಾಖೆ ಹೊಸದಾಗಿ ಬಣ್ಣವನ್ನು ಬಳಿದಂತಹ ಹಳೆಯ ಬಸ್ಸಿನಲ್ಲಿ ಚಾಲಕ ಕುಳಿತು ಅದನ್ನು ಸ್ಟಾರ್ಟ್ ಮಾಡಿದಾಗ ಅದರಿಂದ ಹೇಗೆ ಜೋರಾಗಿ ಶಬ್ದ ಬರುತ್ತದೆ ಆದನ್ನು ಕೇಳುತ್ತಾ ಆ ಚಾಲಕ ಬಸ್ ಹೋಗುತ್ತಿದೆ ಎಂದು ಹೇಗೆ ಭ್ರಮೆ ಪಟ್ಟುಕೊಳ್ಳುತ್ತಾನೋ ಆ ವೇಗದಲ್ಲಿ ಇದು ಹೋಗುತ್ತಿದೆ. ಅದರ ಶಬ್ದ ಮಾತ್ರ ಜೋರು ; ಬಸ್ ಮಾತ್ರ ನಿಂತಲ್ಲೇ ನಿಂತಿರುತ್ತದೆ.

ಶ್ರೀ ಜಿ.ಬಿ. ಶಂಕರ್‌ರಾವ್.—ಗಾಡಿಯನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಗಾಡಿ ಮುಂದಕ್ಕೆ ಹೋಗುವುದಿಲ್ಲ, ಶಬ್ದ ಮಾತ್ರ ಜೋರು. ಈ ಒಂದು ಬಸ್ಸಿನ ವೇರ್ ಅಂಡ್ ಟೇರ್‌ಗೆ ನಾವು ಪ್ರತಿವರ್ಷವೂ ಸುಮಾರು ೨೦ ಕೋಟಿ ರೂಪಾಯಿಗಳನ್ನು ಹೆಚ್ಚು ಕೊಡುತ್ತಿದ್ದೇವಷ್ಟೇ. ಆದರೆ ಹಳೇ ಬಸ್ ಅಲ್ಲೇ ಇದೆ. ಆ ಬಸ್ ಎತ್ತಿನಗಾಡಿಯ ವೇಗದಲ್ಲಿ ಹೋಗಿದ್ದಿದ್ದರೆ ತುಂಬಾ ಸಂತೋಷವಾಗುತ್ತಿತ್ತು. ಇದರ ಬಗ್ಗೆ ಯಾವ ರೀತಿ ವಿಚಾರ ಮಾಡಬೇಕೋ ನನಗೆ ಗೊತ್ತಿಲ್ಲ ಸ್ವಾಮಿ. ಮೊದಲನೆಯದಾಗಿ, ಶಿಕ್ಷಣ ಎಂಬುದು ಪಕ್ಷಾತೀತವಾದ ಒಂದು ವಿಷಯ. ಆಡಳಿತ ಪಕ್ಷದಲ್ಲಿ ಇರಲಿ, ವಿರೋಧಪಕ್ಷದಲ್ಲಿ ಇರಲಿ, ಇದು ಮೂಲಭೂತವಾಗಿ ಅವಶ್ಯ ಇದೆ. ಇದರ ಬಗ್ಗೆ ಅನೇಕರು ಚಿಂತನೆ ಮಾಡಿದ್ದಾರೆ ; ಮಾಡುತ್ತಿದ್ದಾರೆ. ಆದರೆ ೩೦ ವರ್ಷಗಳು ಕಳೆದರೂ ಕೂಡಾ ನನ್ನ ದೃಷ್ಟಿಯಲ್ಲಿ ಶಿಕ್ಷಣ ಇಲಾಖೆ ಎಲ್ಲಿದೆಯೋ ಅದು ಅಲ್ಲೇ ಇದೆ. ಮುಂದಕ್ಕೆ ಹೋಗಿಯೇ ಇಲ್ಲ.

ಶ್ರೀ ಜಿ.ಬಿ. ಶಂಕರ್‌ರಾವ್.—ನಾವು ಅದೇ ಗಾಡಿಯಲ್ಲಿ ಕುಳಿತಿದ್ದೇವೆ.

† ಶ್ರೀ ಮಳ್ಳೂರು ಆನಂದರಾವ್.—ಪ್ರತಿಯೊಬ್ಬರೂ ಅದೇ ಗಾಡಿಯಲ್ಲಿ ಕುಳಿತಿದ್ದಾರೆ. ಮಾನ್ಯ ಶಂಕರರಾಯರು ಆ ಗಾಡಿಯನ್ನು ಒಂದು ವರ್ಷದಿಂದಲೂ ನಡೆಸುತ್ತಿದ್ದಾರೆ. ಆದರೆ ಅದು ಮಾತ್ರ ಮುಂದಕ್ಕೆ ಹೋಗಿಲ್ಲ. ಅವರು ಅದು ಮುಂದಕ್ಕೆ ಹೋಗುತ್ತಿದೆಯೆಂದು ತಿಳಿದುಕೊಂಡಿದ್ದಾರೆ. ಈ ಬಗ್ಗೆ ನಾನು ಮಾನ್ಯ ಶಂಕರ್‌ರಾವ್ ಅವರನ್ನು ಅಪರಾಧಿಗಳನ್ನಾಗಿ ಮಾಡುವುದಿಲ್ಲ. ಸರ್ಕಾರದ ಮೇಲೆ ನಾನು ತಪ್ಪನ್ನು ಹೊರಿಸುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಕೇಳುವುದನ್ನು ಮಾತ್ರ ನಿಲ್ಲಿಸುವುದಿಲ್ಲ. ಅದೂ ಅಲ್ಲದೆ ಬಡ್ಜೆಟ್ ಮೇಲೆ ಭಾಷಣ ಮಾಡುವುದರಿಂದಲೇ ನನ್ನ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಈ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ. ಮಾನ್ಯ ಶಂಕರರಾಯರು ಈ ಬಗ್ಗೆ ಉತ್ತರ ಕೊಡುವುದಾದರೆ ನನಗೆ ತುಂಬಾ ಸಂತೋಷ. ಹಿಂದೆ ನಾವು ಈ ಇಲಾಖೆಗೆ ಸುಮಾರು ೧೬೦ ಕೋಟಿ ಚಿಲ್ಲರೆ ಹಣವನ್ನು ಕೊಟ್ಟೆವು. ಅದನ್ನು ಏನು ವಾಪಸ್ಸು ಕೊಟ್ಟರೇ? ನಮ್ಮ ಬಡ್ಜೆಟ್ಟಿನಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಹಣವನ್ನು ನಾವು ಶಿಕ್ಷಣ ಕ್ಷೇತ್ರಕ್ಕೆ ವೆಚ್ಚ ಮಾಡುತ್ತಿದ್ದೇವೆ. ಶಿಕ್ಷಣದಿಂದ ನಾವು ಏನು ಸಾಧನೆ ಮಾಡಿದ್ದೇವೆ ? ಯಾವ ಅವಶ್ಯಕತೆಯನ್ನು ಪೂರೈಸಿದ್ದೇವೆ ? ಇದನ್ನು ವಿವರಿಸುವುದಕ್ಕೆ ಹೋಗುವುದಿಲ್ಲ. ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ನಿಂತು ಸಮಾಜವನ್ನು ನಡೆಸತಕ್ಕ ಯಾವ ವ್ಯಕ್ತಿಯನ್ನು ಶಿಕ್ಷಣ ಇಲಾಖೆ ತಯಾರು ಮಾಡಿದೆ? ಸಾಮಾಜಿಕ ಅವಶ್ಯಕತೆಗಳನ್ನು

ಪೂರ್ತಿ ಮಾಡಲಾಗಿದೆಯೋ ? ವೈಯುಕ್ತಿಕವಾಗಿ ವ್ಯಕ್ತಿಯ ಆಶೋತ್ತರಗಳನ್ನು ಪೂರ್ಣ ಮಾಡಲಾಗಿದೆಯೇ ? ಸ್ವಾವಲಂಭಿ ಶಿಕ್ಷಣ ಆಗಿದೆಯೇ ? ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ತಾವು ಕಲಿತ ಮೇಲೆ ತಮ್ಮ ಕಾಲಮೇಲೆ ನಿಲ್ಲತಕ್ಕ ಶಿಕ್ಷಣದ ವ್ಯವಸ್ಥೆಯನ್ನು ಮಾಡಲಾಗಿದೆಯೇ ? ಈ ಪ್ರಶ್ನೆಗಳನ್ನು ನಾನು ಹತ್ತಾರು ವರ್ಷಗಳಿಂದ ಕೇಳುತ್ತಿದ್ದೇನೆ. ಹಾಗಿದ್ದರೆ ಶಿಕ್ಷಣ ಕ್ಷೇತ್ರದ ಗುರಿ ಏನು ? ದುಡ್ಡನ್ನು ತೆಗೆದುಕೊಳ್ಳುವುದೇ ಇದರ ಗುರಿಯೇ ? ನಿರುಪಯುಕ್ತವಾದ ಶಿಕ್ಷಣವನ್ನು ವರ್ಷೇವರ್ಷೇ ಕೊಡುವುದಷ್ಟೇ ಶಿಕ್ಷಣದ ಗುರಿಯೇ ? What is the outcome ? ಇದು ಶಿಕ್ಷಣದ ಮೂಲ ಭೂತವಾದ ಪ್ರಶ್ನೆ : ಹತ್ತಾರು ವರ್ಷಗಳಿಂದ ಇದು ಆಗಲಿಲ್ಲ. ಇದಕ್ಕೆ ಯಾರೂ ಉತ್ತರವನ್ನು ಕೊಡುವುದಿಲ್ಲ. ೧೯೬೪ರಲ್ಲಿ ಕೊಠಾರಿಯವರ ವರದಿ ವಿದ್ಯಾಭ್ಯಾಸದ ಮೇಲೆ ಹೊರಗೆ ಬಂತು. ಅವರು ಒಂದು ರಾಷ್ಟ್ರದ ಭವಿಷ್ಯ ನಿರ್ಮಾಣ ಆಗತಕ್ಕದ್ದು ಶಾಲೆಯ ಕಟ್ಟಡದಲ್ಲಿ ಎಂದು ಹೇಳಿದ್ದಾರೆ. ಇವತ್ತು ನಮ್ಮ ದೇಶ ಸಾಮಾಜಿಕ ಕ್ಷೇತ್ರದಲ್ಲಿ, ವೈಜ್ಞಾನಿಕ ಕ್ಷೇತ್ರದಲ್ಲಿ ಮುಂದುವರೆಯಬೇಕಾದರೆ, ಅದನ್ನು ನಿರ್ಮಾಣ ಮಾಡತಕ್ಕವರು ಯಾರು ? ಇದರ ಮೂಲ ಶಿಕ್ಷಣ ಶಾಲಾ ಕಟ್ಟಡದಲ್ಲಿ ಆಗಬೇಕೆಂದು ನಾನು ಹೇಳುತ್ತೇನೆ. ನಾವು ಮಕ್ಕಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಎಂದರೆ ಶಿಕ್ಷಣ ಇಲಾಖೆಯು ಶಾಲಾ ಕಾಲೇಜುಗಳು ಇಂತಹ ವ್ಯಕ್ತಿಗಳನ್ನು ಪ್ರತಿ ವರ್ಷವೂ ನಿರ್ಮಾಣ ಮಾಡತಕ್ಕ ಕೇಂದ್ರಗಳಾಗಬೇಕು. ಈ ದೃಷ್ಟಿಯಿಂದ ಅಳತೆಗೋಲು ಇಲ್ಲದೇ ಮಾಡಿದರೆ ಇವತ್ತು ನಮ್ಮ ಶಿಕ್ಷಣ ಫಲಪ್ರದವಾಗುತ್ತದೆಯೇ ? ಇದು ಮೂಲಭೂತವಾದ ಪ್ರಶ್ನೆ. ನಾನು ಈ ಬಗ್ಗೆ ಪ್ರತಿವರ್ಷವೂ ಹೇಳಿದ್ದೇನೆ. ಇದರಿಂದ ಸಮಾಜಕ್ಕೂ ಉಪಯುಕ್ತ ಇಲ್ಲ. ಹೊರಗಡೆ ಬರತಕ್ಕ ಪ್ರಾಡಕ್ಟ್ಸ್ ಎಂದರೆ ಶಿಕ್ಷಣ ಪಡೆದು ಹೊರಗೆ ಬರತಕ್ಕ ಪದವೀಧರರು, ವೈದ್ಯರು ಎಂಜಿನಿಯರ್‌ಗಳು. ಸಮಾಜದಲ್ಲಿ ನಿಂತು ಜೀವನ ಮಾಡತಕ್ಕ ಕನಿಷ್ಟವಾದ ಗುಣಗಳನ್ನು ಬೆಳೆಸಿಕೊಂಡು ಹೊರಬರುತ್ತಿದ್ದಾರೆಯೇ ? ನಾನು ವಿದ್ಯಾರ್ಥಿಗಳು ಮಹಾತ್ಮಾ ಗಾಂಧಿಯವರ ತರಹ ಆಗಬೇಕೆಂದು ಹೇಳುತ್ತಾ ಇಲ್ಲ. ರಾಮಕೃಷ್ಣ ಪರಮಹಂಸರಂತೆ, ಸ್ವಾಮಿ ವಿವೇಕಾನಂದ ಅವರಂತೆ, ದಯಾನಂದ ಸರಸ್ವತಿಯವರಂತೆ ಇವರು ಆಗಬೇಕೆಂದೇನೂ ಹೇಳುತ್ತಾ ಇಲ್ಲ. Are we producing such students to-day ? Have we succeeded in bringing such students apart from results ? These are the questions that stand before us un-answered. ಈಗಲೂ ಅದೇ ರೀತಿ ಇದೆ. ನಾವು ನೆನೆಸಿದಂತೆ ಆಗಲಿಲ್ಲ. ಮತ್ತೆ ಹಣ ಮಾತ್ರ ಖರ್ಚಾಗುತ್ತಾ ಇದೆ. ಇನ್ನೊಂದು ಆಶ್ಚರ್ಯವೇನೆಂದರೆ, ಈ ಒಂದು ಇಲಾಖೆಯ ಹೊಣೆಯನ್ನು ಹೊತ್ತುಕೊಳ್ಳುವುದಕ್ಕೆ ಯಾರೂ ಮುಂದೆ ಬರುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಶಂಕರರಾಯರು ಏನು ಉತ್ತರವನ್ನು ಕೊಡುತ್ತಾರೆ ? ''ನಾನು ಏನು ಮಾಡಲಿ ?'' ಎಂದು ಅವರು ಹೇಳುತ್ತಾರೆ. ಶಿಕ್ಷಣ ತಜ್ಞರ ಬಗ್ಗೆ ಹೇಳುತ್ತಾರೆ. ನಾನು ಮಾನ್ಯ ಸುಬ್ಬಯ್ಯಶೆಟ್ಟಿಯವರ ಉತ್ತರವನ್ನೂ ಹಿಂದೆ ಕೇಳಿದ್ದೇನೆ, ಈ ಬಗ್ಗೆ ಶಿಕ್ಷಣ ತಜ್ಞರನ್ನು ಕೇಳಿ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ಅವರು ''ನಮ್ಮ ಮಾತನ್ನು ಯಾರು ಕೇಳುತ್ತಾರೆ ? ಸರ್ಕಾರ ಇದೆ, ನೀವು ಶಾಸಕರಿದ್ದೀರಿ, ಹಣ ಕೊಡುವವರು ನೀವು, ಮಂತ್ರಿ ಮಂಡಲ ಇದೆ, ಶಿಕ್ಷಣ ಇಲಾಖೆಗೆ ಹಣ ಕೊಡುವವರು ನೀವು. ನೀವು ಮಾಡಿ'' ಎಂದು ಹೇಳುತ್ತಾರೆ. ಪರಮೋಚ್ಛ ವೇದಿಕೆ ಇದು, ಇಲ್ಲಿ ನಾನು ಹೇಳುತ್ತಾ ಬಂದಿದ್ದೇನೆ. ಆದರೂ ಆಗಲಿಲ್ಲ. ಇದರಲ್ಲಿ ಒಬ್ಬೊಬ್ಬರೂ ಹೊಣೆಗಾರರೇ. ಆ ಬಗ್ಗೆ ಶಂಕರರಾಯರನ್ನು ಕೇಳಿದರೆ, ಅವರು ಶಿಕ್ಷಣ ತಜ್ಞರನ್ನು ಕೇಳಿ ಎಂದು ಹೇಳುತ್ತಾರೆ; ಶಿಕ್ಷಣ ತಜ್ಞರನ್ನು ಕೇಳಿದರೆ ಅವರು ಪೊಲಿಟೀಶಿಯನ್ಸ್ ಮೇಲೆ ಎಂದರೆ ನಮ್ಮ ಮೇಲೆ ಎಂದರೆ ಜನತೆಯ ಮೇಲೆ ಹಾಕುತ್ತಾರೆ. ಕಡೆಯದಾಗಿ ಏನಾಯಿತು ? What is the total Balance? ನಾವು ಹೇಳಿದ್ದೆಲ್ಲಾ ಆಯಿತು, ಒಂದೇ ಮಾತಿನಲ್ಲಿ ಹೇಳುವುದಾದರೆ, ಇವತ್ತು ಅಪೇಕ್ಷಿತ ಬೆಲೆ ಕೊಡಲಿಲ್ಲ. ಮಾನ್ಯ ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದರು, ನಾವೆಲ್ಲ ರಾಜಕಾರಣಿಗಳೂ, ಶಿಕ್ಷಣ ತಜ್ಞರೂ ಇಬ್ಬರೂ ಕುಳಿತುಕೊಂಡು ಯೋಚನೆ ಮಾಡತಕ್ಕಂತಹ ಸಂಧಿಕಾಲ ಪ್ರಾಪ್ತ ಆಗಿದೆ ಎಂದು. ಸಮಾಜ ನಿಂತಕಡೆಯೇ ನಿಂತಿರುವುದಿಲ್ಲ. It is dynamic, ಸಮಾಜ ಬದಲಾವಣೆ ಆಗುತ್ತಾ ಇರುತ್ತದೆ. ಯುವಕರಲ್ಲಿ ಹೊಸ ಹೊಸ ಚಿಂತನೆಗಳು ಬರುತ್ತಾ ಇವೆ. ಜೀವನ ಮೌಲ್ಯಗಳಲ್ಲಿ ಬದಲಾವಣೆಯಾಗಬೇಕಾಗಿದೆ. Only Society is dynamic, every minute it is changing. ೨೦ನೇ ಶತಮಾನದ ಕೊನೆಗೆ ನಾವು ಬಂದಿದ್ದೇವೆ. ಯುವ ಜನಾಂಗದಲ್ಲಿ ಬೇಕಾದಷ್ಟು ಬದಲಾವಣೆಗಳು ಬಂದಿವೆ ; ಬರುತ್ತಾ ಇವೆ. ಸಮಾಜದಲ್ಲಿನ ಒಂದು ಬದಲಾವಣೆಗೆ ಅನುಗುಣವಾದ

ಒಂದು ಬದಲಾವಣೆ ಶಿಕ್ಷಣ ಕ್ಷೇತ್ರದಲ್ಲಿ ಬರುತ್ತಾ ಇದೆಯೇ ? ಇದು ಪ್ರಶ್ನೆ ಇದೆ. ಸಮಾಜದಲ್ಲಿ ಬದಲಾವಣೆಯಾಗುತ್ತಿರತಕ್ಕಂತಹ, ಯುವಜನಾಂಗದಲ್ಲಿ ಬದಲಾವಣೆಯಾಗುತ್ತಿರತಕ್ಕಂತಹ ಮನೋ ವೃತ್ತಿಗೆ ಅವಶ್ಯವಾಗಿ ಒಪ್ಪತಕ್ಕ ಶಿಕ್ಷಣವನ್ನು ಕೊಡುವುದಕ್ಕೆ ಒಂದು ಒಳ್ಳೆಯ ಬದಲಾವಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಇರತಕ್ಕ ತಜ್ಞರು, ಶಿಕ್ಷಣದಲ್ಲಿ ಆಸಕ್ತಿ ಇರತಕ್ಕಂತಹ ನಾವುಗಳು ಇದನ್ನು ವಿಚಾರ ಮಾಡುತ್ತಿದ್ದೇವೆಯೇ ? ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗೆ ತಕ್ಕಂತೆ ಶಿಕ್ಷಣದಲ್ಲಿ ಬದಲಾವಣೆ ಆಗಬೇಕು. ಭಾರತೀಯ ಪರಂಪರೆಯಲ್ಲಿ ಒಂದು ಸೋಶಿಯಲ್ ಚೇಂಜಸ್ ಆಗಬೇಕಾಗಿದೆ. ಅದನ್ನು ತರತಕ್ಕ, ಸಾಮಾಜಿಕ ಬದಲಾವಣೆ ತರತಕ್ಕ ಒಂದು ಸಾಧನೆ ಶಿಕ್ಷಣದಲ್ಲಿ ಆಗಬೇಕು.

ನಮ್ಮ ಸಾಮಾಜಿಕ ಅವಶ್ಯಕತೆಗಳ ಬಗ್ಗೆ ನಾವು ಭಾಷಣದಲ್ಲಿ ಹೇಳುತ್ತೇವೆ. ಬಡವರ ಬಗ್ಗೆ ಹಿಂದುಳಿದವರ ಬಗ್ಗೆ ಸಾಮಾಜಿಕ ಕ್ರಾಂತಿಯ ಬಗ್ಗೆ ವಿಚಾರ ಮಾಡುತ್ತೇವೆ, ಈ ವಿಚಾರ ಕ್ರಾಂತಿಯನ್ನು ತರತಕ್ಕಂತಹ ವ್ಯಕ್ತಿಗಳನ್ನು ನಿರ್ಮಾಣ ಮಾಡಬೇಕು. ಯಾರು ನಿರ್ಮಾಣ ಮಾಡಬೇಕು ? ಇಂತಹ ವ್ಯಕ್ತಿಗಳನ್ನು ನಿರ್ಮಾಣ ಮಾಡತಕ್ಕಂತಹ ಕೇಂದ್ರ ಯಾವುದು ? It is educational Institutions. ಇಂತಹ ಒಂದು ಕೆಲಸವನ್ನು ಶಾಲಾ ಕಾಲೇಜುಗಳು ಮಾಡುತ್ತಿವೆಯೇ ಎನ್ನುವುದು ನನ್ನ ಪ್ರಶ್ನೆ ? ಸಾಮಾಜಿಕ ಬದಲಾವಣೆಯನ್ನು ಮಾಡಬೇಕೆಂದು ಅಪೇಕ್ಷೆ ಪಡುತ್ತೇವೆ. ಅದನ್ನು ತರತಕ್ಕಂತಹ ಶಿಕ್ಷಣವನ್ನು ರೂಪಿಸುವಂಥಾ ಶಕ್ತಿ ನಮ್ಮಲ್ಲಿದೆಯೇ. ಸಾಮಾಜಿಕ ಬದಲಾವಣೆಗೆ ಅನುಕೂಲವಾಗು ವಂತಹ ವ್ಯಕ್ತಿಗಳನ್ನು ಒಂದಲ್ಲ ಒಂದು ರೀತಿಯಲ್ಲಿ ತಯಾರು ಮಾಡುತ್ತಿದ್ದೇವೆಯೇ, ಇದು ದುರ್ದೈವ. ಇಂತಹ ಯಾವುದೇ ಕಾರ್ಯ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿಲ್ಲ. ಇವತ್ತು ಆಗಿರುವುದು ನಮ್ಮ ಪರೀಕ್ಷಾ ಕೇಂದ್ರ ಮತ್ತು ಶಿಕ್ಷಣ ಕೇಂದ್ರಗಳು It is examination oriented. ಬಡ್ಜೆಟ್ ಪುಸ್ತಕದಲ್ಲಿ ಬಹಳಷ್ಟು ವಿಷಯಗಳನ್ನು ಕೊಟ್ಟಿದ್ದಾರೆ. ನಾನು ಅದನ್ನು ಹೆಚ್ಚಿಗೆ ಓದಲಿಕ್ಕೆ ಹೋಗಲಿಲ್ಲ, ಏಕೆಂದರೆ ಇದು ಪ್ರತಿ ವರ್ಷ ಬರುತ್ತಾ ಇರುತ್ತದೆ. ನಾನು ೧೦ ವರ್ಷಗಳ ಬಡ್ಜೆಟ್ ಪುಸ್ತಕಗಳನ್ನು ಇಟ್ಟಿದ್ದೇನೆ. ಈ ಪುಸ್ತಕವನ್ನು ವಿದ್ಯಾ ಇಲಾಖೆಯವರು ತಯಾರು ಮಾಡುತ್ತಾರೆ. ಇದರಲ್ಲಿ ಸ್ವಲ್ಪ ಅಂಕಿ ಅಂಶಗಳು ಬದಲಾವಣೆ ಇರುತ್ತದೆ, ಒಂದೆರಡು ರೀತಿನೀತಿಗಳು ಬೇರೆ ಇರುತ್ತದೆ ಇದನ್ನು ನಮ್ಮ ಸಮಾಧಾನಕ್ಕೋಸ್ಕರ ಕೊಡುತ್ತಾರೆ. ಅವರು ಕೊಡುತ್ತಾರೆ, ಇದು ಸಾಗುತ್ತದೆ, ಹೀಗೆ ನಡೆದಿದೆ. ಇದನ್ನು ಪರಿಶೀಲನೆ ಮಾಡಿ ನೋಡಿದರೆ ಎಷ್ಟು ಕಟ್ಟಡಗಳನ್ನು ಕೊಟ್ಟಿದ್ದಾರೆ ಎಷ್ಟು ಅಭಿವೃದ್ಧಿ ಕೆಲಸಕಾರ್ಯಗಳು ಆಗಿವೆ ಎನ್ನುವುದು ಇದರಲ್ಲಿ ದುರ್ದೈವ, ಇದನ್ನೆಲ್ಲಾ ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ ಈ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಏತಕ್ಕೆ ೩೭ ಪರ್‌ಸೆಂಟ್ ಬಂದಿದೆ ಎಂದು ಕೇಳಿದರೆ ಕಾರಣವನ್ನು ಬೇರೆಯವರ ಮೇಲೆ ಹಾಕುತ್ತಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ೩೭ ಪರ್‌ಸೆಂಟ್ ಬಂದ ಶಾಲೆಗಳೆಷ್ಟು ? ಜಿರೋ ಪರ್‌ಸೆಂಟೇಜ್ ಬಂದ ಶಾಲೆಗಳೆಷ್ಟು ಎನ್ನುವ ಪ್ರಶ್ನೆ ಯನ್ನು ಕೇಳಿದ್ದೇನೆ. ಜಿರೋ ಪರ್‌ಸೆಂಟೇಜ್ ಬಂದಂತಹ ಶಾಲೆಗಳಿಗೆ ಏತಕ್ಕೆ ಹಣ ಖರ್ಚು ಮಾಡಬೇಕು ಇದಕ್ಕೆ ಹೊಣೆ ಶಿಕ್ಷಣ ಮಂತ್ರಿಗಳೇ, ಶಿಕ್ಷಣ ಇಲಾಖೆಯ ನಿರ್ದೇಶಕರೇ, ಅಧ್ಯಾಪಕರುಗಳೇ ಅಥವಾ ಪರೀಕ್ಷಾ ಪತ್ರಿಕೆಗಳ ಮೌಲ್ಯಮಾಪಕರುಗಳೇ. ಈ ಹೊಣೆಯನ್ನು ಯಾರು ಹೊತ್ತುಕೊಳ್ಳುತ್ತಾರೆ ? Nobody is prepared to take the responsibility ೩೭ ಪರ್‌ಸೆಂಟೇಜ್ ಬಂದರೆ ಉಳಿದ ೬೩ ಪರ್‌ಸೆಂಟೇಜ್ ಫೇಲ್ ಆಗಿದ್ದಾರೆ. ಒಂದು ವರ್ಷಕ್ಕೆ ಸರ್ಕಾರಕ್ಕೆ ಎಷ್ಟು ಖರ್ಚು ಬರು ತ್ತದೆ ? ತಂದೆ ತಾಯಿಗಳಿಗೆ ಎಷ್ಟು ಖರ್ಚು ಬರುತ್ತದೆ ? ಮಕ್ಕಳ ಶ್ರಮ ಎಷ್ಟು ? ರಿಸಲ್ಟ್ ಚೆನ್ನಾಗಿ ಬಂದರೆ ಬೆನ್ನು ತಟ್ಟಿಕೊಳ್ಳುತ್ತಾರೆ. ೩೭ ಪರ್‌ಸೆಂಟೇಜ್ ರಿಸಲ್ಟ್ ಬರುವುದಕ್ಕೆ ನಾವು ಏತಕ್ಕೆ ಶಿಕ್ಷಣ ಕ್ಕೋಸ್ಕರ ಇಷ್ಟೊಂದು ಹಣ ಖರ್ಚು ಮಾಡಬೇಕು?. ನಮ್ಮ ಹಣವಾಗಲೀ, ತಂದೆತಾಯಿಗಳ ಹಣವಾಗಲಿ ಇದು ರಾಷ್ಟ್ರೀಯ ಸಂಪತ್ತು ಜೊತೆಗೆ ಮಕ್ಕಳ ಅಪವ್ಯಯವಾಗುತ್ತಿದೆ ಮಕ್ಕಳು ಟುಟೋರಿಯಲ್ಸ್‌ಗಳಿಗೆ ಇವತ್ತು ಪುಸ್ತಕಹಿಡಿದು ಬೀದಿಬೀದಿ ತಿರುಗುತ್ತಿದ್ದಾರೆ. ನಾವು ಮೂಲ ಸಂಪತ್ತನ್ನು ಸರ್ವನಾಶನ ಮಾಡು ತ್ತಿದ್ದೇವೆ. ನಾವು ಒಳ್ಳೆಯ ಸಮಾಜವನ್ನು ಕಟ್ಟಬೇಕಾದರೆ ಈ ಸಂಪತ್ತನ್ನು ಬಳಸಿಕೊಳ್ಳಬೇಕಾಗಿದೆ. ಒಳ್ಳೆಯ ರಿಸಲ್ಟ್ ಬಂದರೆ ಎಲ್ಲರಿಗೂ ಖುಷಿ, ಏನಾದರು ೪೦ ಪರ್‌ಸೆಂಟೇಜ್ ರಿಸಲ್ಟ್ ಬಂದರೆ, ಹಿಂದಿನ ಸರಿ ೩೭ ಪರ್‌ಸೆಂಟೇಜ್ ಬಂದಿತ್ತು ಈ ಸಾರಿ ೪೦ ಪರ್‌ಸೆಂಟೇಜ್ ಎಂದು ಹೇಳಿಕೊಳ್ಳುತ್ತಾರೆ. ದೊಡ್ಡದಾಗಿ ಪತ್ರಿಕೆಗಳಲ್ಲಿ ಕೂಡ ಪ್ರಚಾರ ಮಾಡಿಕೊಳ್ಳುತ್ತಾರೆ. ರಿಸಲ್ಟ್ ೮೦ ಪರ್‌ಸೆಂಟೇಜ್ ಬರಲಿ, ಆದರೆ, ಅದು ಯಾವ ರೀತಿ ಬರುತ್ತದೆ ? ಈ ವಿಷಯ ಮಾನ್ಯ ಶಿಕ್ಷಣ ಮಂತ್ರಿಗಳಿಗೆ ಗೊತ್ತಿಲ್ಲ, ಕೆಲವು

ಶಿಕ್ಷಣ ಸಂಸ್ಥೆಗಳು ತಮ್ಮ ಸ್ಕೂಲಿಗೆ ಒಳ್ಳೆಯ ಹೆಸರು ಬರಲಿ. ಹೆಚ್ಚಿಗೆ ಗ್ರಾಂಟ್ ಬರಲಿ ಎಂದು ಉತ್ತರ ಪತ್ರಿಕೆಗಳನ್ನು ಕಾಪಿ ಮಾಡುತ್ತಾರೆ ೮೦ಪರ್‌ಸೆಂಟೇಜ್ ಬಂದಿದೆ ನಮ್ಮ ಅಂಗಡಿಗೆ ಹೆಚ್ಚಿಗೆ ವಿದ್ಯಾರ್ಥಿಗಳು ಬರಲಿ ಎಂದು. ನಮ್ಮ ಶಿಕ್ಷಣದಲ್ಲಿ ಒಂದು ಅಳತೆಗೋಲು ಇದೆ, ಎಲ್ಲರನ್ನು ಪಾಸ್ ಮಾಡಬೇಕು. ಅವರು ಹೇಗೆ ಪಾಸಾಗುತ್ತಾರೆ, ಇದರಲ್ಲಿ ಉಪಾಧ್ಯಾಯರು, ಹೆಡ್‌ಮಾಸ್ಟರು, ಪೇಪರ್ ವ್ಯಾಲ್ಯು ಮಾಡುವವರು ಸೇರಿ ಕೊಂಡಿರುತ್ತಾರೆ. ಕಾಪಿ ಮಾಡಿರುವುದರಿಂದ ಎಲ್ಲರೂ ಪಾಸಾಗುತ್ತಾರೆ. ಶಿಕ್ಷಣ ಮಂತ್ರಿಗಳಿಗೆ ಈ ವಿಷಯ ಗೊತ್ತಿಲ್ಲ. ಶಿಕ್ಷಣ ಸಂಸ್ಥೆಗೆ ಹೆಸರು ಬರಲಿ, ಹೆಚ್ಚಿಗೆ ಗ್ರಾಂಟ್ ಬರಲಿ ಎಂದು En-mass copying ಈ ರೀತಿ ಮಾಡುತ್ತಾರೆ. ಚಿಕ್ಕಬಳ್ಳಾಪುರ ಪರೀಕ್ಷಾ ಕೇಂದ್ರದಲ್ಲಿ ಬಾಂಬ್ ಸಿಡಿಸಿದ್ದಾರೆ. ಇನ್ನು ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಚೂರಿ ಹಾಕುತ್ತಾರೆ. ಪರೀಕ್ಷೆಗೆ ಹೋಗತಕ್ಕ ಒಬ್ಬ ಹುಡುಗನನ್ನು ಸರಿಯಾಗಿ ಚೆಕ್ ಮಾಡಿದರೆ ಅವನ ಹತ್ತಿರ ಎಷ್ಟೊಂದು ಚೀಟಿಗಳು ಸಿಗುತ್ತವೆ. ನಿಮಗೆ ಗೊತ್ತು. ಅವರ ಸಂಸ್ಥೆ ಹೆಸರು ಗಳಿಸಬೇಕು, ಹೆಚ್ಚಿನ ಗ್ರಾಂಟ್ ಸರ್ಕಾರದಿಂದ ದೊರೆಯಬೇಕು ಅದ ಕ್ಕೋಸ್ಕರ ಇದಕ್ಕೆಲ್ಲ ಅವಕಾಶ ಮಾಡಿಕೊಡುತ್ತಾರೆ. ೮೦ ಪರ್‌ಸೆಂಟೇಜ್ ರಿಸಲ್ಟ್ ಬಂದರೆ, ತಂದೆತಾಯಿ ಗಳಿಗೆ, ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಮಹಾದಾನಂದ ಶಿಕ್ಷಣ ಮಂತ್ರಿಗಳಿಗೆ ತೃಪ್ತಿ. ಉದ್ಯೋಗ ವಂತೂ ದೊರೆಯುವುದಿಲ್ಲ, ಬೇರೆ ಅವಕಾಶಗಳು ಸಿಕ್ಕುವುದಿಲ್ಲ. ಜೊತೆಗೆ ರಿಸರ್ವೇಷನ್ ಬೇರೆ. ಇದನ್ನೆಲ್ಲಾ ಯೋಚನೆ ಮಾಡಿದರೆ ನಮ್ಮ ಶಿಕ್ಷಣ examination oriented education ಈ ವಿಷಯಕ್ಕೆ ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. They will be a problem to the society. ಶಿಕ್ಷಣದ ಬಗ್ಗೆ ನಾನು ಎಷ್ಟು ಮಾತನಾಡಿದರೂ ಉತ್ತರ ಏನು ಬರುತ್ತದೆಂಬುದು ನನಗೆ ಗೊತ್ತು ...ಶಿಕ್ಷಣ ಮಂತ್ರಿಗಳವರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಇಲ್ಲಿ ಅನಾಹುತವಾಗುವುದಕ್ಕೆ ಒಂದಲ್ಲ ಒಂದು ವಿಧದಲ್ಲಿ ನಾವೆಲ್ಲರೂ ಹೊಣೆಗಾರರೇ. ಸ್ವಾತಂತ್ರ್ಯ ಬಂದು ೩೩ ವರ್ಷಗಳಾದರೂ ಶಿಕ್ಷಣದ ವ್ಯವಸ್ಥೆಯನ್ನು ಬದಲು ಮಾಡಿಲ್ಲ. ನಾವು ಮೂಲ ಶಿಕ್ಷಣವನ್ನು ಬದಲು ಮಾಡದಿದ್ದ ಪಕ್ಷದಲ್ಲಿ ಬಹುಶಃ ಸಮಾಜ ಅಧೋಗತಿಗೆ ಹೋಗುತ್ತದೆ. ಎಲ್ಲಿ ಮೂಲ ಶಿಕ್ಷಣ ಸರಿಯಾಗಿ ಇರುವುದಿಲ್ಲವೋ ಅಲ್ಲಿ ಸರಿಯಾದಂತಹ ವ್ಯಕ್ತಿಗಳು ಉದ್ಭವವಾಗುವುದಿಲ್ಲ. ಇಡೀ ಸಮಾಜ ದುರ್ಗಂಧ ಮಯ ವಾಗುತ್ತದೆ. ಒಮ್ಮೆ ಸ್ವಾಮಿ ವಿವೇಕಾನಂದರವರು ಹೇಳಿದರು I am a man with capital 'M' ಎಂದು ಅದಕ್ಕೋಸ್ಕರ ಸಮಾಜದಲ್ಲಿ ಲಂಚದ ಹಾವಳಿ ಜಾಸ್ತಿಯಾಗಿದೆ. ದೊಡ್ಡವರು ನಮ್ಮನ್ನು ನಿಮಗೆ ಸರಿಯಾದ ನೀತಿಯಿಲ್ಲ. ಳ ಅಕ್ಷರ ಬರುವುದಿಲ್ಲ, ಕನ್ನಡ ವ್ಯಾಕರಣ ಬರುವುದಿಲ್ಲವೆಂದು ಹೇಳುತ್ತಾರೆ. ಸರಿಯಾದ ರೀತಿಯಲ್ಲಿ ಹೇಳಿಕೊಡುವಂತಹ ಪದ್ಧತಿ ನಮ್ಮಲ್ಲಿ ಇಲ್ಲ. ಅದರ ಮೌಲ್ಯ ವ್ಯವಸ್ಥೆ ನಮ್ಮಲ್ಲಿಲ್ಲ. ನಮ್ಮಲ್ಲಿ ನೀತಿರಹಿತ ಮೌಲ್ಯರಹಿತ ಶಿಕ್ಷಣವಿದೆ, ಸರ್ಟಿಫಿಕೇಟ್‌ಗಳನ್ನು ಕೊಡುತ್ತಾರೆ ಸರ್ಟಿಫಿಕೇಟ್ ಏತಕ್ಕೆ ಬೇಕು ? ಅದನ್ನು ತೆಗೆದುಕೊಂಡು ಏನು ಮಾಡಬೇಕು ?. ಸಮಾಜದ ನೀತಿಯನ್ನು ಬದಲಿಸುವಂತಹ ಸರ್ಟಿಫಿಕೇಟ್‌ಗಳನ್ನು ಕೊಡುವ ಪದ್ಧತಿ ನಮ್ಮಲ್ಲಿ ಬರಬೇಕು. ಈ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡರೂ ಮುಂದಿನ ಪ್ರಮೋಷನ್ ದೊರಕುವುದಿಲ್ಲ. ಕಾರಣ ರಿಸರ್ವೇಷನ್ ಬೇರೆ ಬಂದಿದೆ. ಬ್ರಾಹ್ಮಣನೋ ಲಿಂಗಾಯಿತನೋ ಆಗಿ ಹುಟ್ಟಿದ ತಪ್ಪಿಗೆ ಪ್ರಮೋಷನ್ ಸಿಗುವುದಿಲ್ಲ. ೭೦, ೮೦ ಅಂಕಗಳನ್ನು ಪಡೆದರೂ ಇವತ್ತಿನ ದಿವಸ ರಸ್ತೆಗಳಲ್ಲಿ ಅಲೆಯುವ ಪರಿಸ್ಥಿತಿ ಬಂದಿದೆ.

೪-೦೦ ಪಿ. ಎಂ.

ಇದರಿಂದ ಕ್ರಾಂತಿಕಾರಿ ಆಗುತ್ತದೆ ಎಂದು ಹೇಳುತ್ತೇನೆ, ಕ್ರಾಂತಿಕಾರಿ ಆಗಲೇಬೇಕು.

ಶ್ರೀ ಎಸ್. ಎಸ್. ಅರಕೇರಿ.—ಹಾಗಾದರೆ ರಿಸರ್ವೇಷನ್ ಬೇಡ ಎಂದು ಹೇಳುತ್ತೀರಾ ?

ಶ್ರೀ ಮಳ್ಳೂರು ಆನಂದರಾವ್.—ನಾನು ಅದನ್ನು ಆನಂದದಿಂದ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಅರಕೇರಿ.—ನಮ್ಮ ಪಾಲಿಸಿ ಪ್ರಕಾರ ತಾವು ಒಪ್ಪಿಕೊಳ್ಳಲೇಬೇಕು. Otherwise, why should I agree with him.?

ಶ್ರೀ ಮಳ್ಳೂರು ಆನಂದರಾವ್.—ನಾನು ಆ ಬಗ್ಗೆ ಈಗ ಹೆಚ್ಚು ಮುಂದುವರೆಸಿಕೊಂಡು ಹೋಗುವುದಿಲ್ಲ. ಮುಂದೆ ಹೇಳುತ್ತೇನೆ. ಈವೊತ್ತಿನ ದಿವಸ ನಮ್ಮ ಶಿಕ್ಷಣದ ಗುರಿ ಏನು, ಅದರ ನೀತಿ ಏನು ಅದರಿಂದ ದೊರೆಯುವ ಫಲ ಏನು ಅಷ್ಟನ್ನು ಮಾತ್ರ ಹೇಳಬಯಸುತ್ತೇನೆ. ಬಾಕಿದೆಲ್ಲಾ

ಹೇಳುವುದಕ್ಕೆ ಹೋದರೆ ಅವೆಲ್ಲಾ ಗೊಡ್ಡು ಪುರಾಣ ಆದ ಹಾಗಾಗುತ್ತದೆ. ಸ್ವಾಮಿ, ನಾನು ಪ್ರತಿವರ್ಷವೂ ಕೂಡ ಬೇರೆ ಯಾವ ಸಬ್ಜೆಕ್ಟ್ ಮೇಲೂ ಹೆಚ್ಚು ಮಾತನಾಡದೆ ಇದೊಂದೇ ಸಬ್ಜೆಕ್ಟ್ ಮೇಲೆ ಹೆಚ್ಚು ಪ್ರವಚನ ಮಾಡುತ್ತಿದ್ದೆ. ಈಗ ಹೆಚ್ಚು ಕಾಲಾವಕಾಶ ಇಲ್ಲವಾದ್ದರಿಂದ ಆದಷ್ಟು ಸಂಕ್ಷಿಪ್ತವಾಗಿ ಹೇಳಲಿಕ್ಕೆ ಮಾನ್ಯ ಉಪಾಧ್ಯಕ್ಷರು ನನಗೆ ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈವೊತ್ತಿನ ದಿವಸ ಈ ಶಿಕ್ಷಣದಲ್ಲಿ ನಿಜರೂಪ ಏನು ಇದೆ ಅನ್ನುವುದರ ಬಗ್ಗೆ ನನ್ನ ಗಮನವನ್ನು ಹರಿಸುತ್ತೇನೆ. ಪ್ರಮುಖವಾಗಿ ಹೇಳಬೇಕಾದರೆ ಇದರಲ್ಲಿ ಎರಡು ಮುಖಗಳು ಇವೆ. ಆ ಎರಡು ಮುಖಗಳಲ್ಲಿ ನನ್ನ ಭಾಷಣವನ್ನು ಕೇವಲ ಸೆಕೆಂಡರಿ ಶಿಕ್ಷಣದ ಬಗ್ಗೆ ಮಾತ್ರ ಸೀಮಿತಗೊಳಿಸುತ್ತೇನೆ. ಇದರಲ್ಲಿ ನರ್ಸರಿ ಶಿಕ್ಷಣದಿಂದ ಹಿಡಿದು ಟೆಕ್ನಿಕಲ್ ಎಜುಕೇಷನ್ ಹಾಗೂ ಯೂನಿವರ್ಸಿಟಿ ಎಜುಕೇಷನ್ ನವರಿಗೂ ಇದೆ. ಅಷ್ಟೇ ಅಲ್ಲದೆ ಈವೊತ್ತಿನ ಡಿಮ್ಯಾಂಡ್‌ನಲ್ಲಿ ೫ ಡಿಮ್ಯಾಂಡ್‌ನ್ನು ಸೇರಿಸಿದ್ದೀರಿ. ನಾನು ಅವುಗಳೆಲ್ಲದರ ಮೇಲೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಮೂಲ ಶಿಕ್ಷಣ ಏನು ಇದೆ ಅದರ ಮೇಲೆ ನಾನು ಮಾತನಾಡುವುದಕ್ಕೆ ಸೀಮಿತಗೊಳಿಸುತ್ತೇನೆ. ಬೇರೆ ಟೆಕ್ನಿಕಲ್ ಎಜುಕೇಷನ್, ಯೂನಿವರ್ಸಿಟಿ ಇತ್ಯಾದಿಗಳ ಬಗ್ಗೆ ಮಾತನಾಡುವುದಕ್ಕೆ ಇಲ್ಲೇ ನಮ್ಮ ಅನೇಕ ಹಿರಿಯ ಸದಸ್ಯರು ಇದ್ದಾರೆ. ಅವರು ಮಾತನಾಡುತ್ತಾರೆ. ನರ್ಸರಿ ಮತ್ತು ಪ್ರಾಥಮಿಕ ಶಿಕ್ಷಣದಿಂದ ಹಿಡಿದು, ಸೆಕೆಂಡರಿ ಎಜುಕೇಷನ್‌ನವರಿಗೆ ಯಾವರೀತಿ ಶಿಕ್ಷಣ ಇದೆ ಅದರ ಮಟ್ಟಿಗೆ ಮಾತ್ರ ನನ್ನ ಮಾತನ್ನು ಸೀಮಿತ ಗೊಳಿಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಇವೆ. ಇದರಲ್ಲಿ ಎರಡು ಮುಖಗಳು ಇವೆ. ಸರ್ಕಾರೀ ಶಾಲೆಗಳ ಸ್ಥಿತಿ ಈವೊತ್ತಿನ ದಿವಸ ಯಾವ ರೀತಿಯಲ್ಲಿದೆ ಮತ್ತು ಖಾಸಗೀ ಶಾಲೆಗಳು ಯಾವ ಸ್ಥಿತಿಯಲ್ಲಿವೆ ಅನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈವೊತ್ತು ನಮ್ಮ ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳು ಬಹು ಹೆಚ್ಚಾಗಿ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರ ಪೋರ್ಟ್‌ಫೋಲಿಯೋಗೆ ಸೇರಿದೆ. ಇದರಲ್ಲಿ ಸರ್ಕಾರೀ ಹೈಸ್ಕೂಲ್‌ಗಳು ಇರುವುದು ಬಹಳ ಕಡಿಮೆ. ಖಾಸಗೀ ಹೈಸ್ಕೂಲ್ ಗಳೇ ಜಾಸ್ತಿ. ಹೆಚ್ಚು ಕಡಿಮೆ ನಮ್ಮ ರಾಜ್ಯದಲ್ಲಿ ೩೦ ಸಾವಿರ ಪ್ರಾಥಮಿಕ ಶಾಲೆಗಳು ಇರಬಹುದು. ಈವೊತ್ತಿನ ಗ್ರಾಮಾಂತರ ಪ್ರದೇಶದಲ್ಲಿ ಈ ಪ್ರಾಥಮಿಕ ಶಾಲೆಗಳು ಏನು ಇವೆ ಅವುಗಳ ದರ್ಶನ ಮಾಡಿದರೆ ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿರುವ ಸರ್ಕಾರೀ ಸ್ಕೂಲ್‌ಗಳ ಕಟ್ಟಡ ನೋಡಿದರೆ ಅದು ಸ್ಕೂಲ್ಸ್ ಎಂದು ಕರೆಯಬಹುದೇ ಎನ್ನುವುದನ್ನು ಶಂಕಿಸಬೇಕಾಗುತ್ತದೆ. ಕಾರಣ ಆ ಕಟ್ಟಡಗಳಿಗೆ ಸುಣ್ಣ ಬಣ್ಣ ಮಾಡಿ ಯಾವ ಕಾಲವಾಗಿರುತ್ತದೋ, ಎಷ್ಟು ವರ್ಷವಾಗಿರುತ್ತದೋ, ಆ ಬಗ್ಗೆ ಯಾರೂ ಕೇಳುವವರೂ ಇಲ್ಲ, ಹೇಳುವವರೂ ಇಲ್ಲ ಅಂತ ಕಾಣುತ್ತದೆ. ಕುರಿದೊಡ್ಡಿ ಇದ್ದ ಹಾಗೆ. ಕುರಿ ದೊಡ್ಡಿ ಇದ್ದ ಹಾಗೆ ಆ ಮಕ್ಕಳನ್ನು ತುಂಬಿದ್ದೀರಿ. ಬಹುಶಃ ಕುರಿಗಳಿಗೆ ಆ ಪ್ರಾಣಿ ಗಳಿಗೆ ಮಾತನಾಡುವುದಕ್ಕೇನಾದರೂ ಬಂದಿದ್ದರೆ ಬಾಯಿ ಇದ್ದರೆ ಆ ಕುರಿಗಳೂ ಆ ದೊಡ್ಡಿಯಲ್ಲಿ ಸ್ಟ್ರೈಕ್ ಮಾಡುತ್ತಿತ್ತೋ ಏನೋ ? ಕುರಿ ದೊಡ್ಡಿ ಹಾಗೆ ಆ ಮಕ್ಕಳನ್ನು ತುಂಬಿದ್ದರೂ ಕೂಡ ಕುರಿಯಂತೆ ಒಬ್ಲೈಜ್ ಮಾಡಿಕೊಂಡು ಹೋಗುತ್ತಿದ್ದಾರೆ. ಸ್ಕೂಲ್ ಮಕ್ಕಳನ್ನು ದೊಡ್ಡಿಯಲ್ಲಿ ತುಂಬುವ ಹಾಗೆ ಮಾಡಿದ್ದೀರಿ. ಆ ಮಕ್ಕಳು ಆ ಸ್ಕೂಲ್‌ಗಳಲ್ಲಿ ಯಾವರೀತಿ ಕೂತುಕೊಂಡಿದ್ದಾರೆ ಅನ್ನುವುದನ್ನು ನಾವು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಅವರಿಗೆ ಕೂತುಕೊಳ್ಳುವುದಕ್ಕೆ ಒಂದು ಬೆಂಚು ಇಲ್ಲ ; ಹಿಂದೆ ನಮ್ಮ ಕಾಲದಲ್ಲಿ ಈ ಪ್ರಾಥಮಿಕ ಶಾಲೆಗಳಲ್ಲಿ ಕೂತುಕೊಳ್ಳುವುದಕ್ಕೆ ಬೆಂಚ್ ಆದರೂ ಇರುತ್ತಿತ್ತು. ಈಗ ಅದೂ ಇರುವುದಿಲ್ಲ. ತಮಗೆ ಹೇಳಬೇಕಾದರೆ ಇದೇ ಬೆಂಗಳೂರಿನಲ್ಲಿ ನನ್ನ ಕ್ಷೇತ್ರದಲ್ಲಿ ಮೊನ್ನೆ ತಾನೇ ನಡೆದಂಥಾ ಒಂದು ಘಟನೆ ಬಗ್ಗೆ ಹೇಳುವುದಾದರೆ ಪೋಲೀಸ್ ಕ್ವಾರ್ಟರ್ಸ್ ಹತ್ತಿರ ಇರುವ ಒಂದು ಸರ್ಕಾರಿ ಶಾಲೆಯು ಕಟ್ಟಡ ಕುಸಿದು ಬಿದ್ದು ಹೋಯಿತು. ನಮ್ಮ ಸರ್ಕಾರೀ ಸ್ಕೂಲ್‌ಗಳ ಕಟ್ಟಡದ ವೈಖರಿ ಈ ರೀತಿ ಇದೆ ; ಅನ್ನುವುದನ್ನು ತಮ್ಮ ಜ್ಞಾಪಕಕ್ಕೆ ತರುತ್ತೇನೆ. ಆ ಸ್ಕೂಲಿನ ರಿಪೇರಿ ಆಗಿ ಎಷ್ಟು ವರ್ಷ ಆಗಿರಬಹುದೋ, ಆ ಸ್ಕೂಲ್ ಸುಣ್ಣ ಬಣ್ಣ ಕಂಡು ಎಷ್ಟು ವರ್ಷ ಆಗಿರ ಬಹುದೋ ಅದರಿಂದ ಹೀಗಾಗಿದೆ. ಈ ಸರ್ಕಾರೀ ಸ್ಕೂಲ್‌ಗಳ ಕಟ್ಟಡದ ರಿಪೇರಿ ವಗೈರೆ ಖರ್ಚು ನಮ್ಮ ಬಡ್ಜೆಟ್‌ನಲ್ಲಿ ಮಾತ್ರ ಇರುತ್ತದೆ, ಆದರೆ ಆ ದುಡ್ಡು ಎಲ್ಲಿ ಹೋಗುತ್ತದೋ ಎಲ್ಲಿ ಬರುತ್ತದೋ ಗೊತ್ತಾಗುವುದಿಲ್ಲ. ಇವಿಷ್ಟೂ ಕೂಡ ಕಟ್ಟಡದ ಸ್ಥಿತಿ ಹೇಗಿದೆ ಅನ್ನುವುದರ ಬಗ್ಗೆ ಆಯಿತು.

ಇನ್ನು ಈ ಕಟ್ಟಡದ ಒಳಗೆ ಹೋದರೆ ಅದರ ಸ್ಥಿತಿ ಏನು ಅನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಂದರೆ ಉಪಾಧ್ಯಾಯರ ಬಗ್ಗೆ ಹೇಳಬೇಕಾಗಿದೆ. ಆ ಉಪಾಧ್ಯಾಯರ ಸ್ಥಿತಿ ಬಗ್ಗೆ ಹೇಗೆ ಎನ್ನುವುದನ್ನು ಸ್ವಲ್ಪ ವಿಮರ್ಶೆ ಮಾಡಿ ಹೇಳಬೇಕಾಗಿದೆ. ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಬಹು ಹೆಚ್ಚಾಗಿ ಸಿಂಗಲ್ ಟೀಚರ್ ಇರುವುದೇ ಜಾಸ್ತಿ. ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಲೆಕ್ಕಾಚಾರ ಹಾಕಿ ನೋಡುವುದಾರೆ, It is 48% of the total schools. But, subject to correction. They are not private schools, but they are all government schools. ಇವೆಲ್ಲಾ ಸರ್ಕಾರೀ ಶಾಲೆಗಳೇ ವಿನಾ ಖಾಸಗೀ ಶಾಲೆಗಳಲ್ಲ. ಇಷ್ಟೆ ಅಲ್ಲದೆ ಎಲ್ಲಾ ಸಬ್ಜೆಕ್ಟ್ ಹೇಳಿಕೊಡುವುದಕ್ಕೂ ಒಬ್ಬನೇ ಮೇಷ್ಟ್ರು ೧-೨-೩ ೪ ಇಷ್ಟು ಕ್ಲಾಸ್‌ಗಳನ್ನೂ ಒಬ್ಬನೇ ತೆಗೆದುಕೊಳ್ಳಬೇಕು. ಒಂದೊಂದು ಸ್ಕೂಲ್ ಜಾಗ ನೋಡಿದರೆ ೨೦ × ೩೦ ಇರತಕ್ಕಂಥಾ ಒಂದು ಷೆಡ್ಡಿನಲ್ಲಿ ನಡೆಯುತ್ತದೆ. ಎಲ್ಲ ಕ್ಲಾಸ್‌ನ ಹುಡುಗರನ್ನೂ ಅಲ್ಲಿಗೆ ಸೇರಿಸಿಕೊಳ್ಳುತ್ತಾನೆ. ಈ ಸರ್ಕಸ್‌ನಲ್ಲಿ ಎಲ್ಲ ಪ್ರಾಣಿಯನ್ನು ಬಿಡುವುದಕ್ಕೆ, ಆಡಿಸುವುದಕ್ಕೆ ಒಬ್ಬ ರಿಂಗ್ ಮಾಸ್ಟರ್ ಅಂತ ಏನು ಇರುತ್ತಾನೋ ಆ ರೀತಿ ಈ ಸ್ಕೂಲ್‌ಗಳಲ್ಲಿ ಗಣಿತ, ಕನ್ನಡ ಇಂಗ್ಲಿಷ್ ಇದೆಲ್ಲಾ ಹೇಳಿಕೊಡುವುದಕ್ಕೂ ಕೂಡ ಒಬ್ಬನೇ ಮಾಸ್ಟರ್ ಬೇರೆ ಯಾರೂ ಇಲ್ಲ. ಸಾಮಾನ್ಯವಾಗಿ ಹಳ್ಳಿಗಾಡಿನಲ್ಲಿರುವ ಮಕ್ಕಳು ಎಲ್ಲ ಬಡವರೇ ಹೊರತು ಶ್ರೀಮಂತರಲ್ಲ. ಆ ಮಾಸ್ಟರ್ ಮಾತ್ರ ಆ ಹಳ್ಳಿಯಲ್ಲೇ ಬದುಕಿರುತ್ತಾನೆ. ಅವನಿಗೆ ಆ ಹಳ್ಳಿಗಳಲ್ಲಿ ಇರುವುದು ಒಂದು ಅಭ್ಯಾಸವಾಗಿ ಬಿಟ್ಟಿರುತ್ತೆ, ಅದು ಅವನಿಗೆ ಕರಗತವಾಗಿ ಹೋಗಿ ಬಿಟ್ಟಿದೆ. ಆ ಕ್ಲಾಸ್‌ಗಳಲ್ಲಿ ಮಕ್ಕಳು ಏನು ಗಲಾಟೆ ಮಾಡಿದರೂ ಕೂಡ ಆತನೇ ನೋಡಿಕೊಳ್ಳಬೇಕು. ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಿಜವಾಗಿ ರಾಷ್ಟ್ರಪ್ರಶಸ್ತಿ ಕೊಡಬೇಕಾದರೆ ಆ ಹಳ್ಳಿಗಳಲ್ಲಿರುವ ಸಿಂಗಲ್ ಟೀಚರ್ಸ್‌ಗೆ ಕೊಡಬೇಕೇ ವಿನಾ ಇನ್ನಾರಿಗೂ ಇಲ್ಲ. ಆ ಸಿಂಗಲ್ ಟೀಚರ್ ಸರಿಯಾಗಿ ಇಲ್ಲದೇ ಹೋದರೆ, ಸರಿಯಾಗಿ ಪಾಠ ಹೇಳಿಕೊಡದೇ ಹೋದರೆ ಆ ಮಕ್ಕಳ ಗತಿ ಏನು ಅನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. Please apply your mind. ಆ ಸಿಂಗಲ್ ಟೀಚರ್ ಎಲ್ಲಾ ಕ್ಲಾಸ್‌ಗೂ ನಾನು ಮೊದಲೇ ಹೇಳಿದ ಹಾಗೆ ಗಣಿತ ಕನ್ನಡ ಇಂಗ್ಲಿಷ್ ಇವೆಲ್ಲಾ ಹೇಳಿಕೊಡಬೇಕು ಅಷ್ಟೇ ಅಲ್ಲದೆ ಅವನು ಡ್ರಿಲ್ ಮಾಸ್ಟರ್ ಕೂಡ ಆಗಿರುತ್ತಾನೆ. ಜೊತೆಗೆ ಎಲ್ಲಾ ಮಕ್ಕಳನ್ನೂ ಗಲಾಟೆ ಇಲ್ಲದೇ ಇದ್ದ ಹಾಗೆ ಬೇರೆ ನೋಡಿಕೊಳ್ಳಬೇಕು. ಆ ಸಿಂಗಲ್ ಟೀಚರ್ಸ್ ಒಂದು ಊರಲ್ಲಿಲ್ಲ ಅಂದರೆ ಅಥವಾ ಏನಾದರೂ ಗೈರು ಹಾಜರಾದರೆ ಅವೊತ್ತಿನ ದಿವಸ ಆ ಸ್ಕೂಲ್ ಬಂದ್. ಇದು ೨೦ನೇ ಶತಮಾನದ ನಮ್ಮ ಶಿಕ್ಷಣದ ಆದರ್ಶ. ಇದು ಒಂದು ಆದರ್ಶದ ಗುರುಕುಲ. ಈ ಒಂದು ಶಿಕ್ಷಣಕ್ಕೆ ನಾವು ಈ ವರ್ಷ ೧೮೦ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ. ಈ ಸ್ಕೂಲಿಗೆ ಬರುವಂಥಾ ಮಕ್ಕಳು ಯಾರು ಎಲ್ಲಾ ಬಡವರೇ, ಎಲ್ಲಾ ವೀಕರ್ ಸೆಕ್ಷನ್‌ಗೆ ಸೇರಿದವರೇ. ನಾನು ಮೊದಲೇ ಹೇಳಿದ ಹಾಗೆ ಶೇಕಡ ೪೮ ಪರ್ಸೆಂಟ್‌ನಷ್ಟು ಸ್ಕೂಲ್‌ಗಳಲ್ಲಿ ಸಿಂಗಲ್ ಟೀಚರ್ಸ್ ಇರುವುದೇ ಜಾಸ್ತಿ. ನಾವು ಈ ಶಿಕ್ಷಣ ವೆಚ್ಚಕ್ಕಾಗಿ ಪ್ರತಿವರ್ಷವೂ ಸುಮಾರು ೨೦-೨೫ ಕೋಟಿ ರೂಪಾಯಿಯಷ್ಟು ದುಡ್ಡನ್ನು ನಮ್ಮ ಬಡ್ಜೆಟ್ಟಿನಲ್ಲಿ ಏರಿಸಿಕೊಂಡು ಹೋಗುತ್ತಾ ಇದ್ದೇವೆ. ಇದು ಪ್ರಾಥಮಿಕ ಶಾಲೆಯ ಮೊದಲನೇ ನೋಟ.

ಇನ್ನು ಈ ಶಾಲೆಯಲ್ಲಿ ಪಾಠ ಹೇಳಿಕೊಡುವ ಮಾಸ್ಟರ್ ಬಗ್ಗೆ ಸ್ವಲ್ಪ ಮಟ್ಟಿಗೆ ಈ ಸಂದರ್ಭದಲ್ಲಿ ವರ್ಣನೆ ಮಾಡಲೇಬೇಕಾಗಿದೆ. ಈ ಸ್ಕೂಲ್‌ಗಳಲ್ಲಿ ಪಾಠ ಹೇಳಿಕೊಡುವ ಉಪಾಧ್ಯಾಯರು ಯಾವುದೋ ಯುಗದಲ್ಲಿ ಎಸ್. ಎಸ್. ಎಲ್. ಸಿ. ಪಾಸ್ ಮಾಡಿಕೊಂಡಿರುತ್ತಾನೆ. ಅವನು ಹಾಕಿಕೊಳ್ಳತಕ್ಕಂಥಾ ಬಟ್ಟೆ ನೋಡಿದರೆ ಹರಿದು ಹೋಗಿರತಕ್ಕಂಥಾ ಷರಟು, ಯಾವುದೋ ಕಾಲದ್ದು ಒಂದು ಪ್ಯಾಂಟ್ ಮತ್ತು ಯಾವುದೋ ಒಂದು ಕಾಲದು ಹಳೇ ಕೋಟು ಮತ್ತು ಅವನ ಜೇಬಿನಲ್ಲಿ ಒಂದು ಬೀಡಿಕಟ್ಟು ಇರುತ್ತದೆ. ಆತ ಅಲ್ಲಿ ಏನು ಮಾಡುತ್ತಾನೆ ಎಂದರೆ ಹುಡುಗರನ್ನು ಓದಿ ಅಂತ ಹೇಳಿಬಿಟ್ಟು ತಾನು ಒಂದು ಕಡೆ ಹೊರಗಡೆ ಇರುವ ಕಟ್ಟೆ ಮೇಲೆ ಕೂತುಕೊಂಡು ಯಾವುದಾದರೂ ಒಂದು ತರಲೆ ಅರ್ಜಿಗಳನ್ನು ಬರೆದು ಕೊಡುವುದು, ಇದು ಆ ಟೀಚರ್‌ನ ಒಂದು ಲಕ್ಷಣಗಳು. ನಾನು ಇದನ್ನು ಊಹೆ ಮಾಡಿಕೊಂಡು ಎಗ್ಸಾಗರೇಷನ್ ಮಾಡಿಕೊಂಡು ಹೇಳುತ್ತಾ ಇಲ್ಲ. ಈಗ ನಡೆಯುತ್ತಾ ಇರುವುದನ್ನೇ, ನಿಜವಾಗಿ ಇದ್ದುದನ್ನೇ ಹೇಳುತ್ತಾ ಇದ್ದೇನೆ. ಈ ರೀತಿಯ ಒಂದು ವಿದ್ಯಾಭ್ಯಾಸ ಆ ಮಕ್ಕಳಿಗೆ ಆದರೆ ಆ ಮಕ್ಕಳು ಮೇಲಕ್ಕೆ ಅಂದರೆ ಉನ್ನತ ಮಟ್ಟಕ್ಕೆ ಹೇಗೆ ಬರುತ್ತಾರೆ ಯೋಚನೆ ಮಾಡಿ ನೋಡಿ. ಆತ ಏನಾದರೂ ಊರಿನಲ್ಲಿ ೧೫ ದಿವಸ ಇಲ್ಲದೇ ಹೋದರೆ ಆ ಮಕ್ಕಳ ಗತಿ ಏನು, ಅವರ ವಿದ್ಯಾಭ್ಯಾಸದ ಗತಿ ಏನು ?

ಇದನ್ನು ನಾನು ಊಹಾಪೋಹದಿಂದ ಹೇಳುತ್ತಾ ಇಲ್ಲ. ನೀವು ಬೇಕಾದರೆ ಬನ್ನಿ ನನ್ನ ಜೊತೆಯಲ್ಲಿ ತಮ್ಮನ್ನು ಕರೆದುಕೊಂಡು ಹೋಗಿ ಆ ಸ್ಕೂಲುಗಳು ಯಾವರೀತಿ ನಡೆಯುತ್ತಾ ಇವೆ ಅನ್ನುವುದನ್ನು ತೋರಿಸಿಕೊಡುತ್ತೇನೆ ಇಷ್ಟೇ ಅಲ್ಲ ನಾವು ಎಂ.ಎಲ್.ಎ. ಆದರೂ ಕೂಡ ಒಂದೊಂದು ಸಲಹೆ ಅವನನ್ನು ಹೋಗಿ ಕರೆದುಕೊಂಡು ಬರಬೇಕಾಗುತ್ತದೆ. ಯಾವುದಾದರೂ ಆ ಊರಿನಲ್ಲಿ ಅರ್ಜಿ ವಗ್ಯೆರೆ ಬರೆಸಬೇಕಾದರೆ ಅವನನ್ನೇ ಕರೆಯುವುದಕ್ಕೆ ಹೋಗುತ್ತೇವೆ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಸಿಂಗಲ್ ಟೀಚರ್ ಇರತಕ್ಕಂಥಾ ಸ್ಕೂಲ್‌ಗಳಲ್ಲಿ ಇರತಕ್ಕಂಥಾ ವಿಚಾರ ತಮಗೆಲ್ಲರಿಗೂ ಸಾಮಾನ್ಯವಾಗಿ ಗೊತ್ತಿದೆ. ಈ ಮಧ್ಯೆ ಯಾವುದಾದರೂ ಸೆನ್ಸಸ್ ಬರೆಯಬೇಕಾದರೆ, ಹಂದಿಗಳ ಸೆನ್ಸಸ್, ಜನಗಳ ಸೆನ್ಸಸ್, ಮಕ್ಕಳ ಸೆನ್ಸಸ್, ರೇಷನ್ ಕಾರ್ಡ್ಸ್ ಇವೆಲ್ಲಾ ಬರೆಯಬೇಕಾದರೂ ಕೂಡ ಅಲ್ಲಿರುವ ಟೀಚರ್ಸ್‌ನ್ನೇ ಉಪಯೋಗಿಸಿಕೊಳ್ಳುತ್ತಾರೆ. ಇನ್ನು ಇದರ ಜೊತೆಗೆ ಕೇರ್‌ಫುಡ್. ಈ ಕೆಲಸವನ್ನೂ ಕೂಡ ಅವನೇ ನೋಡಿಕೊಳ್ಳಬೇಕಾಗಿದೆ. ಆ ಗ್ರಾಮದಲ್ಲಿ ಆಗಬೇಕಾದಂಥಾ ಯಾವ ಕೆಲಸವಾಗಲಿ, ಏನೇ ನಡೆಯಲಿ ಎಲ್ಲವನ್ನೂ ಕೂಡ ಇವನೇ ನೋಡಿಕೊಳ್ಳಬೇಕು. ಇಷ್ಟೇ ಅಲ್ಲ ಇವನ ಕೆಲಸ, ಇನ್ನೊಂದು ವೈಶಿಷ್ಟ್ಯ ಎಂದರೆ ಯಾರಾದರೂ ಮಂತ್ರಿಗಳು ಅಲ್ಲಿಗೆ ಹೋದರೆ, ಆ ಗ್ರಾಮಕ್ಕೆ ಏನಾದರೂ ಹೋದರೆ ಅಲ್ಲಿ ಯಾವ ಜನಗಳೂ ಇಲ್ಲದೇ ಹೋದರೆ ಆ ಸ್ಕೂಲ್‌ಗಳಲ್ಲಿರುವ ಮಕ್ಕಳನ್ನು ಅವರಲ್ಲಿಗೆ ಕರೆದುಕೊಂಡು ಹೋಗುವುದಕ್ಕೆ ಈ ಮಾಸ್ಟರ್ ಅನ್ನು ಉಪಯೋಗಸಿಕೊಳ್ಳುತ್ತಾರೆ, ಏತಕ್ಕೆಂದರೆ ಅಲ್ಲಿ ಮಂತ್ರಿಗಳು ಏನಾದರೂ ಹೇಳಿದರೆ ಜೈಕಾರ ಹಾಕುವುದಕ್ಕೆ ಈ ಮಕ್ಕಳು ಬೇಕಲ್ಲಾ. ಅದಕ್ಕೋಸ್ಕರವಾಗಿ ಈ ಮಾಸ್ಟರ್ ಅನ್ನು ಪ್ರತಿಯೊಬ್ಬರೂ ಕೂಡ ಬಳಸಿಕೊಳ್ಳುತ್ತಾರೆ. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವ ಉದ್ದೇಶವಾದರೂ ಇಷ್ಟೆ. ಈ ವಿಚಾರಗಳನ್ನು ಏನೋ ಒಂದು ಭಾವನೆ ಇಟ್ಟುಕೊಂಡು ಎಕ್ಸಾಜರೇಷನ್‌ನಿಂದ ಹೇಳುತ್ತಾ ಇಲ್ಲ. ಈವೊತ್ತಿನ ಈ ಶಿಕ್ಷಣ ಯಾವ ಮಟ್ಟದಲ್ಲಿ ನಡೆಯುತ್ತಾ ಇದೆ ಅನ್ನುವುದರ ಬಗ್ಗೆ ಇದ್ದುದನ್ನು ಹೇಳುತ್ತಾ ಇದ್ದೇನೆ. ನಿಜವಾದ ಚಿತ್ರ ಏನು ಇದೆ ಅದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಮತ್ತೇನೂ ಅಲ್ಲ. ನಾನು ಈ ಬಗ್ಗೆ ವಿರೋಧ ಮಾಡಬೇಕು ಎಂದು ಹೇಳುತ್ತಾ ಇಲ್ಲ. ನಾವು ಈ ಶಿಕ್ಷಣಕ್ಕೆ ಈ ವರ್ಷ ೧೮೦ ಕೋಟಿ ರೂಪಾಯಿ ಏನು ಖರ್ಚು ಮಾಡುತ್ತೇವೋ ಅದು It is a liability to the House. This is the education which we are giving. ನಿಜವಾದ ಚಿತ್ರವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ನಾವು ಇವರ ಬಗ್ಗೆ ವೃಥಾ ಆಕ್ಷೇಪಣೆ ಮಾಡಬೇಕು ಅಂತ ಹೇಳುತ್ತಾ ಇಲ್ಲ. ಇವರು ಯಾವ ರೀತಿಯಿಂದ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ವಿಷಯದತ್ತ ತಮ್ಮ ಗಮನವನ್ನು ಸೆಳೆದೆ ಅಷ್ಟೆ.

ಇನ್ನು ತಾವು ಹಳ್ಳಿಗಳಲ್ಲಿರುವ ಮಕ್ಕಳು ಶಾಲೆಗೆ ಸರಿಯಾಗಿ ಬರುವುದಿಲ್ಲ ಎಂದು ಕಂಪಲ್ಸರಿ ಎಜುಕೇಷನ್ ಮಾಡಬೇಕು ಅಂತ ಮಾಡಿದಿರಿ. ಆ ಹಳ್ಳಿಗಳಲ್ಲಿ ಶಾಲೆಗೆ ಬರದೇ ಇರತಕ್ಕಂಥಾ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಅವರ ತಂದೆ ತಾಯಿಗಳಿಗೆ ಕಳುಹಿಸುವಂತೆ ಮಾಡಬೇಕು ಅಂತ ಮಾಡಿದಿರಿ. ಅವರ ತಂದೆ ತಾಯಿಗಳಿಗೆ ನಿಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಬೇಕು ಅಂತ ಹೇಳುವುದಕ್ಕೆ ಹೋದರೆ ನಮ್ಮ ಮಕ್ಕಳನ್ನು ಸ್ಕೂಲಿಗೆ ಏತಕ್ಕೆ ಕಳುಹಿಸಬೇಕು. ಆತ ನಮ್ಮಲ್ಲೇ ಇದ್ದರೆ ಏನಾದರೂ ಕೂಡ ವಗ್ಯೆರೆ ಮಾಡಿಕೊಂಡು ನಮಗೆ ಸಹಾಯಕವಾಗುತ್ತಾನೆ ಅಂತ ಹೇಳುತ್ತಾರೆ, ಇಂತಹ ಪರಿಸ್ಥಿತಿ ಬಂದಿದೆ. ಅವನನ್ನು ಸ್ಕೂಲಿಗೆ ಕಳುಹಿಸಿದರೆ ; he is liability to the house ಅಂತ ಹೇಳಿ ಕಳುಹಿಸುವುದಿಲ್ಲ. ಈ ತರಹ ಒಂದು ಶಿಕ್ಷಣ ನಾವು ಈವೊತ್ತು ಕೊಡುತ್ತಾ ಇದ್ದೇವೆ. ಅವನನ್ನು ಎಸ್.ಎಸ್.ಎಲ್.ಸಿ. ಯವರಿಗೆ ಓದುವುದಕ್ಕೆ ಕಳುಹಿಸಿದರೆ ಅವನಿಂದ ಒಂದು ಬಿಡಿ ಕಾಸೂ ಅವರ ತಂದೆ ತಾಯಿಗಳಿಗೆ ಸಿಕ್ಕುವುದಿಲ್ಲ. ಅವನನ್ನು ಯಾವುದಾದರೂ ಕೂಲಿ ವಗ್ಯೆರೆಗೆ ಕಳುಹಿಸಿದರೆ ಏನಾದರೂ ತಂದುಕೊಡುತ್ತಾನೆ ಅನ್ನುವ ಭಾವನೆ ಅವರಿಗೆ ಇದೆ. ಈ ಕಂಪಲ್ಸರಿ ಎಜುಕೇಷನ್‌ನ ಒಂದು ಲಕ್ಷಣ ನೋಡಿದರೆ ಈ ರೀತಿ ಇದೆ ಅವನನ್ನು ಕೂಲಿಗೆ ಕಳುಹಿಸಿದರೆ ೧೫೦ ರೂಪಾಯಿಯನ್ನಾದರೂ ಸಂಪಾದನೆ ಮಾಡಿ ನಮಗೆ ತಂದುಕೊಡುತ್ತಾನೆ ಅನ್ನುವ ಭಾವನೆ ಅವರಿಗೆ ಇರುವುದರಿಂದ ಆ ಮಕ್ಕಳನ್ನು ಸ್ಕೂಲಿಗೆ ಖಡ್ಡಾಯವಾಗಿ ಕಳುಹಿಸಿಕೊಡಿ ಎಂದರೆ ಅವರು ಹೇಗೆ ಕಳುಹಿಸಿಕೊಡುತ್ತಾರೆ ಹೇಳಿ. ಈ ರೀತಿಯಾಗಿ ಹಳ್ಳಿಯ ಜನವಾದ ಮಾಡುವುದಾದರೆ ಆ ಹಳ್ಳಿಯ ಮಕ್ಕಳಿಗೆ ಯಾವ ರೀತಿ ಯಾದಂಥಾ ಕಂಪಲ್ಸರಿ ಎಜುಕೇಷನ್ ಆಗಬಹುದು ಅನ್ನುವುದನ್ನು ನಾವು ಯೋಚನೆ ಮಾಡಬೇಕು. ನಾವೇನೋ ಕಂಪಲ್ಸರಿ ಎಜುಕೇಷನ್ ಆಗಬೇಕು ಅಂತ ಒಪ್ಪಿಕೊಂಡಿದ್ದೇವೆ ಆದರೆ ದಿನನಿತ್ಯದಲ್ಲಿ ಈ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಾ ಇರತಕ್ಕಂಥಾ ಸ್ಥಿತಿ ಹೀಗೆ ಇದೆ.

ಇನ್ನು ಪ್ರೌಢಶಾಲೆಯ ಶಿಕ್ಷಕರ ವಿಚಾರದ ಬಗ್ಗೆ ನಾನು ವರ್ಣನೆ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ನಾನು ಒಂದು ಚಿತ್ರವನ್ನು ಕೊಡಬಲ್ಲೆ. ಶಾಲೆಗಳಲ್ಲಿ ಸರಿಯಾದ ಮಾಸ್ಟರಿಗೆ ಸರಿಯಾದ ಕುರ್ಚಿಯನ್ನು ಒದಗಿಸಿಲ್ಲ. ಅವರಿಗೆ ಸರಿಯಾದ ಕುರ್ಚಿಯನ್ನು ಒದಗಿಸಬೇಕು. ಕುರ್ಚಿಗೆ ನಾಲ್ಕು ಕಾಲೂ ಇರಬೇಕು, ನಿಜವಾಗಲೂ ಕೂಡ ಅವರು ಅಲ್ಲಿ ಕುಳಿತುಕೊಳ್ಳತಕ್ಕಂಥ ಕುರ್ಚಿಗೆ ಮೂರು ಕಾಲು ಇರುತ್ತದೆ. ಅವರು ಅದರ ಮೇಲೆ ಕುಳಿತುಕೊಂಡು ಇನ್ನೊಂದು ಕಾಲನ್ನು ಗೋಡೆಗೆ ಒದಗಿಸಿ ಬಿಟ್ಟಿರುತ್ತಾರೆ, It is a actual fact. I will prove it. if they come with me. But the Hon'ble Minister for Education is not at all interested in it. ಅವರಿಗೆ ೪ ಕಾಲು ಇರುವ ಕುರ್ಚಿಯನ್ನು ಒದಗಿಸುವುದಕ್ಕೆ ಯೋಗ್ಯತೆ ಇಲ್ಲದೇ ಇರುವ ನಾವು ಅವರು ಚೆನ್ನಾಗಿ ಕೆಲಸ ಮಾಡಬೇಕು ಎಂದು ಹೇಳುತ್ತೇವೆ. ಆ ಶಿಕ್ಷಕನಿಗೆ ಇದರಲ್ಲಿ ಆಸಕ್ತಿ ಇಲ್ಲ. ಅಲ್ಲಿರತಕ್ಕಂಥ ಇವನಿಗೆ ಪಾರ್ಟ್‌ಟೈಮ್ ಜಾಬ್ ಬೇರೆ ಇರುತ್ತದೆ. ತಿಂಗಳಿಗೆ ಇಷ್ಟು ಅಂತ ಸಂಬಳ ಬೇರೆ ಬರುತ್ತದೆ. ಮೂಲತಃ ವ್ಯವಸಾಯದ ಜೊತೆಗೆ ಅವನಿಗೆ ಈ ಒಂದು ಉದ್ಯೋಗ, ಜೊತೆಗೆ ರಾಜಕಾರಣ ಪಂಚಾಯಿತಿ ಎಲೆಕ್ಷನ್, ಅಸೆಂಬ್ಲಿ ಎಲೆಕ್ಷನ್ ಅಂತ ಹೇಳಿ ಅವನಿಗೆ ಬಿಡುವು ಇರುವುದಿಲ್ಲ. ಆ ಸ್ಕೂಲ್ ಟೀಚರಿಗೆ. The job of a school teacher in our state has become a part time job and in whose hands. we have entrusted the destiny of our thousand and thousands of boys and girls ತಾವು ಯಾರೂ ಈ ಒಂದು ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ.

ಶ್ರೀ ಡಿ. ಟಿ. ರಾಮು.—ತಾವು ಈ ಸಭೆಯ ಮುಂದೆ ಸಮಸ್ಯೆಗಳನ್ನು ಇಡುತ್ತಿದ್ದೀರಿ. ಆದರೆ ಪರಿಹಾರವನ್ನು ಹೇಳುತ್ತಿಲ್ಲ. ದಯವಿಟ್ಟು ಪರಿಹಾರವನ್ನು ಹೇಳಿ.

ಶ್ರೀ ಮಳ್ಳೂರ್ ಆನಂದರಾವ್,—ನೀವು ಈ ಒಂದು ಸಮಸ್ಯೆಗಳನ್ನು ಅರ್ಥ ಮಾಡಿಕೊಂಡರೆ ಪರಿಹಾರವನ್ನು ತಾವೇ ಹೇಳುತ್ತೀರಿ. ನೀವು ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲಿ ಎಂದು ನಾನು ಇದನ್ನು ಹೇಳುತ್ತಿದ್ದೇನೆ. ನಾವು ೧೮೫ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಕೊಡುತ್ತಿದ್ದೇವೆ, ಏತಕ್ಕೆ ? ಇದನ್ನು ಅರ್ಥ ಮಾಡಿಕೊಳ್ಳುವ ಜವಾಬ್ದಾರಿ ನಮ್ಮ ನಮ್ಮಲ್ಲಿಯೇ ಇದೆ. ಗೌರ್ನಮೆಂಟ್ ಸೆಕೆಂಡರಿ ಸ್ಕೂಲ್‌ಗಳ ಬಗ್ಗೆ ತಾವು ಸ್ಟಾಟಿಸ್ಟಿಕ್ಸನ್ನು ತೆಗೆದುಕೊಳ್ಳಿ. ಈ ಸರ್ಕಾರಿ ಶಾಲೆಗಳಲ್ಲಿ ಗೌರ್ನಮೆಂಟ್ ಹೈಸ್ಕೂಲ್‌ಗಳಲ್ಲಿ ಕಳೆದ ೧೦ ವರ್ಷದಿಂದ ಎಷ್ಟು ಪರ್ಸೆಂಟೇಜ್ ರಿಸಲ್ಟ್ ಬಂದಿದೆ ಎಂಬುದರ ಬಗ್ಗೆ ಅಂಕಿ ಅಂಶಗಳನ್ನು ತೆಗೆದುಕೊಳ್ಳಿ. ನಾನು ಹೇಳುತ್ತಿರುವುದು ಸರ್ಕಾರಿ ಶಾಲೆಗಳಲ್ಲಿ ಎಷ್ಟು ಬಂದಿದೆ ಎಂಬುದನ್ನು ಮಾತ್ರ. ಏತಕ್ಕೆ ಇಷ್ಟು ಕಡಿಮೆ ರಿಸಲ್ಟ್ ಬರುತ್ತಿದೆ ? ಬೆಂಗಳೂರು ಪೋರ್ಟ್ ಹೈಸ್ಕೂಲು ಅಂತ ಇದೆ. ಬಹುಶಃ ನನ್ನ ಅಂದಾಜಿನ ಪ್ರಕಾರ ಅಲ್ಲಿ ರಿಸಲ್ಟ್ ೫ ಪರ್ಸೆಂಟ್‌ಗಿಂತ ಮೇಲೆ ರಿಸಲ್ಟ್ ಏರಿಲ್ಲ, Bangalore City Fort High school, it is one of the latest andbiggest High schools in Bangalore City ಕಳೆದ ೧೦ ವರ್ಷಗಳಲ್ಲಿ ೫ ಪರ್ಸೆಂಟ್‌ಗಿಂತ ಮೇಲೆ ರಿಸಲ್ಟ್ ಹೋಗಿಲ್ಲ ಸೊನ್ನೆ ಪರ್ಸೆಂಟೇಜ್ ರಿಸಲ್ಟ್ ಬರುತ್ತಾ ಇದ, ಇದು ಸಾಕೇ, ಅಲ್ಲಿ ಸುಮಾರು ೧೫೦೦ ಜನ ಮಕ್ಕಳು ಇರಬಹುದು. ಅಲ್ಲಿಗೆ ಕಲಿಯುವುದಕ್ಕೆ ಹೋಗತಕ್ಕಂಥ ಮಕ್ಕಳ ಸೋಷಿಯಲ್ ಬ್ಯಾಕ್‌ಗ್ರೌಂಡ್ ಬಗ್ಗೆ ಸ್ಟಾಟಿಸ್ಟಿಕ್ಸ್‌ನ್ನು ತಾವು ಕಲೆಕ್ಟ್ ಮಾಡಿ. ಬಡವರ ಮನೆಯಿಂದ ಬರತಕ್ಕಂಥ, ಹಿಂದುಳಿದ ವರ್ಗಗಳಿಂದ ಬರತಕ್ಕಂಥ ಮಕ್ಕಳು, ಮುಸ್ಲಿಂ ಜನಾಂಗದಿಂದ ಬರತಕ್ಕಂಥ ಮಕ್ಕಳು, ಹೀಗೆ ಸಣ್ಣ ಕುಟುಂಬಗಳಿಂದ ಬರತಕ್ಕಂಥ ಮಕ್ಕಳು ಇದ್ದಾರೆ ಅಲ್ಲಿರುವ ಟೀಚರ್‌ಗಳು ಎಂ.ಎಸ್‌ಸಿ., ಬಿ.ಎಸ್‌.ಸಿ., ಬಿ. ಎಡ್., ಮಾಡಿಕೊಂಡಿರುತ್ತಾರೆ. ೨೦-೩೦ ವರ್ಷ ಸರ್ವೀಸ್ ಆದವರು ಇದ್ದಾರೆ. ಇನ್‌ಸ್ಟ್ರುಮೆಂಟ್ಸ್‌ನಿಂದ ಹಿಡಿದು ಪ್ರತಿಯೊಂದು ಸವಲತ್ತುಗಳನ್ನೂ ಅವರಿಗೆ ನಾವು ಕೊಡುತ್ತಿದ್ದೇವೆ. ಇಷ್ಟೆಲ್ಲಾ ಕೊಟ್ಟರು ಕೂಡ ಏತಕ್ಕೆ ಇದರಲ್ಲಿ ಜೀರೋ ರಿಸಲ್ಟ್ ಬರುತ್ತಾ ಇದೆ ? ಸರ್ಕಾರಿ ಸ್ಕೂಲ್‌ಗಳಲ್ಲಿ ಸರಾಸರಿ ೨ ಪರ್ಸೆಂಟ್ ರಿಸಲ್ಟ್ ಬರುತ್ತಿದೆ. ಇದಕ್ಕೆ ಯಾರು ಜವಾಬ್ದಾರರು ? ಸರ್ಕಾರಿ ಶಾಲೆಗಳಲ್ಲಿ ಕಡಿಮೆ ರಿಸಲ್ಟ್ ಬರುವುದಕ್ಕೆ ಕಾರಣವೇನು? What are the results ? Who should be hanged ?ಅವರಿಗೆ ಸಂಬಳ ಕೊಡಲಿಲ್ಲವೇ, ಬೆಂಚು, ಬಿಲ್ಡಿಂಗ್ ಕೊಡಲಿಲ್ಲವೇಕುರ್ಚಿಗಳನ್ನು ಕೊಡಲಿಲ್ಲವೇ. ಶಿಕ್ಷಕರನ್ನು ಕೊಡಲಿಲ್ಲವೇ? ಬೆಂಚು ಕುರ್ಚಿಗಳನ್ನು ಕೊಟ್ಟಿದ್ದೇವೆ ಮಾಸ್ಟರ್‌ಗಳನ್ನು ಕೊಟ್ಟಿದ್ದೇವೆ, ಬಿಲ್ಡಿಂಗ್ ಕೊಟ್ಟಿದ್ದೇವೆ, ಅವರಿಗೆಲ್ಲಾ ಸಂಬಳವನ್ನು ಕೊಟ್ಟಿದ್ದೇವೆ ಇನ್ನೊಂದು ವಿಚಾರವೇನೆಂದರೆ ಮೇಸ್ಟರರಿಗೂ, ಹುಡುಗರಿಗೂ ಇಬ್ಬರಿಗೂ ಅಲ್ಲಿ ಊಟ ಮಾಡುವು

ದಕ್ಕೆ ವ್ಯವಸ್ಥೆ ಮಾಡಿಕೊಟ್ಟಿದ್ದೇವೆ. ಕೆಲವುಸಾರಿ ಹುಡುಗರಿಗೇ ಊಟ ಇರುವುದಿಲ್ಲ, ಹೀಗಾಗಿ ಅಲ್ಲಿ ಕಡಿಮೆ ರಿಸಲ್ಟ್ ಏತಕ್ಕೆ ಬರುತ್ತದೆ? ಅಲ್ಲೆಲ್ಲಾ ೪-೫ ಪರ್ಸೆಂಟ್ ರಿಸಲ್ಟ್ ಬರಬಹುದು. ಯಾವುದೋ ಒಂದು ಶಾಲೆಯಲ್ಲಿ ೧೦ ಪರ್ಸೆಂಟ್ ರಿಸಲ್ಟ್ ಬರಬಹುದು. ಅದಕ್ಕಿಂತ ಮೇಲೆ ಇಡೀ ಸ್ಟೇಟಿನಲ್ಲಿ ಯಾವ ಸರ್ಕಾರಿ ಸ್ಕೂಲ್‌ಗಳಲ್ಲೂ ರಿಸಲ್ಟ್ ಬರುವುದಿಲ್ಲ. ಇದು ಸರ್ಕಾರಿ ಸ್ಕೂಲ್‌ಗಳ ಚಿತ್ರ, ಈ ಚಿತ್ರವನ್ನು ನಾನು ವಿವರಿಸುವುದಕ್ಕೆ ಹೋಗುವುದಿಲ್ಲ. ಈ ಒಂದು ಸ್ಥಿತಿಗೆ ಹಿಂದಿನ ಸರ್ಕಾರ ಕಾರಣನಮ್ಮ ಸರ್ಕಾರ ಕಾರಣ ಅಂತ ಅಲ್ಲ, ಕಳೆದ ೧೦-೨೦ ವರ್ಷಗಳಿಂದ ನಾನೂ ಕಾರಣ, ಎಲ್ಲೂ ಕಾರಣರಾಗಿದ್ದೇವೆ. ನಾನು ಮೊದಲಿನಿಂದಲೂ ಇಂತಿಂತಹ ದುರವಸ್ಥೆ ಇದೆ ಎಂದು ಹೇಳುತ್ತಾ ಬಂದಿದ್ದರೂ ಕೂಡ ಅದನ್ನು ಸರಿ ಮಾಡಿಸುವುದಕ್ಕೆ ಆಗಲಿಲ್ಲವಲ್ಲ, ಇದಕ್ಕೆ ಎಲ್ಲರೂ ಕಾರಣ, ನಾನೂ ಕಾರಣ. ಈ ಸ್ಥಿತಿ ಇದೆ ಈ ನಮ್ಮ ಸರ್ಕಾರಿ ಸ್ಕೂಲ್‌ಗಳಲ್ಲಿ.

ಶ್ರೀ ಬಿ. ಕೆ. ತೆಕ್ಕೇಡ್.—ನೀವು ಸರ್ಕಾರಿ ಸ್ಕೂಲ್‌ಗಳಲ್ಲಿ ೪-೫ ಪರ್ಸೆಂಟ್ ರಿಸಲ್ಟ್ ಬರುತ್ತಿದೆ ಎಂದು ಹೇಳುತ್ತಿದ್ದೀರಿ. ನಿಮಗೆ ಕಾಮಾಲೆಯಾಗಿದೆ ಅಂತ ಅನ್ನಿಸುತ್ತಿದೆ. ಯಾವ ಆಧಾರದ ಮೇಲೆ ಈ ಅಂಕಿ ಅಂಶಗಳನ್ನು ಹೇಳುತ್ತಿದ್ದೀರಿ.

ಶ್ರೀ ಮಳ್ಳೂರ್ ಆನಂದರಾವ್.—ಶ್ರೀಮಾನ್ ತೆಕ್ಕೇಡ್‌ರವರಿಗೆ ಈ ವಿಚಾರ ಗೊತ್ತಿಲ್ಲ. ಇದು ಈ ಒಂದು ಗೌರ್ನಮೆಂಟ್ ಸ್ಕೂಲ್‌ಗಳ ಚಿತ್ರ. ಶ್ರೀಮಾನ್ ತೆಕ್ಕೇಡ್‌ರವರಿಗೆ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಅವರಿಗೆ ಉತ್ತರ ಕೊಡುವಂತ ಸಾಮರ್ಥ್ಯ ನನ್ನಲ್ಲಿ ಇಲ್ಲ. ಏಕೆಂದರೆ ಇದು ಗೌರ್ನಮೆಂಟ್ ಸ್ಕೂಲ್‌ಗಳ ವಿಚಾರ. ಇವತ್ತು ಗೌರ್ನಮೆಂಟ್ ಸ್ಕೂಲ್‌ಗೆ ಯಾರೂ ತಮ್ಮ ಮಕ್ಕಳನ್ನು ಕಳಿಸುವುದಿಲ್ಲ. ಇವತ್ತು ಮಕ್ಕಳಿಗೆ ಸೀಟು ಕೊಡಿಸಿ ಎನ್ನತಕ್ಕಂಥ ಆಹಾಕಾರ ಇದ್ದರೂ ಕೂಡ ಕಾರ್ಪೊರೇಷನ್ ಸ್ಕೂಲ್‌ಗಳಿಗೆ ಗೌರ್ನಮೆಂಟ್ ಸ್ಕೂಲ್‌ಗಳಿಗೆ ಯಾರು ತಮ್ಮ ಮಕ್ಕಳನ್ನು ಕಳಿಸುವುದಿಲ್ಲ, ಕಾರಣ ಏನು ಗೊತ್ತೆ ? ಅಲ್ಲಿ ಸರಿಯಾದ ಶಿಕ್ಷಣವನ್ನು ಕೊಡುವುದಿಲ್ಲ. ಕೂಲಿನಾಲಿಯನ್ನಾದರೂ ಮಾಡಿಬಿಟ್ಟು ಕಾನ್‌ವೆಂಟ್ ಸ್ಕೂಲಿಗೆ ಸೇರಿಸುತ್ತೇವೆ, ಅವರು ಕೇಳತಕ್ಕಂಥ ಡೊನೇಷನ್‌ಕೊಟ್ಟು, ಎಂದು ಮಕ್ಕಳ ತಂದೆತಾಯಿಗಳು ಹೇಳುತ್ತಾರೆ. ಅವರಿಗೂ ತಮ್ಮ ಮಕ್ಕಳು ಮುಂದುವರಿಯಬೇಕೆಂಬ ಆಶೆ ಇರುತ್ತದೆ. ಇದು ಗೌರ್ನಮೆಂಟ್ ಸ್ಕೂಲ್ ಸ್ಥಿತಿ, ಎಜುಕೇಷನಲ್ ಆಡ್ಮಿನಿಸ್ಟ್ರೇಷನ್ ಸ್ಥಿತಿ ಏನಾಗಿದೆ? ವಿಧಾನಸೌಧದಿಂದ ಹಿಡಿದು ತಾಲ್ಲೂಕು ಲೆವಲ್‌ರವರೆಗೆ ಎ.ಇ.ಓ. ಡೆಪ್ಯುಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಸಬ್ಜೆಕ್ಟ್ ಇನ್‌ಪೆಕ್ಟರ್ಸ್ ಇರುತ್ತಾರೆ. ತಾಲ್ಲೂಕಿಗೆ ಒಬ್ಬೊಬ್ಬ, ಒಂದೊಂದು ಸಬ್ಜೆಕ್ಟನ್ನು ನೋಡುವುದಕ್ಕೆ ಒಬ್ಬೊಬ್ಬ ಇರುತ್ತಾನೆ, ಇಷ್ಟೊಂದು ಹಣವನ್ನು ಬಜೆಟ್‌ನಲ್ಲಿ ಇಟ್ಟಿದ್ದೇವೆ ಡೆಪ್ಯುಟಿ ಡೈರೆಕ್ಟರ್. ಎಜುಕೇಶನ್ ಡೈರೆಕ್ಟರ್ ಇದ್ದರೂ ಕೂಡ ಅವರು ಏನು ಡೈರೆಕ್ಟ್ ಮಾಡುತ್ತಿದ್ದಾರೆ ? What is it that the Education Director and Deputy Directors for education are directing ? ಇದನ್ನು ನಾನು ಹೆಚ್ಚಾಗಿ ವಿವರಿಸುವುದಕ್ಕೆ ಹೋಗುವುದಿಲ್ಲ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಇವತ್ತು ಪ್ರೈವೇಟ್ ಸ್ಕೂಲ್‌ಗಳು ಇದೆ. ಬೆಂಗಳನೂರಿಲ್ಲಂತೂ ಹೆಚ್ಚು ಪ್ರೈವೇಟ್ ಸ್ಕೂಲ್‌ಗಳು ಇವೆಯೆಂದು ನಾನು ತಿಳಿದುಕೊಂಡಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಪ್ರೈವೇಟ್ ಪ್ರೈಮರಿ ಸ್ಕೂಲ್‌ಗಳು, ಹೈಸ್ಕೂಲ್‌ಗಳು ಇರುವುದರ ಬಗ್ಗೆ ನನ್ನಲ್ಲಿ ಅಂಕಿ ಅಂಶ ಇದೆ. ಅವರಿಗೆಲ್ಲಾ ಸರ್ಕಾರ ಗ್ರಾಂಟ್ ಕೊಡಬೇಕು. ಬೆಂಗಳೂರಿನಲ್ಲಿರತಕ್ಕಂಥ ಪ್ರೈವೇಟ್ ಪ್ರೈಮರಿ ಮತ್ತು ಹೈಸ್ಕೂಲ್‌ಗಳಿಗೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳಷ್ಟು ಗ್ರಾಂಟ್ ಕೊಡಬೇಕಾಗಿದೆ. ಈ ಬಗ್ಗೆ ನನ್ನಲ್ಲಿ ಬೇಕಾದಷ್ಟು ವಿವರ ಇದೆ. ಇಡೀ ರಾಜ್ಯದಲ್ಲಿ ಈ ಎಜುಕೇಷನ್ ಅಡ್ಮಿನಿಸ್ಟ್ರೇಷನ್ ಸರಿಯಾಗಿಲ್ಲ. ಮುಖ್ಯವಾಗಿ ಈ ಸರ್ಕಾರಿ ಸ್ಕೂಲ್‌ಗಲ್ಲಿ ಎಜುಕೇಷನ್ ಅಡ್ಮಿನಿಸ್ಟ್ರೇಷನ್ ಸರಿಯಿಲ್ಲ. ಸರ್ಕಾರಿ ಸ್ಕೂಲ್‌ಗಳಿಗಾಗಿ ಸಬ್ಜೆಕ್ಟ್ ಇನ್ಸ್‌ಪೆಕ್ಟರ್ಸ್, ಡೆಪ್ಯುಟಿ ಡೈರೆಕ್ಟರ್ಸ್, ಎಜುಕೇಷನ್ ಡೈರೆಕ್ಟರ್‌ಗೆ ಇವರೆಲ್ಲಾ ಇದ್ದರೂ ಕೂಡ ಅವರು ಸರಿಯಾಗಿ ಕೆಲಸ ಮಾಡಿದ್ದೇ ಆಗಿದ್ದರೆ ಇಷ್ಟೊಂದು ಲೋ ಪರ್ಸೆಂಟೇಜ್ ರಿಸಲ್ಟ್ ಬರುತ್ತಾ ಇರಲಿಲ್ಲ. ಇವರನ್ನೊಳಗೊಂಡ ಎಜುಕೇಷನ್ ಅಡ್ಮಿನಿಸ್ಟ್ರೇಷನ್ ಇರತಕ್ಕಂಥ ಕೆಲಸವೇನೆಂದರೆ ಪ್ರವೇಟ್ ಸ್ಕೂಲ್‌ಗಳಿಗೆ ಹೇಗೆ ಸಹಾಯ ಮಾಡಬೇಕು, ಕಳ್ಳಕದೀಮರಿಗೆ ಹೇಗೆ ದುಡ್ಡು ಹೊಡೆಯುವುದಕ್ಕೆ ಹೇಳಿಕೊಡಬೇಕು. ಅವರಿಂದ ಹೇಗೆ ದುಡ್ಡು ತೆಗೆದುಕೊಳ್ಳಬೇಕು ಈ ದಿಕ್ಕಿನಲ್ಲೇ ಅವರು ಕೆಲಸ ಮಾಡುತ್ತಿದ್ದಾರೆ. ನಾನು ಬಹಳ ಜವಾಬ್ದಾರಿಯಿಂದ ಈ ಒಂದು ಆಪಾದನೆಯನ್ನು ಮಾಡುತ್ತಿದ್ದೇನೆ. ತಮಗೆ ಬೇಕಾದರೆ ಇದರಲ್ಲಿರತಕ್ಕಂಥ ಆಫೀಸರ್ಸ್ ಹೆಸರನ್ನು ಪಟ್ಟಿ ಮಾಡಿಕೊಡುತ್ತೇನೆ, ಅವರು ನಡೆಸುತ್ತಾ ಇರತಕ್ಕಂಥ ವ್ಯವಹಾರದಲ್ಲಿ ಮುಚ್ಚಿ

ಹೋಗಿರತಕ್ಕ ಶಾಲೆಗಳು ಎಷ್ಟು, ನಡೆಯುತ್ತಿರತಕ್ಕಂಥ ಶಾಲೆಗಳು ಎಷ್ಟು, ಎಷ್ಟೆಷ್ಟು ಗ್ರಾಂಟ್ ಕೊಟ್ಟಿದ್ದಾರೆ, ವ್ಯಾಪಾರಿ ಮನೋಭಾವದ ಶಾಲೆಗಳಿಗೆ ಎಷ್ಟಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ, ಡಿ.ಇ.ಓ. ಎಷ್ಟು ಜನ ಇದ್ದಾರೆ, ಎಷ್ಟು ಶಾಲೆಗಳು ಪ್ರೈವೇಟ್ ಸ್ಕೂಲ್‌ಗಳ ಜೊತೆಯಲ್ಲಿ ಕೊಲಾಬೊರೇಟ್ ಆಗಿದೆ ಎಂಬುದರ ಬಗ್ಗೆ ಇಡೀ ಪಟ್ಟಿಯನ್ನೇ ನಾನು ತಂದು ಕೊಡುತ್ತೇನೆ ನಾನು ನೋಟೀಸ್ ಕೊಡದೇ ಚಾರ್ಜ್ ಮಾಡುವುದಿಲ್ಲ. ಆದ್ದರಿಂದ ನಾನು ಇದನ್ನು ಇಷ್ಟಕ್ಕೇ ಬಿಟ್ಟಿದ್ದೇನೆ. ಅವರಲ್ಲಿ ಶುದ್ಧವಾದ ಅಡ್ಮಿನಿಸ್ಟ್ರೇಷನ್ ಇರತಕ್ಕಂಥವರು ೨, ೩ ಪರ್ಸೆಂಟ್ ಮಾತ್ರ, ಅಲ್ಲಿ ಕೆಲಸದವರನ್ನು ಶುದ್ಧವಾಗಿ ಇರುವುದಕ್ಕೂ ಬಿಡುವುದಿಲ್ಲ. The corruption has shattered every nerve of educational administration The administration is not more than 3 to 5% The system has developed to an extent that no one can remain uncorrupt ಇದು ಗೌರ್ನಮೆಂಟ್ ಶಾಲೆಗಳಲ್ಲಿ ಇರತಕ್ಕಂಥ ಎಜುಕೇಷನಲ್ ಅಡ್ಮಿನಿಸ್ಟ್ರೇಷನ್. ನಾನು ಬೇಕಾಗಿಯೇ ಇಲ್ಲಿ ಏನೂ ಚಾರ್ಜ್ ಮಾಡಲಿಲ್ಲ. ಏಕೆಂದರೆ ಹಿಂದೆ ನಾನು ಈ ಸಭೆಯಲ್ಲಿ ಅವರ ಹೆಸರುಗಳನ್ನು ಹೇಳಿ, ಈ ಬಗೆ ಎಲ್ಲಾ ಅಂಕಿಅಂಶಗಳನ್ನೂ ಕೊಟ್ಟರೂ ಕೂಡ ಹಿಂದಿನ ಸರ್ಕಾರ ಏನೂ ಕ್ರಮ ತೆಗೆದು ಕೊಳ್ಳಲಿಲ್ಲ ಸರ್ಕಾರ ಕ್ರಮತೆಗೆದುಕೊಳ್ಳುತ್ತದೆ ಎನ್ನುವ ವಿಶ್ವಾಸ ನನಗೆ ಇಲ್ಲ. ಆದ್ದರಿಂದ ಪಟ್ಟಿಯನ್ನು ಕೊಡುವುದಿಲ್ಲ. ಮಾನ್ಯ ಮಂತ್ರಿಯವರು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟರೆ ಶಿಕ್ಷಣ ಇಲಾಖೆಯಲ್ಲಿ ಎಷ್ಟೆಷ್ಟು ಲಂಚಾವತಾರ ನಡೆಯುತ್ತಿದೆ ಎಂಬುದರ ಬಗ್ಗೆ ನಾನು ಪ್ರೈವೇಟಾಗಿ ಬಂದು ಒಂದು ಪಟ್ಟಿಯನ್ನೇ ಕೊಡುತ್ತೇನೆ, ಇನ್ನೊಂದು ವಿಚಾರವೇನೆಂದರೆ ಈ ಒಂದು ಶಿಕ್ಷಣವನ್ನು ಕೊಡುತ್ತಾ ಇರತಕ್ಕಂಥ ಸರ್ಕಾರಿ ಶಾಲೆಗಳನ್ನು ಬಿಟ್ಟರೆ Bulk of the student population are trained in these private schools. ಖಾಸಗೀ ಶಾಲೆಗಳಲ್ಲಿ ಕೆಲವರಿಗೆ ಶಿಕ್ಷಣ ಕೊಡುತ್ತಿದ್ದಾರೆ. ಈಗ ಖಾಸಗೀ ಶಾಲೆಗಳ ಕತೆ ಏನಾಗಿದೆ ಎಂದರೆ ಈ ಬಗ್ಗೆ ಅವರು ಸ್ಪೆಷಲೈಸ್ ಮಾಡಿಕೊಂಡು ಬಿಟ್ಟಿದ್ದಾರೆ. ಖಾಸಗೀ ಶಾಲೆಗಳೇ ಸುತ್ತಮುತ್ತ ಇವೆ. ಈ ಬಗ್ಗೆ ಪುರಾಣ ಹೇಳಬೇಕಾದರೆ ಗಂಟೆಗಟ್ಟಲೆ ಹೇಳಬಲ್ಲೆ. ಅವರು ಹಣವನ್ನು ಹೇಗೆ ಹೇಗೆ ಲೂಟಿ ಹೊಡೆಯುತ್ತಾರೆ ಎಂಬದದನ್ನೂ ಹೇಳಬಲ್ಲೆ. ಪ್ರತಿಯೊಂದು ಶಾಲೆಯಲ್ಲಿ ಏನೇನು ಮಾಡುತ್ತಾರೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ನಾನು ಆ ಕಡೆ ಕುಳಿತಿದ್ದಾಗ ಹೇಳಿದ್ದೇನೆ. ಲಕ್ಷಾಂತರ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿರುವುದರ ಬಗ್ಗೆ ಅವರ ಹೆಸರುಗಳನ್ನು ಕೊಟ್ಟು ಅವರು ಮಾಡುತ್ತಿರತಕ್ಕಂಥ ಅವ್ಯವಹಾರಗಳ ಬಗ್ಗೆ ಡಾಕ್ಯುಮೆಂಟರಿ ಎವಿಡೆನ್ಸ್ ಕೊಟ್ಟರೂ ಸಹ ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಬೆಂಗಳೂರು, ಮೈಸೂರು, ಧಾರವಾಡ ಹುಬ್ಬಳ್ಳಿಯಲ್ಲಿ ಅವರೆಲ್ಲಾ ಆನಂದವಾಗಿ ಓಡಾಡುತ್ತಿರುತ್ತಾರೆ. ಮತ್ತೆ ಅವರು ಏನು ಹೇಳುತ್ತಾರೆ ಎಂದರೆ, ' ಎಜುಕೇಷನ್ ಡಿಪಾರ್ಟ್‌ಮೆಂಟನ್ನು ಈ ಕಡೆ ಜೇಬಿನಲ್ಲಿ ಇಟ್ಟಿದ್ದೇವೆ, ಡೈರೆಕ್ಟರ್‌ಗಳನ್ನು ಆ ಕಡೆ ಜೇಬಿನಲ್ಲಿ ಇಟ್ಟಿದ್ದೇವೆ, ಯಾರು ನಮಗೆ ಏನೂ ಮಾಡುದವುಕ್ಕಾಗುವುದಿಲ್ಲ. ಎಂದು. ಹಿಂದೆ ಕೂಡ ಹೆಸರು ಹೇಳಿದ್ದೇನೆ. ಈಗ ಮತ್ತೆ ಅವರ ಹೆಸರುಗಳನ್ನು ಹೇಳಿ ನನಗೆ ನಾನು ಅಪಮಾನ ಮಾಡಿಕೊಳ್ಳುವುದಕ್ಕೆ ಮತ್ತು ಇಡೀ ಶಾಸಕಾಂಗಕ್ಕೆ ಅಪಮಾನ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ: ಮಳ್ಳೂರ್ ಆನಂದರಾವ್ ಇಷ್ಟಿಷ್ಟುದ್ದ ಪಟ್ಟಿ ಕೊಟ್ಟು ಹೇಳಿದರೂ ಕೂಡ ಯಾರು ಏನು ಮಾಡಿದರು ಎಂದು ಅವರೆಲ್ಲಾ ಹೇಳುತ್ತಾರೆ.

ಯಾರು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಅವರು ನಾನಾ ರೀತಿಯ ಅವ್ಯವಹಾರಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ನಾನು ಇವತ್ತು ಇಲ್ಲಿ ಏನೇ ಹೇಳಲಿ ಅದೆಲ್ಲಾ ರೇಡಿಯೋನಲ್ಲಿ ಬರುತ್ತದೆ. ರೆಕಾರ್ಡ್ಸ್‌ನಲ್ಲಿ ಬರುತ್ತದೆ. ಮತ್ತು ರೆಕಾರ್ಡ್ ಲೆಜಿಸ್ಲೇಚರ್ ಲೈಬ್ರರಿಯಲ್ಲಿ ಅದನ್ನ ಸುರಕ್ಷಿತವಾಗಿ ಇಟ್ಟುಕೊಂಡಿರುತ್ತಾರೆ ಇರಲಿ. ಆದರೆ ನಮ್ಮನ್ನು ಯಾರು ಏನೂ ಮಾಡುವುದಕ್ಕೆ ಆಗುವುದಿಲ್ಲ. ಎಂದು ಅವರು ಹೇಳುತ್ತಾರೆ. ಮೇ ೬ನೇ ತಾರೀಖಿನಿಂದ ಜೂನ್ ೬ನೇ ತಾರೀಖು ಬಂದರೆ ಅವರಿಗೆ ಸುಗ್ಗಿಯ ಕಾಲ ಬಂದ ಹಾಗೆ ಆಗುತ್ತದೆ. ಈ ವಿಷಯವನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಈಗ ಈ ಸಭೆಯಲ್ಲಿ ಇಲ್ಲ. ಅವರು ಎಲ್ಲರ ಮನೆಗಳನ್ನು ಸಹಾ ರೈಡ್ ಮಾಡಿಸುತ್ತಿದ್ದಾರೆ. ಅವರು ಈ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಖಾಸಗೀ ಶಾಲೆಗಳ ಮಾಲೀಕರ ಮನೆಗಳ ಮೇಲೆ ರೈಡ್ ಮಾಡಿಸುವುದಾದರೆ ನಾನು ಅವರಿಗೆ ಒಂದು ಪಟ್ಟಿಯನ್ನು ಕೊಡುತ್ತೇನೆ. ಅವರು ರೈಡ್ ಮಾಡಲಿ ನಾನು ಈ ಮನೆಯಲ್ಲಿ ಅವರ ಹೆಸರುಗಳನ್ನು ಹೇಳಿದರೆ ಸಾಯಂಕಾಲದ ವೇಳೆಗೆ ಬಂಗಾರ, ಕ್ಯಾಷ್, ಬ್ಲಾಕ್ ಮನಿ ಎಲ್ಲವನ್ನು ತೆಗೆದುಕೊಂಡು ಹೋಗಿ ಬೇರೆ

ಕಡೆ ಒಚ್ಚಿಡುತ್ತಾರೆ. ಶಿಕ್ಷಣ ಇಲಾಖೆಯ ಕೆಲವು ಅಧಿಕಾರಿಗಳ ಹೆಸರುಗಳನ್ನು ಕೊಡುತ್ತೇನೆ. ಅದೂ ತಾವು ಅವರ ಮನೆಗಳ ಮೇಲೆ ರೈಡ್ ಮಾಡಿಸುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟರೆ ಮಾತ್ರ ನಾನು ಆ ಹೆಸರುಗಳನ್ನು ಕೊಡುತ್ತೇನೆ. ಮತ್ತು ಅಂತಹವರ ಹೆಸರುಗಳನ್ನು ಪತ್ರಿಕೆಗಳ ಮುಖಪುಟದಲ್ಲಿ ಸ್ಪೆಷಲ್ ಎಡಿಷನ್ ಹೊರಡಿಸಬೇಕು ಮತ್ತು ಅವರ ಹೆಸರುಗಳ ಮುಂದೆ ಅವರ ಫೋಟೋಗಳನ್ನು ಸಹಾ ಹಾಕಿಸುವ ಭರವಸೆಯನ್ನು ಕೊಟ್ಟರೆ ಮಾತ್ರ ನಾನು ಈ ಮನೆಯಲ್ಲಿ ಅವರ ಹೆಸರುಗಳನ್ನು ಕೊಡುತ್ತೇನೆ. ಈಗ ಖಾಸಗೀ ಶಾಲೆಗಳ ವಾರ್ಷಿಕ ಆದಾಯ ಎಷ್ಟು ಎಂಬುದನ್ನು ಹೇಳಬಯಸುತ್ತೇನೆ. ಖಾಸಗೀ ಶಾಲೆಗಳ ಮಾಲೀಕರುಗಳ ವಾರ್ಷಿಕ ಆದಾಯ ಆವರೇಜ್ ೩-೪ ಲಕ್ಷ ರೂಪಾಯಿಗಳು ಈಗ ಕಮಲಾ ನೆಹರು ಮಕ್ಕಳ ಮಂದಿರದಲ್ಲಿ ಸುಮಾರು ೪-೫ ಸಾವಿರ ವಿದ್ಯಾರ್ಥಿಗಳು ಇದ್ದಾರೆ ಅವರು ಮಿನಿಮಮ್ ಒಬ್ಬ ವಿದ್ಯಾರ್ಥಿಯಿಂದ ೫೦ ರೂಪಾಯಿಗಳ ಡೊನೇಷನ್ ತೆಗೆದುಕೊಳ್ಳುತ್ತಾರೆ. ಹೀಗೆಯೇ ಸೆಕೆಂಡರಿ ಶಾಲಾ ವಿದ್ಯಾರ್ಥಿಗಳಿಂದ ಸುಮಾರು ೨೦೦-೧೫೦ ರೂಪಾಯಿಗಳನ್ನು ಡೊನೇಷನ್ ತೆಗೆದುಕೊಳ್ಳುತ್ತಾರೆ.

ಹೀಗೆಯೇ ಶ್ರೀ ವಿವೇಕಾನಂದ ಖಾಸಗೀ ಶಾಲೆಯಲ್ಲಿ ಸುಮಾರು ೪-೫ ಸಾವಿರ ಮಕ್ಕಳ ಇದ್ದಾರೆ ಅಲ್ಲಿಗೆ ಬಡ ಮಕ್ಕಳು ಮಾತ್ರ ಹೋಗುತ್ತಾರೆಯೇ ವಿನಃ ಸಾಹುಕಾರರ ಮಕಳು ಆ ಶಾಲೆಗೆ ಹೋಗುವುದಿಲ್ಲ. ಆ ಶಾಲೆಯ ಮ್ಯಾನೇಜ್‌ಮೆಂಟಿನವರ ವಾರ್ಷಿಕ ಆದಾಯ ಸುಮಾರು ೫ ಲಕ್ಷ ರೂಪಾಯಿಗಳು. ಹೀಗೆಯೇ ಸರಸ್ವತಿ ವಿದ್ಯಾ ಮಂದಿರ ಹಾಗೂ ಭಾರತಿ ವಿದ್ಯಾ ಮಂದಿರಗಳಲ್ಲಿ ೫ ಸಾವಿರ ಮಕ್ಕಳು ಇದ್ದಾರೆ. ಅವರಲ್ಲಿಯೂ ಸಹಾ ನರ್ಸರಿ ಶಾಲೆಗಳಿಗೆ ಸೇರುವ ಮಕ್ಕಳಿಂದ ೧೦೦-೨೦೦ ರೂಪಾಯಿಗಳಿಂದ ೧೦೦೦ ಸಾವಿರ ರೂಪಾಯಿಗಳವರೆವಿಗೂ ಡೊನೇಷನ್ ತೆಗೆದುಕೊಳ್ಳುತ್ತಾರೆ. ಈ ಎಲ್ಲಾ ದುಡ್ಡು ಎಲ್ಲೆಲ್ಲಿ ಯಾರ ಜೇಬಿಗೆ ಹೋಗಿ ಸೇರುತ್ತದೆ ಎಂಬುದೆಲ್ಲಾ ಯಾರೂ ಚೆಕ್ ಮಾಡುವುದಕ್ಕೆ ಹೋಗುವುದಿಲ್ಲ. what is its income? It is Rs. 5 lakhs in the month of May. ಈ ಶಿಕ್ಷಣ ಇಲಾಖೆಯ ಅಧಿಕಾರಿಗಳು ಚೆಕ್ ಮಾಡುವುದಕ್ಕೆ ಬಂದಾಗ ಅವರಿಗೆ ೫ ಸಾವಿರ ೧೦ ಸಾವಿರ ಮತ್ತು ೨೦ ಸಾವಿರ ರೂಪಾಯಿಗಳನ್ನು ಬಿಸಾಡಿದರೆ ಸಾಕು ಅವರು ಒಂದು ಸೆಲ್ಯೂಟ್ ಹೊಡೆದು ಹೋಗುತ್ತಾರೆ. It is an open secret. They can purchase anybody. ಈಗ ಹೊಸದಾಗಿ ಬಂದಿರುವ ಎಜುಕೇಶನ್ ಮಂತ್ರಿಗಳನ್ನು ಬಿಟ್ಟರೆ ಉಳಿದ ಎಲ್ಲಾ ಅಧಿಕಾರಿಗಳನ್ನು ಸಹಾ ನಾವು ಪರ್ಚೆಜ್ ಮಾಡುತ್ತೇವೆ ಎಂದು ಹೇಳುತ್ತಾರೆ, ಆದರೆ ಸೆಕ್ರೆಟರಿಯೇಟ್‌ನಲ್ಲಿ ಮಾತ್ರ ೨-೩ ಪರ್ಸೆಂಟ್ ಅಧಿಕಾರಿಗಳು ಇದ್ದಾರೆ ಅವರು ಬಹಳ ಜೋರಾಗಿದ್ದಾರೆ ಅವರು ತಾನೇ ಎಷ್ಟು ದಿವಸಗಳ ವರೆಗೆ ನೋಡುತ್ತಾರೆ ಅವರೂ ಸಹ ನಮ್ಮ ಬಲೆಗೆ ಒಂದು ದಿವಸ ಬಿದ್ದೇ ಬೀಳುತ್ತಾರೆ ಎಂದು ಹೇಳುತ್ತಾರೆ. ಆಗ ಅವರನ್ನು ಸಹಾ ನಾವು ಪರ್ಚೇಜ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇವತ್ತು ಶಿಕ್ಷಣ ಇಲಾಖೆಯಲ್ಲಿ ಬಹಳ ಲೂಟಿಯಾಗುತ್ತಿದೆ. ಇದಕ್ಕೆ ಪರ್ಮಿಷನ್ ಕೊಟ್ಟವರು ಯಾರು?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಮಂತ್ರಿಗಳನ್ನು ಬಿಟ್ಟು ಬಾಕಿ ಎಲ್ಲಾ ಅಧಿಕಾರಿಗಳನ್ನು ಪರ್ಚೇಜ್ ಮಾಡುತ್ತೇವೆ ಎಂದು ಹೇಳಿದರು ಈ ಒಂದು ಅಲಿಗೇಷನ್‌ನಲ್ಲಿ ಎಲ್ಲಾ ಆಫೀಸರುಗಳ ಮೇಲೂ ಅಭಿಪ್ರಾಯ ಬರುವ ಹಾಗೆ ಬಾರದು. It is too sweeping a statement. It is better that he should give the specific instances in writing to the Minister concerned. But instead, the Hon'ble Member is charging that the entire department and all the officers in the Education department are corrupt which is too sweeping a statement. I think the Hon'ble Member will have to be very careful in choosing the words and making certain allegations. That will amount to demoralising the entire department. I do not think that it is a fair comment There may be some irregularities but making such a sweeping statement and making remarks against the entire department is not good and it is not fair on the part of the Hon ble Member. There are good officers, efficient offiers and they will feel hurt about it. I do not think that it should go into the records. It would be better if the Hon'ble Member makes corrections of his statement.

ಶ್ರೀ ಮಳ್ಳೂರು ಆನಂದರಾವ್.--ನಾನು ಎಲ್ಲಾ ಅಧಿಕಾರಿಗಳ ಮೇಲೂ ಚಾರ್ಜ್ ಮಾಡಿಲ್ಲ. ಇದರಲ್ಲಿ ೨ ಪಾಯಿಂಟ್ಸ್ ಹೇಳಿದ್ದೇವೆ. ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಆದರೆ ಎಲ್ಲರೂ ಅಲ್ಲ ಅಂತ. That is not my charge.

SRI M. VEERAPPA MOILY.—The Hon'ble Member is quoting a statement of those people who are alleged to be committing irregularities. Do you think that such people are virtuous people and whose statement would have to be given any credibility?

SRI MALLUR ANANDA RAO.—They are the mebers, unfortunately, who rule the Education Department today. I will give you their names. will you take immediate action against them? will you arrest them? I do not want to mention their names on the floor of this House. They are ruling and they are controlling the Department.

SRI G. B. SHANKARA RAO.—Do not think that the Government is so weak as to be controlled by the outsiders.

SRI MALLUR ANANDA RAO,—I am also in the Government. The Government is very strong. But unfortunately it would not get any cognisance at all. I will give you the list of those corrupt officers. will you have a raid on those people?

SRI G. B. SHANKARA RAO.—The society consists of good people and bad people, virtuous people and corrupt people. There may be one or two corrupt persons. In that way you cannot generalise the issue. Your charge that the entire department and all the officers are corrupt, the department is controlled by corrupt people etc., is very bad.

SRI MALLUR ANANDA RAO.—I am not making any sweeping statement or irresponsible remarks......

SRI C. M ARUMUGHAM.—Sir, Sri Mallur Ananda Rao has just now said that he is also in the Government Sir, Government means the Ministers. when the Cabinet meets and takes a decision then it is called the decision of the Government. Even a Minister's decision alone does not from the part of the Government Order. So, a M.L A or M.L C., may belong to the ruling Party but he cannot be said to be in the Government. Let there be corrections in this connection. Otherwise all M.L.As, and M.L.Cs.· will think that they are in the Government. I want a ruling from you on this point.

MR. DEPUTY SPEAKER.—The intention of the Hon'ble Member is that he belongs to the Ruling party and he is part and parcel of this Legislative Assembly. I would request the Hon'ble Member to please come to the point and be specific.

ಶ್ರೀ ಮಳ್ಳೂರು ಆನಂದರಾವ್.—ನಾನು ಪಾಯಿಂಟ್ ಬಿಟ್ಟು ಹೋಗುವ ಅಭ್ಯಾಸವಿಲ್ಲ. ನಾನು ಪಾಯಿಂಟ್ ಬಿಟ್ಟು ಹೋಗುವುದಿಲ್ಲ. ಇವತ್ತು ನಮ್ಮ ಪಾರ್ಟಿಯಲ್ಲಿ ಈ ವಿಷಯದಲ್ಲಿ ವಿಪುಲವಾಗಿ ಚರ್ಚೆಯಾಗಿದೆ. ಸುಮಾರು ೭೦ ನಿಮಿಷಗಳ ಕಾಲ ಇದರ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. We will come down heavily ou these corrupt private schools, The public will know about it we are going to take action. ಈ ರೀತಿಯಾದ ಅವ್ಯವಹಾರಗಳು ನಡೆದಿರತಕ್ಕಂತಹ ಶಾಲೆಗಳಲ್ಲಿ ಅಧಿಕಾರಿಗಳ ಒಂದು ಲಂಚಾವತಾರವಾಗಿದೆ. ಈ ಶಿಕ್ಷಣ ಇಲಾಖೆಯ ಅಧಿಕಾರಿಗಳ ಹೆಸರುಗಳನ್ನು ಹೇಳುತ್ತೇನೆ. ಶ್ರೀಮಾನ್ ಶಂಕರರಾವ್‌ರವರು ಅವರ ಮೇಲೆ ಕ್ರಮ ತೆಗೆದುಕೊಂಡರೆ ಅವರನ್ನು ನಾಳೆ ಬೆಳಗ್ಗೆ ಕರೆದು ನಾನೆ ಅವರ ಕೊರಳಿಗೆ ಹೂವಿನ ಹಾರವನ್ನು ಹಾಕುತ್ತೇನೆ. ನಾನು ಹಿಂದಿನ ಸಭೆಯಲ್ಲಿ ಕಮಲಾ ನೆಹರು ಮಕ್ಕಳ ಮಂದಿರದ ಮೇಲೆ ಆಪಾದನೆಯನ್ನು ಮಾಡಿದ್ದೆ. ಆಮೇಲೆ ಇವತ್ತು ಶ್ರೀಮತಿ ಇಂದಿರಾಗಾಂಧಿಯವರ ತಾಯಿಯವರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ. ಮತ್ತು ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಎಲ್ಲಾ ಅವರಿಗೆ ಕಳುಹಿಸಿಕೊಟ್ಟ ಮೇಲೆ ಮಾನ್ಯ ವಿದ್ಯಾ ಮಂತ್ರಿಗಳು ಒಂದು ಸ್ಟೇಟ್‌ಮೆಂಟನ್ನು ಈ ಸಭೆಯಲ್ಲಿ ಮಾಡಿದರು. ಆಮೇಲೆ ಆ ಶಾಲೆಯ ಮುಖ್ಯ ದಾಖಲೆಗಳನ್ನು ಸೀಜ್ ಮಾಡಿದರು. ಸೀಜಾದ ರೆಕಾರ್ಡ್ಸ್ ಹಾಗೆಯೇ ಬಿದ್ದಿವೆ. ಆದರೆ ಏನೂ ಆಗಿಲ್ಲ. ಇದು ನಡೆದು ಸುಮಾರು ೨–೩ ತಿಂಗಳಾಯಿತು. ಆದರೆ ನಾವು ಈಗಾಗಲೇ ಮತ್ತೇ ಈ ಸಭೆಯಲ್ಲಿ ಸೇರಿದ್ದೇವೆ. ಇಲ್ಲಿಗೆ ೨ ತಿಂಗಳಾಯಿತು. ಇವತ್ತಿನ ದಿವಸ ಕೋಆಪರೇಟಿವ್ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಈ ಖಾಸಗೀ ಶಾಲೆಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಂದು ನಾನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಖಾರ್ಗೆಯವರಿಗೆ ಹೇಳಿದ್ದೇನೆ. ಆದರೆ ಏನು ಕ್ರಮ ತೆಗೆದುಕೊಳ್ಳಬೇಕೊ ಅಷ್ಟು ಕ್ರಮವನ್ನು ಅವರು ತೆಗೆದುಕೊಂಡಿದ್ದಾರೆ. ಮೇ ೧೮ನೇ ತಾರೀಖು ನೋಟೀಸು ಬಂದ ಮೇಲೆ ಯಡಿಯೂರು ಬಳಿ ಇರುವ ಈ ಸೊಸೈಟಿಗೆ ಸಂಬಂಧಪಟ್ಟ ೨೦ ಲಕ್ಷ ರೂಪಾಯಿಗಳ ಬೆಲೆ ಬಾಳುವ ಪ್ರಾಪರಟಿ ಇದೆ. ಅದನ್ನೆಲ್ಲಾ ಇವತ್ತಿನ ದಿವಸ ಕೊಳ್ಳೆ ಹೊಡೆದುಕೊಂಡು ಹೋಗುವ ಪ್ರಸಂಗ ಬಂದಿದೆ. ಮೇ ೧೮ನೇ ತಾರೀಖು ಡೆಕ್ಕನ್ ಹೆರಾಲ್ಡ್ ಪೇಪರಿನಲ್ಲಿ ನೋಡಿ ಒಂದು ಲೀಗಲ್ ನೋಟೀಸನ್ನು ಇಷ್ಯೂ ಮಾಡಿದ್ದಾರೆ. ಅದೇನೆಂದರೆ ಈ ಪ್ರಾಪರಟಿಯ ಮೇಲೆ ಯಾರದಾದರೂ ತಕರಾರು ಇದ್ದರೆ ಸಲ್ಲಿಸಬಹುದು ಎಂದು. ಆದರೆ ಈ ವಿಷಯದ ಬಗ್ಗೆ ಈ ಮನೆಯಲ್ಲಿ ನಾವು ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಆದರೂ ಸಹಾ ತಾವು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಇವರು ಈ ರೀತಿಯಾಗಿ ಮಾರಾಟ ಮಾಡುತ್ತೇವೆಂದು ಪೇಪರಿನಲ್ಲಿ ಪಬ್ಲಿಷ್ ಮಾಡಿದ್ದಾರೆ ಬೇಕಾದರೆ ನಾನು ಇದನ್ನು ತಮಗೂ ಕಳುಹಿಸಿಕೊಡುತ್ತೇನೆ ತಾವೂ ಸಹಾ ನೋಡಬಹುದು.

೪–೩೦ ಪಿ.ಎಂ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈ ಒಂದು ಉದಾಹರಣೆಯನ್ನು ಏತಕ್ಕೆ ಕೊಡುತ್ತಿದ್ದೇನೆಂದರೆ, ಇವರು ಕಳೆದ ೩೦ ವರ್ಷಗಳಿಂದ ಬೆಂಗಳೂರು ನಗರದಲ್ಲಿ ಈ ರೀತಿ ನಡೆಸಿಕೊಂಡು ಬಂದು ಇವೊತ್ತು ೭೦ ಲಕ್ಷ ರೂ. ಗಳಷ್ಟು ಆಸ್ತಿ ಮಾಡಿಕೊಂಡಿದ್ದಾರೆ. ಇದನ್ನು ನಡೆಸುತ್ತಿರುವ ಮನುಷ್ಯ ಬಹಳ ಪವರ್‌ಫುಲ್ ಆಗಿದ್ದಾನೆ. ಆತನ ಹಿಂದ ೪–೫ ಜನರಿದ್ದಾರೆ. ಈ ಮನುಷ್ಯ ಆ ಸ್ಕೂಲಿಗೆ ಸೇರಿದ ಆಸ್ತಿಯನ್ನು ಮಾರಿಕೊಂಡು ಹೋಗುವುದರಲ್ಲಿದ್ದಾನೆ. ಈಗ ೨೦ ಲಕ್ಷ ರೂ. ಗಳ ಆಸ್ತಿಯನ್ನು ಮಾರಾಟಕ್ಕೆ ಇಟ್ಟಿದ್ದಾನೆ. ಆದಕಾರಣ ಇದನ್ನು ಕೂಡಲೇ ಸಿ.ಒ.ಡಿ.ಗೆ ತಾವು ರೆಫರ್ ಮಾಡಬೇಕು. ಇಲ್ಲದಿದ್ದರೆ ಆತ ಅದನ್ನು ಮಾರಾಟ ಮಾಡಿಕೊಂಡು ಹೋಗಿಬಿಡುತ್ತಾನೆ. ಆದಕಾರಣ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ರಿಜಿಸ್ಟ್ರಾರ್ ಆಫ್ ಸೊಸೈಟೀಸ್ ಅವರ ಕಡೆಯಿಂದ ನೋಟೀಸ್ ಹೋದರೆ ಆತ ಅದನ್ನು ಪಡೆದುಕೊಳ್ಳುವುದಿಲ್ಲ. ಇದರ ಜೊತೆಗೆ ಅಲ್ಲಿ ಕೆಲಸ ಮಾಡುತ್ತಿರುವ ೪೦ ಜನ ಟೀಚರ್‌ಗಳಿಗೆ ಕಳೆದ ೫ ವರ್ಷಗಳಿಂದ ಸಂಬಳವಿಲ್ಲ. ದೊಡ್ಡದೊಡ್ಡ ಅಧಿಕಾರಿಗಳು ಅಲ್ಲಿಗೆ ಹೋಗಿ ತನಿಖೆ ಮಾಡುವುದಿಲ್ಲ. ಕಛೇರಿಯಲ್ಲಿಯೇ ಕುಳಿತು ತನಿಖೆ ಮಾಡುತ್ತಾರೆ. ಕೆಲವು ಸಲ ಎ.ಇ.ಒ. ಅವರನ್ನು ತನಿಖೆ ಮಾಡಲು ಕಳುಹಿಸಬಹುದು, ಅಷ್ಟೇ, ಆದರೆ ಮೇಲಿನ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡುವುದಿಲ್ಲ. ಇದು ಸರಿಯಲ್ಲ. ಈ ಬಗ್ಗೆ ಕೂಡರೇ ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ಉದಾಹರಣೆ ಕೊಡಬೇಕೆಂದರೆ, ಜಯನಗರದ ೮ನೇ ಬ್ಲಾಕ್‌ನಲ್ಲಿ ಒಂದು ಶಾಲೆ ಇದೆ. ಎಚ್.ಎಂ.ಟಿ. ಅಧಿಕಾರಿ ಒಬ್ಬರು ಇದನ್ನು ನಡೆಸುತ್ತಿ

ದ್ದಾರೆ. ಇವರು ತಮ್ಮ ಮನೆ ಹೆಂಗಸರ ಹೆಸರಿನಲ್ಲಿ ಒಂದು ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ನಡೆಸುತ್ತಿದ್ದರೂ ಸಹ ಆ ಕಟ್ಟಡವನ್ನು ತಾವು ಕಟ್ಟಿಸಿದ್ದು ಎಂದು ಹೇಳಿರುವ ಕಾರಣದಿಂದ, ವಿದ್ಯಾ ಇಲಾಖೆಯವರು ೧೨ ಸಾವಿರ ರೂ.ಗಳ ಗ್ರಾಂಟ್ ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟ ಆರ್ಡರ್‌ನ್ನು ನಾನು ಕಳೆದ ಸಲ ಇಲ್ಲಿ ಓದಿದ ಮೇಲೆ ಈ ಕೇಸನ್ನು ವಿಜಿಲೆನ್ಸ್‌ಗೆ ರೆಫರ್ ಮಾಡಲಾಯಿತು. ಆದರೆ ಇನ್ನೂ ಸಹ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. Can there be a fraud more than this? ಇಷ್ಟೆಲ್ಲಾ ನಡೆದಮೇಲೆ ಆತ ಅಲ್ಲಿ ಹೊಸಹೆಸರಿನ ಬೋರ್ಡ್ ಹಾಕಿದ್ದಾನೆ. ಆ ಎಜುಕೇಷನ್ ಸೊಸೈಟಿಯ ಹೆಸರನ್ನೇ ಬದಲಾವಣೆ ಮಾಡಿದ್ದಾನೆ. ಇಂತಹ ಅನೇಕ ಉದಾಹರಣೆಗಳನ್ನು ಬೇಕಾದರೆ ಕೊಡುತ್ತೇನೆ. ಆದರೆ ನನಗೆ ಸಮಯವಿಲ್ಲ. ಆದ್ದರಿಂದ ದಯಮಾಡಿ ಇಂತಹ ಸ್ಕೂಲುಗಳ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ನಾವೂ ನೀವೂ ಸುಮ್ಮನೆ ಕುಳಿತುಕೊಂಡರೆ ಇಂತಹ ಅಕ್ರಮಗಳು ನಡೆಯುತ್ತಲೇ ಇರುತ್ತದೆ. ಆದಕಾರಣ ಕೂಡಲೇ ಅಲ್ಲಿ ಕಲೆಕ್ಟ್ ಮಾಡುತ್ತಿರುವ ಫೀ ಏನಿದೆ, ಅದನ್ನು ಬ್ಯಾನ್ ಮಾಡಬೇಕು. ಈ ಬಗ್ಗೆ ಇವೊತ್ತು ನಮ್ಮ ಪಕ್ಷದ ಸಭೆಯಲ್ಲಿ ವ್ಯಾಪಕವಾದಂಥ ಚರ್ಚೆ ನಡೆದಿದೆ. ಅದರ ಮೇಲೆ ಸರ್ಕಾರ ಇನ್ನು ಕೆಲವೇ ದಿನಗಳಲ್ಲಿ ಈ ಬಗ್ಗೆ ಒಂದು ಪ್ರಪೋಸಲ್‌ನ್ನು ಈ ಸಭೆಯ ಮುಂದೆ ತರುತ್ತದೆಂದು ನಾನು ತಿಳಿದಿದ್ದೇನೆ. ಈಗ ನರ್ಸರಿ ಶಾಲೆಗಳಲ್ಲಿ ೩೦-೪೦ ರೂ.ಗಳ ವರೆಗೆ ಫೀಯನ್ನು ಕಲೆಕ್ಟ್ ಮಾಡುತ್ತಿದ್ದಾರೆ. ನಮ್ಮ ಮಕ್ಕಳನ್ನು ಮೆಡಿಕಲ್ ಕಾಲೇಜಿನಲ್ಲಿ ಓದಿಸಬಹುದು, ಆದರೆ ನರ್ಸರಿ ಶಾಲೆಗಳಲ್ಲಿ ಓದಿಸುವುದು ಕಷ್ಟವಾಗಿದೆ. ಏಕೆಂದರೆ ನರ್ಸರಿ ಶಾಲೆಗಳಿಗೆ ಸೇರಿಸಲು ೨ ಸಾವಿರ ರೂ. ಗಳವರೆಗೆ ಅಡ್ಮಿಷನ್ ಫೀ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿಯಿಂದ ಪ್ರೈವೇಟ್ ಮೆನೇಜ್‌ಮೆಂಟ್‌ನವರು ಹಣದ ಲೂಟಿ ಮಾಡುತ್ತಿದ್ದಾರೆ. ಇದನ್ನೆಲ್ಲಾ ನೋಡುತ್ತಾ ನಾವು ಸುಮ್ಮನೆ ಕುಳಿತಿದ್ದೇವೆ. We have left the parents and the students to the mercy of these private management. ಇದರ ಬಗ್ಗೆ ನಾನು ಈಗ ಹೆಚ್ಚು ಚರ್ಚೆ ಮಾಡುವುದಿಲ್ಲ. ಏಕೆಂದರೆ, ನಮ್ಮ ಸರ್ಕಾರ ಈ ವಿಚಾರದಲ್ಲಿ ಕ್ರಮ ಕೈಕೊಳ್ಳಬೇಕೆಂದು ನಿಶ್ಚಯ ಮಾಡಿದೆ. ಇದಕ್ಕೆಲ್ಲಾ ಪರಿಹಾರವೇನು ಎಂದು ಮಾನ್ಯ ರಾಮು ಅವರು ಕೇಳಿದರು. ಇದಕ್ಕೆ ಪರಿಹಾರವಿದೆ. ಆ ಪರಿಹಾರ ಏನೆಂದರೆ, ಈಗ ತಾಲ್ಲೂಕು ಲೆವೆಲ್‌ವರೆಗೆ ಇರತಕ್ಕಂಥ ಖಾಸಗೀ ವಿದ್ಯಾಸಂಸ್ಥೆಗಳನ್ನು ವಿದ್ಯಾ ಇಲಾಖೆಯಿಂದ de-link ಮಾಡಬೇಕು. ಅಂದರೆ ಈ ಶಾಲೆಗಳಿಗೆ ಗ್ರಾಂಟ್‌ನ್ನು ಮಂಜೂರು ಮಾಡುವ ಅಧಿಕಾರ ವಿದ್ಯಾ ಇಲಾಖೆಗೆ ಇರಬಾರದು. ಆಗ ವಿದ್ಯಾ ಇಲಾಖೆಯಲ್ಲಿರುವಂತಹ ಇನ್ಸ್‌ಪೆಕ್ಟರ್‌ಗಳೆಲ್ಲಾ ಸರ್ಕಾರದ ಶಾಲೆಗಳ ಕಡೆಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುತ್ತದೆ. ಮತ್ತು sincere ಆಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. My first suggestion is that de-link these private schools from the administration and control and direction of this Education Department. ಈ ರೀತಿ ಮಾಡಿದರೆ ಈ ಪ್ರೈವೇಟ್ ಸ್ಕೂಲುಗಳು ಏನಾಗಬೇಕು ಎಂದು ತಾವು ಕೇಳಬಹುದು? ಇದಕ್ಕೆ ನನ್ನ ಸಲಹೆಯಾದರೂ ಇಷ್ಟೆ, ಇವುಗಳು ಈಗ ಏನು ಅಕ್ರಮವಾಗಿ ಫೀಯನ್ನು ವಸೂಲಿ ಮಾಡುತ್ತಿವೆ ಮತ್ತು ಫೀ ಜೊತೆಗೆ ಇನ್ನೂ ಅನೇಕ ತರಹದ ಫೀಯನ್ನು ವಸೂಲ್ ಮಾಡುತ್ತಿವೆ ಇದನ್ನೆಲ್ಲಾ ತಡೆಗಟ್ಟಲು ಹಾಗೂ ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ನಿಲ್ಲಿಸಲು ಮತ್ತು ಅವರು ಈ ಶಾಲೆಗಳ ಹೆಸರಿನಲ್ಲಿ ಹಾಗೂ ಪ್ರೈವೇಟ್ ಪ್ರಾಪರ್ಟಿ ಹೆಸರಿನಲ್ಲಿ ಏನು ಮಜಾ ಮಾಡುತ್ತಿದ್ದಾರೆ, ಇದನ್ನೆಲ್ಲಾ ನಿಲ್ಲಿಸಬೇಕಾದರೆ ಸರ್ಕಾರದವರು ಕೂಡಲೇ ಒಂದು statutory body ಯನ್ನು ರಚನೆ ಮಾಡಬೇಕು Education Development Authority ಎಂಬ ಹೆಸರಿನಲ್ಲಿ ಒಂದು independent body ರಚನೆ ಮಾಡಬೇಕು. ಮತ್ತು ಅದಕ್ಕೆ ನಾವು ಈಗ ಏನು ಬಜೆಟ್ ಪಾಸ್ ಮಾಡುತ್ತೇವೆ, ಇದರ ಅರ್ಧ ಹಣವನ್ನು ಕೊಡಬೇಕು. ನಂತರ ಈ ಅಥಾರಿಟಿಯವರೇ ಎಲ್ಲ ಖಾಸಗೀ ಶಾಲೆಗಳನ್ನು ಕಂಟ್ರೋಲ್ ಮಾಡುವುದಕ್ಕೆ ಅಧಿಕಾರ ಕೊಡಬೇಕು. ಇದಕ್ಕೂ ಮೊದಲು ಈಗ ನರ್ಸರಿಯಿಂದ ಹಿಡಿದು ಕಾಲೇಜುಗಳ ಮಟ್ಟದವರೆಗೆ ವಸೂಲಿ ಮಾಡುತ್ತಿರುವ ಎಲ್ಲ ತರಹದ ಫೀಯನ್ನು ಬ್ಯಾನ್ ಮಾಡಬೇಕು. ಈಗ ಖಾಸಗಿಯವರು ನಮ್ಮ ರಾಜ್ಯದಲ್ಲಿ ನರ್ಸರಿಯಿಂದ ಹಿಡಿದು ಪ್ರೊಫೆಷನಲ್ ಕಾಲೇಜುಗಳವರೆಗೆ ನಡೆಸುತ್ತಿದ್ದಾರೆ. ಬಿ.ಎ., ಬಿ.ಎಸ್.ಸಿ, ಬಿ.ಎಡ್, ಟೀಚರ್ಸ್ ಟ್ರೈನಿಂಗ್ ಕಾಲೇಜ್‌ಗಳು. ಬಿ.ಇ. ಕಾಲೇಜುಗಳು, ಮೆಡಿಕಲ್ ಕಾಲೇಜುಗಳು ಹೀಗೆ ಎಲ್ಲ ತರಹದ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಇಂದಿರಾನಗರದಲ್ಲಿ ಒಬ್ಬರು ಬಿ.ಎಚ್. ಕಾಲೇಜನ್ನು ಪ್ರಾರಂಭ ಮಾಡಿ ಹುಡುಗರಿಂದ ೬ ಲಕ್ಷ ರೂ.ಗಳವರೆಗೆ ಫೀ ಕಲೆಕ್ಟ್ ಮಾಡಿಕೊಂಡರು. ನಂತರ ಅಲ್ಲಿ ಓದಿದ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿ

ಸುವುದಿಲ್ಲವೆಂದು ಸರ್ಕಾರದವರು ಹೇಳಿದಾಗ ಅವರು ಹೈಕೋರ್ಟಿಗೆ ಹೋದರು. ನಂತರ ಹೈಕೋರ್ಟಿನವರು 'Students are on list. you give them admissions' ಎಂದು ಡೈರೆಕ್ಷನ್ ಕೊಟ್ಟರು. ಅದರ ಪ್ರಕಾರ ಇವರು ನಡೆದುಕೊಂಡರು. ಈ ರೀತಿ ಸಹಾಯ ಮಾಡುವುದು ಸರಿಯೇ ?

SRI G.B. SHANKAR RAO.—We cannat help. We have not permitted the institution to run the Colleges either B.Ed or Training College. If the Court intervenes and if the court gives directions to the Government, the Government is helpless. We connot do anything.

ಅಧ್ಯಕ್ಷರು.—ತಾವು ಕಾಲೇಜ್ ತೆರೆದ ಕೂಡಲೇ ನಡೆಸಬಾರದೆಂದು ನಿಲ್ಲಿಸಬೇಕು. ಆ ರೀತಿ ಮಾಡದೆ ಅವರು ವರ್ಷದ ಕೊನೆಯವರೆಗೂ ಕಾಲೇಜು ನಡೆಸಲು ತಾವು ಅವಕಾಶ ಕೊಟ್ಟು ನಂತರ ಅಲ್ಲಿ ಕಲಿತ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸುವುದಿಲ್ಲವೆಂದು ಹೇಳಿದರೆ ಅವರು ಕೋರ್ಟಿಗೆ ಹೋಗುತ್ತಾರೆ. ನಂತರ ಕೋರ್ಟು ಇಂಟರ್‌ಫಿಯರ್ ಆಗುತ್ತದೆ.

SRI G.B. SHANKAR RAO —We made all our efforts. There is no affiliation by the University. They apporached us. We said we could not give permission. We told the Officers and in turn the Officers cautioned them. And at the eleventh hour, they approached the Court and got directions to allow the students for examination. Government is helpless.

ಶ್ರೀ ಮಳ್ಳೂರು ಆನಂದರಾವ್.—ಇದಕ್ಕೆ ಕಾರಣವಿಷ್ಟೆ. ಇವೊತ್ತಿನ ಕಾನೂನಿನಲ್ಲಿ ದೋಷವಿದೆ. ಈ ಕಾರಣದಿಂದಲೇ ಮೊದಲು ಒಂದು ಬೋರ್ಡು ಹಾಕಿ ಕಾಲೇಜನ್ನು ಪ್ರಾರಂಭ ಮಾಡುತ್ತಾರೆ. ಅಲ್ಲಿ ಕಲಿಯಲು ಕೇರಳಾದಿಂದ ವಿದ್ಯಾರ್ಥಿಗಳು ಬರುತ್ತಾರೆ. ಅವರ ಕಡೆಯಿಂದ ೫-೬ ಲಕ್ಷ ರೂ. ಗಳವರೆಗೆ ಫೀಯನ್ನು ವಸೂಲಿ ಮಾಡಿ ಸರ್ಕಾರದ ಅನುಮತಿಯಿಲ್ಲದಿದ್ದರೂ ಕಾಲೇಜು ನಡೆಸುತ್ತಾರೆ. ಕೊನೆಯ ಘಳಿಗೆವರೆಗೆ ಸರ್ಕಾರದಿಂದ ಅನುಮತಿ ಸಿಗದೆಹೋದರೆ, ಅವರು ನಮ್ಮಂತಹವರ ನೇತೃತ್ವದಲ್ಲಿ ಡೆಲಿಗೇಷನ್ ಕಳುಹಿಸಿಕೊಡುತ್ತಾರೆ. ಆದರೆ ನಾನಂತೂ ಇಂತಹ ವಿಚಾರದಲ್ಲಿ ಡೆಲಿಗೇಷನ್ ಜೊತೆ ಹೋಗಿಲ್ಲ. ಆಗಲೂ ಸರ್ಕಾರ ರೆಕಗ್ನಿಷನ್ ಕೊಡದಿದ್ದರೆ ಸಂಬಂಧಪಟ್ಟವರು ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಇದಕ್ಕೆಲ್ಲಾ ಏತಕ್ಕೆ ಅವಕಾಶ ಕೊಡಬೇಕು? ಇಂತಹ ಸ್ಕೂಲುಗಳನ್ನು ಡೀ-ರೆಕಗ್ನೈಜ್ ಮಾಡಲಾಗಿದೆ, ಅಲ್ಲಿ ತಮ್ಮ ಮಕ್ಕಳನ್ನು ಸೇರಿಸಬಾರದೆಂದು ವಿದ್ಯಾ ಇಲಾಖೆಯವರು ಆಗಾಗ್ಗೆ ಪತ್ರಿಕೆಗಳಲ್ಲಿ ವರದಿ ಕೊಡುತ್ತಾರೆ. ಇದಕ್ಕೆ ಬದಲು ಅವರುಗಳು ಶಾಲೆಗಳನ್ನು ಪ್ರಾರಂಭ ಮಾಡಿದ ಕೂಡಲೇ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು? ಕ್ರಮ ತೆಗೆದುಕೊಂಡ ಮೇಲೂ ಸಹ ಯಾರಾದರೂ ಶಾಲೆಯನ್ನು ಪ್ರಾರಂಭ ಮಾಡಿದರೆ, ಅಂತಹವರನ್ನು ಪ್ರಾಸಿಕ್ಯೂಟ್ ಮಾಡಿ, ಜೈಲಿಗೆ ಹಾಕಿ. ಕೊನೆಯವರೆಗೂ ಸಹ ಏತಕ್ಕೆ ಇಡುತ್ತೀರಿ.

SRI G.B. SHANKAR RAO.—It requires amendments. We will do that.

ಶ್ರೀ ಮಳ್ಳೂರು ಆನಂದರಾವ್.—ಈಗ ಗೋಡೆಗಳ ಮೇಲೆ ಏನಾದರೂ ಜಾಹಿರಾತುಗಳನ್ನು ಬರೆದರೆ ಅದರ ಅಂದ ಕೆಡುವುದರಿಂದ, ಆ ರೀತಿ ಬರೆದವರಿಗೆ ಶಿಕ್ಷೆ ಕೊಡಲು ಅಧಿಕಾರ ತೆಗೆದುಕೊಂಡಿದ್ದೀರಿ ಆದರೆ ಯಾರು ಈ ಖಾಸಗೀ ಶಾಲೆಗಳ ಹೆಸರು ಹೇಳಿಕೊಂಡು ಪ್ರತಿವರ್ಷವೂ ೫-೬ ಲಕ್ಷ ರೂ. ಗಳವರೆಗೆ ಲೂಟಿ ಮಾಡುತ್ತಿದ್ದಾರೋ ಹಗಲು ದರೋಡೆ ಮಾಡುತ್ತಿದ್ದಾರೆಯೋ ಹಾಗೂ ಮಕ್ಕಳ ತಂದೆತಾಯಿಗಳು ಬೀದಿಯಲ್ಲಿ ನಿಲ್ಲುವಂತೆ ಮಾಡುತ್ತಿದ್ದಾರೆಯೋ ಅಂತಹ ಜನರ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಸಾಧ್ಯವಿಲ್ಲವೇ? ಇಂತಹ ಜನರ ಮೇಲೆ ಕ್ರಮ ತೆಗೆದುಕೊಳ್ಳುವ ಸಲುವಾಗಿ ಕೂಡಲೇ ಒಂದು ಎಜುಕೇಷನ್ ಡೆವಲಪ್‌ಮೆಂಟ್ ಅಥಾರಿಟಿಯನ್ನು ಕ್ರಿಯೇಟ್ ಮಾಡಿ. ಅದಕ್ಕೆ ಸಂಪೂರ್ಣವಾದ ಅಧಿಕಾರವನ್ನು ಕೊಡಿ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಜನರ ಹತ್ತಿರ

ಹಣ ಇರುವುದಿಲ್ಲ ಆದಕಾರಣ ಎಜುಕೇಷನ್ ಸೆಸ್ ಎಂದು ಹಾಕಿ. ಅದರಿಂದ ಬಂದ ಹಣವನ್ನು ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ವಿನಿಯೋಗ ಮಾಡಿ. ಇವಕ್ಕೂ ಮೊದಲು ಡೊನೇಷನ್ ತೆಗೆದು ಕೊಳ್ಳುವುದನ್ನು ಈ ಕೂಡಲೇ ಬ್ಯಾನ್ ಮಾಡಬೇಕು. So, first ban these donations in Nursery and General Educational institutions. Create an Education Development Authority, to control, regulate and assist private educational institutions. De-link the Education Department from the administration of these private schools and then there will be perfectness.

ಇನ್ನು ಹೊಸದಾಗಿ ಈಗ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡಿರುವ ನಿಲುವು ಸ್ವಾಗತಾರ್ಹ. ೭ ಸಾವಿರ ಪ್ರೈಮರಿ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ತೆಗೆದುಕೊಂಡಿರುವ ನಿಲುವಿನಿಂದ ಅಲ್ಲಿ ಈ ಮೊದಲು ನಡೆಯುತ್ತಿದ್ದ ಭ್ರಷ್ಟಾಚಾರವನ್ನು ನಿಲ್ಲಿಸಲು ಸಾಧ್ಯವಾಗಿದೆ. ಈ ಮೊದಲು ಈ ಹುದ್ದೆಗಳನ್ನು ೫-೬ ಸಾವಿರ ರೂ.ಗಳಿಗೆ ಓಪನ್ನಾಗಿ ಹರಾಜಿಗೆ ಇಟ್ಟಿದ್ದರು. ೫ ಸಾವಿರ ರೂ.ಗಳ ಲಂಚ ಕೊಟ್ಟು ಈ ಹುದ್ದೆಗೆ ಬಂದಂಥ ಅಭ್ಯರ್ಥಿ ಏನು ತಾನೆ ಪಾಠ ಮಾಡುತ್ತಾನೆ?

ಬೇರೆ ಇಲಾಖೆಗಳಲ್ಲಿ ಲಂಚ ಕೊಟ್ಟರೆ ವಾಪಸ್ ತೆಗೆದುಕೊಳ್ಳಲಿಕ್ಕೆ ಸ್ಕೋಪ್ ಇದೆ. ಇಲ್ಲಿ ಏನಿದೆ. ಎಲ್ಲೋ ಹೊಟ್ಟೆ ಬಟ್ಟೆ ಕಟ್ಟಿ ಸಂಪಾದನೆ ಮಾಡಿದ ಬಡ ಮೇಷ್ಟರಿಂದ ಐದಾರು ಸಾವಿರ ರೂಪಾಯಿ ಲಂಚ ತೆಗೆದು ಕೊಳ್ಳುವ ಮಹಾ ಪಾಪಿಗಳು ಯಾರು ಸ್ವಾಮಿ. ಇದನ್ನು ಸರ್ಕಾರದ ಗಮನಕ್ಕೆ ತಂದ ಕೂಡಲೇ ರದ್ದು ಮಾಡಲಿಕ್ಕೆ ಪ್ರಯತ್ನ ಮಾಡಿ. ಈಗ ಮೋಡ್ ಆಫ್ ಅಪಾಯಿಂಟ್‌ಮೆಂಟ್ ಮಾಡಿ ಮೆರಿಟ್ ಮೇಲೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಈ ಒಂದು ಸ್ತುತ್ಯವಾದ ಕಾರ್ಯವನ್ನು ಮಾಡಿದ್ದೀರಿ. ನಾನು ಒಂದು ಸಲಹೆ ಕೊಡುತ್ತೇನೆ. ಈ ಒಂದು ವಿಷಯದಲ್ಲಿ ಶ್ರೀಮಾನ್ ಅರಕೇರಿಯವರಿಗೂ ನಮ್ಮೂ ತಿಕ್ಕಾಟ ಬರಬಹುದು. ಎಜುಕೇಷನ್ ಡಿಪಾರ್ಟ್‌ಮೆಂಟ್ ಟೀಚರ್ಸ್‌ನ್ನು ರೆಕ್ರೂಟ್ ಮಾಡಬೇಕಾದರೆ ಎಂತಹವರನ್ನು ಮಾಡಬೇಕು. ಸಮಾಜದಲ್ಲಿರತಕ್ಕ ಬೆಸ್ಟ್, ಅತ್ಯಂತ ಬುದ್ಧಿವಂತರು, ಶಿಕ್ಷಣ ಹೇಳಿಕೊಡಬೇಕು ಎಂದು ಆಪ್ಟಿಡ್ಯೂಟ್ ಇರತಕ್ಕಂಥ ಜನರನ್ನು ಪಿಕ್ ಅಂಡ್ ಚೂಸ್ ಮಾಡಿ. ಇಲ್ಲದೇ ಹೋದರೆ. ಎಸ್.ಎಸ್. ಎಲ್.ಸಿ ಸರ್ಟಿಫಿಕೇಟ್, ಟಿ.ಸಿ.ಹೆಚ್. ಸರ್ಟಿಫಿಕೇಟ್ ಇರತಕ್ಕವನು ಟೀಚರ್ ಆಗುತ್ತಾನೆ. ಯಾವ ರೆಕಮೆಂಡೇಷನ್ನೂ ಬೇಡ, ಆದರೆ ಅವನು ಏನು ಟೀಚ್ ಮಾಡಬಲ್ಲ. ಆದುದರಿಂದ ಅತ್ಯಂತ ಬುದ್ಧಿವಂತರು, ಅತ್ಯಂತ ಶ್ರದ್ಧೆ ಇರತಕ್ಕವರು. ಶಿಕ್ಷಣ ಹೇಳಿಕೊಡಬೇಕು ಎಂದು ಕಳಕಳಿ ಇರತಕ್ಕಂಥಾವರನ್ನು ಹುಡುಕಿ ಟೀಚರ್ ಮಾಡುವುದಕ್ಕೆ ಮೋಡ್ ಆಫ್ ರೆಕ್ರೂಟ್‌ಮೆಂಟನ್ನು ಬದಲಾವಣೆ ಮಾಡಿ. ಅವರಿಗೆ ಹೈಯೆಸ್ಟ್ ಪೇ ಕೊಡಿ.

ಶ್ರೀ ಎಸ್. ಎಸ್. ಅರಕೇರಿ.—ಈಗ ಮೆರಿಟ್ ಮೇಲೆ ರೆಕ್ರೂಟ್‌ಮೆಂಟ್ ಮಾಡಬೇಕು, ಮೆರಿಟ್ ಮೇಲೆ ಟೀಚರ್ಸ್‌ನ್ನು ಆರಿಸಿಕೊಳ್ಳುವುದಾದರೆ ಭ್ರಷ್ಟಾಚಾರ ತಡೆಯಲಿಕ್ಕೆ ಸಾಧ್ಯ ಎಂದು ಹೇಳಬಹುದು. ಯಾರು ಮಾರ್ಕ್ಸ್ ಹೆಚ್ಚಿಗೆ ತೆಗೆದುಕೊಂಡಿರುತ್ತಾರೋ ಅವರು ಮೇಲೆ ಬರುತ್ತಾರೆ. ಅರ್ಬನ್ ಏರಿಯಾದಲ್ಲಿರುವ ಮಕ್ಕಳು ಮೇಲೆ ಮೇಲೆ ಬರುತ್ತಾರೆ. ಆದರೆ ರೂರಲ್ ಏರಿಯಾದಲ್ಲಿರುವ ಮಕ್ಕಳು, ರೈತರ, ಹರಿಜನ-ಗಿರಿಜನರ. ವೀಕರ್ ಸೆಕ್ಷನ್ ಮಕ್ಕಳ ಗತಿ ಏನು ? What about poor people who are living in rural areas ? How can we assist them ? ಅವರು ಪ್ರತಿಭಾವಂತ ಟೀಚರ್ಸ್ ಆಗಲಿಕ್ಕೆ ಸಾಧ್ಯವೇ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಒಂದು ಕ್ರೈಟೀರಿಯ ಇರಬೇಕು, ಅತ್ಯಂತ ಬುದ್ಧಿವಂತರನ್ನು ಶ್ರದ್ಧೆ ಇರುವವರನ್ನು ಹುಡುಕಬೇಕು, ಎಲ್ಲಾ ಜಾತಿಯಲ್ಲೂ ಇರುತ್ತಾರೆ. ಬ್ರಾಹ್ಮಣರಲ್ಲೂ ಶತದಡ್ಡರಿದ್ದಾರೆ.

ಶ್ರೀ ಡಿ. ಟಿ. ರಾಮು.—ಪರಿಸರ, ಸನ್ನಿವೇಶ ಒದಗಿಸಿಕೊಟ್ಟರೆ ಪ್ರತಿಯೊಬ್ಬರೂ ಪ್ರತಿಭಾವಂತರಾಗಬಹುದು.

ಶ್ರೀ ಮಳ್ಳೂರು ಆನಂದರಾವ್.—ಪರಿಸರ ಒದಗಿಸಿಕೊಡಿ, ಎಲ್ಲಾ ಕುಮ್ಮಕ್ಕೂ ಕೊಡಿ. ಎಲ್ಲೆಲ್ಲಿ ಮೆರಿಟ್‌ನವರು ಇದ್ದಾರೆ. ಪ್ರತಿಭಾವಂತರಿದ್ದಾರೆ ಎಂದು ಅವರನ್ನು ಹುಡುಕುವುದಕ್ಕೆ ಏನು ಸಾಧನವಿದೆ, ಏನೂ ಸಾಧನವಿಲ್ಲ, ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಮೆರಿಟ್ ಇರುವವರು ಇಲ್ಲವೇ, ಪ್ರೊಫೆಸರ್ ಅರಕೇರಿಯವರಿಲ್ಲವೇ, ಅವರು ಬುದ್ಧಿವಂತರಲ್ಲವೇ.

ಅಧ್ಯಕ್ಷರು.—ಅವರು ಪ್ರೈಮರಿ ಸ್ಕೂಲ್ ಟೀಚರ್ ಹುದ್ದೆಗೆ ಅರ್ಜಿ ಹಾಕಿಲ್ಲ,

(ನಗು)

ಶ್ರೀ ಮಳ್ಳೂರು ಆನಂದರಾವ್,—ಅವರು ಹಾಕಿಲ್ಲ. ಎಲ್ಲಾ ಜಾತಿಗಳಲ್ಲೂ, ಎಲ್ಲಾ ವರ್ಗಗಳಲ್ಲ. ಮೆರಿಟ್‌ನವರಿದ್ದಾರೆ. ಪ್ರತಿಭಾವಂತರಿದ್ದಾರೆ ಅವರಿಗೆ ಪರಿಸರ, ಸನ್ನಿವೇಶ ಇಲ್ಲದೇ ಇರುವುದರಿಂದ ಅವರು ಮೇಲಕ್ಕೆ ಬರುವುದಕ್ಕೆ ಆಗುವುದಿಲ್ಲ. ಅಂತಹವರನ್ನು ಹುಡುಕಬೇಕು ಈಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ೧೮ ಪರ್ಸೆಂಟ್ ಕೊಡಬೇಕು ಎಂದು ಮಾಡಿದ್ದೀರಿ. ಬೆಸ್ಟ್ ಹುಡುಗರನ್ನು ಹುಡುಕಿ, ಅವರಿಗ ಸ್ಪೆಷಲ್ ಕೋಚಿಂಗ್ ಕೊಡೋಣ, ಹಾಸ್ಟೆಲ್ ಫೆಸಿಲಿಟಿ ಕೊಡೋಣ, ಕುಮ್ಮಕ್ಕು ಕೊಡೋಣ. ಅದನ್ನು ಖಂಡಿತವ ಾಡುವುದಿಲ್ಲ. Let him come up. Why should we not do it? ೧೮% ಫಿಲ್‌ಅಪ್ ಮಾಡಲಿ, ಮಾಡಬಾರದು ಎಂದು ನಾನು ಹೇಳುವುದಿಲ್ಲ. ೧೮ ಪರ್ಸೆಂಟ್ ಅಷ್ಟು ಕೊಡಬೇಕು. ಅದರಲ್ಲಿ I am very clear about this. You should pick up the best merited boy. ಅವರನ್ನು ಹುಡುಕಿ Mode of selection, you can find out. ದಡ್ಡರನ್ನು ತಂದು ಮೇಷ್ಟರನ್ನಾಗಿ ಮಾಡಿದರೆ ಅವರ ಕೈಕೆಳಗೆ ಎಂತಹ ಮಹಾ ಬುದ್ಧಿವಂತ ತಯಾರಾಗಬಹುದು. ನೆಕ್ಸ್ಟ ಜನರೇಷನ್‌ಗೆ ಇನ್ನೆಷ್ಟು ಬುದ್ಧಿವಂತರು ಬರಬಹುದು. ಇವತ್ತಿನದಿವಸ ಎಜುಕೇಷನಲ್ ಸ್ಟಾಂಡರ್ಡ್ ಕೆಳಮಟ್ಟಕ್ಕೆ ಹೋಗುತ್ತಿದೆ. ಕತ್ತೆಯನ್ನು ತೆಗೆದುಕೊಂಡು ಹೋಗಿ ಜಟಕಾಕ್ಕೆ ಕಟ್ಟಿಬಿಟ್ಟರೆ ಅದು ಹಿಂದಕ್ಕೆ ಹೋಗುತ್ತದೆ, ಅದರ ಬದಲು ಬೆಸ್ಟ್ ಹಾರ್ಸನ್ನು ಕಟ್ಟಿದರೆ ಯಾರು ಬೇಕಾದರೆ ಸೇಫಾಗಿ ಹೋಗಬಹುದು, ಆದುದರಿಂದ, My suggestion is, select best men in the society. ಅವರನ್ನು ಚೂಸ್‌ಮಾಡಿ. ಐಎಎಸ್ ಆಫೀಸರ್ ಪೇಯನ್ನು ಪ್ರೈಮರಿ ಸ್ಕೂಲ್ ಮೇಷ್ಟರಿಗೆ ಕೊಡಬೇಕು, ಅವರಿಗೆ ಮಕ್ಕಳನ್ನು ಒದಗಿಸಬೇಕು, ಈ ಮೂಲಕ ಮಕ್ಕಳನ್ನು ಹೆಚ್ಚು ಬುದ್ಧಿವಂತರನ್ನಾಗಿ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಸಂದರ್ಭದಲ್ಲಿ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ.

ಇನ್ನು ಇಂಗ್ಲೀಷ್ ಮೀಡಿಯಂ ಶಾಲೆಗಳ ಬಗ್ಗೆ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳುದಾದರೆ, ಇದು ಬಹಳ ದುಃಖದ ಸಂಗತಿ. ಅಂದರೆ ಕರ್ನಾಟಕದಲ್ಲಿ ಎಲ್ಲಿ ನೋಡಿದರೂ ನಾಯಿಕೊಡೆಗಳಂತೆ ಇಂಗ್ಲೀಷ್ ಮೀಡಿಯಂ ಸ್ಕೂಲುಗಳು ಎದ್ದಿವೆ. ಬೆಂಗಳೂರು ನಗರದಲ್ಲಂತೂ ಕಾರ್ ಗ್ಯಾರೇಜ್‌ನಲ್ಲೂ ಈ ಸ್ಕೂಲುಗಳು ನಡೆಯುತ್ತಿವೆ. ಸಂಜಯ್ ಇಂಗ್ಲೀಷ್ ಮೀಡಿಯಂ ಸ್ಕೂಲು, ರಾಜೀವ್ ಇಂಗ್ಲೀಷ್ ಮೀಡಿಯಂ ಸ್ಕೂಲು ಬಂದಿದೆ, ಬೆಂಗಳೂರಿನಲ್ಲಿ ಹುಟ್ಟುವ ಮಕ್ಕಳ ಹೆಸರಿನಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲುಗಳು ಬಂದಿವೆ. ಈ ರೀತಿ ಇಂಗ್ಲಿಷ್ ಮೀಡಿಯಂ ಸ್ಕೂಲುಗಳನ್ನು ಮಾಡಿಬಿಟ್ಟು ಲೂಟಿ ಹೊಡೆಯುತ್ತಿದ್ದಾರೆ.

ಈಗ ಮಕ್ಕಳನ್ನು ಇಂಗ್ಲೀಷ್ ಮೀಡಿಯಂ ಸ್ಕೂಲಿಗೆ ಕಳುಹಿಸುತ್ತಾರೆ. ದುರ್ದೈವದ ಸಂಗತಿ ಏನೆಂದರೆ, ಕನ್ನಡ ನಾಡಿನಲ್ಲಿ ಕನ್ನಡ ಮಕ್ಕಳಿಗೆ ಕನ್ನಡ ಪತ್ರಿಕೆ ಓದಲಿಕ್ಕೆ ಬರುವುದಿಲ್ಲ, ಕನ್ನಡದಲ್ಲಿ ಹೆಸರನ್ನು ಬರೆಯಲಿಕ್ಕೆ ಬರುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ತಮ್ಮ ಮಕ್ಕಳು ಯಾವ ಶಾಲೆಯಲ್ಲಿ ಓದುತ್ತಾ ಇದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ನನ್ನ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸುತ್ತಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರಾ ?

ಶ್ರೀ ಮಳ್ಳೂರು ಆನಂದರಾವ್.—ಸಾಧಾರಣ ಪ್ರೈವೇಟ್ ಸ್ಕೂಲಿನಲ್ಲಿ ಓದುತ್ತಾ ಇದ್ದಾರೆ. ನನ್ನ ಮಗ ೯ನೇ ಸ್ಟಾಂಡರ್ಡ್‌ನಲ್ಲಿ ಎರಡು ಸಲ ಫೈಲ್ ಆಗಿದ್ದಾನೆ. ಚನ್ನೇನಹಳ್ಳಿಯಲ್ಲಿ ನಾನೇ ಒಂದು ರೆಸಿಡೆನ್‌ಷಿಯಲ್ ಸ್ಕೂಲ್ ಸ್ಥಾಪನೆ ಮಾಡಿದ್ದೇನೆ. ನನ್ನ ಮಗ ತಾವರೆಕೆರೆಯಲ್ಲಿ ಗವರ್ನಮೆಂಟ್

ಸ್ಕೂಲಿನಲ್ಲಿ ಓದುತ್ತಿದ್ದಾನೆ. ಸೋಫಿಯಾ ಸ್ಕೂಲಿಗೆ ಕಳಿಸಲಿಕ್ಕೆ ದುಡ್ಡೆಲ್ಲಿದೆ. ನನ್ನ ಮಕ್ಕಳಿಗೆ ಕನ್ನಡ ಮೀಡಿಯಂ ಕೊಡಿಸಿದ್ದೇನೆ. I am not a hypocrat. ನರ್ಸರಿಯಲ್ಲಿ ಮಕ್ಕಳಿಗೆ ಮಗ್ಗಿಯನ್ನು ಇಂಗ್ಲೀಷಿನಲ್ಲಿ ಹೇಳಿಗೊಡುತ್ತಾರೆ, ನನಗೆ ಹೇಳಲಿಕ್ಕೆ ಬರುವುದಿಲ್ಲ. ಎಲ್ಲಿಯತನಕ ಇಂಗ್ಲೀಷ್ ಮೀಡಿಯಂ ಇರಬೇಕು ಅಂದರೆ, ೭ನೇ ತರಗತಿಯವರೆಗೆ ಎಲ್ಲರೂ ಕನ್ನಡ ಮಾಧ್ಯಮದ ಮೂಲಕ ಶಿಕ್ಷಣವನ್ನು ಮಾಡಬೇಕು, ೭ನೇ ತರಗತಿಯಿಂದಾಚೆಗೆ ಇಂಗ್ಲೀಷನ್ನು ತೆಗೆದುಕೊಂಡು ಬರೋಣ. ಇಲ್ಲದೇಹೋದರೆ ಇವು ವ್ಯಾಪಾರ ಕೇಂದ್ರಗಳಾಗುತ್ತವೆ. ಎಲ್ಲಾ ಮಕ್ಕಳನ್ನು ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಕಳಿಸುವುದು ಆ ಮಕ್ಕಳಿಗೆ ಕನ್ನಡದಲ್ಲಿ ಹೆಸರನ್ನು ಬರೆಯುವುದಕ್ಕೆ, ಓದಲಿಕ್ಕೆ ಬರುವುದಿಲ್ಲ. ಇವರು ಮಮ್ಮಿ, ಡ್ಯಾಡಿ ಮಕ್ಕಳಾಗುತ್ತಾರೆ. ಮಾನ್ಯ ಶಿಕ್ಷಣ ಮಂತ್ರಿಗಳನ್ನು ಬೆಂಗಳೂರಿನಲ್ಲಿ ಎಷ್ಟು ಕನ್ನಡ ಮಾಧ್ಯಮದ ಶಾಲೆಗಳಿವೆ ಮತ್ತು ಎಷ್ಟು ಇಂಗ್ಲೀಷ್ ಮಾಧ್ಯಮದ ಶಾಲೆಗಳಿವೆ ಎಂದು ಕೇಳುತ್ತೇನೆ. ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ತೆಗೆದರೆ ಬೆಸ್ಟ್ ವ್ಯಾಪಾರ ಆಗತ್ತದೆ. ೭ನೇ ತರಗತಿಯವರೆಗೆ ಎಲ್ಲಾ ಕನ್ನಡದ ಮೂಲಕ ಶಿಕ್ಷಣ ನಡೆಯಬೇಕು, ಕನ್ನಡ ನಾಡಿನಲ್ಲಿ ಪ್ರತಿಯೊಂದು ಮಗುವಿಗೂ ಕನ್ನಡ ಬರಬೇಕು. ಇನ್ನು ಮುಂದೆ ಕನ್ನಡ ಮಾಧ್ಯಮದ ಶಾಲೆಗಳಿಗೆ ಹೆಚ್ಚಿನ ಅವಕಾಶ ಕೊಡಬೇಕು. ಮೈನಾರಿಟಿ ಲಾಂಗ್ವೇಜಸ್‌ಗೆ ಸೂಕ್ತವಾದ ರಕ್ಷಣೆ ಕೊಟ್ಟು ಅವಕಾಶ ಮಾಡಿಕೊಡಿ. ಇಂಗ್ಲೀಷ್ ಮಾಧ್ಯಮದ ಸ್ಕೂಲುಗಳನ್ನು ತೆಗೆದುಬಿಡಿ. ನಾವೇನು ಲಂಡನ್ನಿನಲ್ಲಿದ್ದೇವಾ, ವೇಲ್ಸ್ ಲಂಡನ್ನಿನ ಒಂದು ಭಾಗ, ಲಂಡನ್ನಿನ ಒಂದು ಪ್ರಾಂತ. ವೇಲ್ಸ್‌ನಲ್ಲಿ ಓದತಕ್ಕ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದ ಮೂಲಕ ಶಿಕ್ಷಣ ಇಲ್ಲ. ವೇಲ್ಸ್ ಲಾಂಗ್ವೇಜ್ ಇದೆ, ಅದರ ಮೂಲಕ ಶಿಕ್ಷಣ ಕೊಡಬೇಕು. ವೇಲ್ಸ್‌ನಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡಬೇಕು ಅಂದಾಗ ವೇಲ್ಸ್ ಜನಾಂಗ ಪ್ರತಿಭಟನೆ ಮಾಡಿ ವೇಲ್ಸ್ ಲಾಂಗ್ವೇಜಿನಲ್ಲಿ ಶಿಕ್ಷಣ ಕೊಡುತ್ತಿದ್ದಾರೆ. ಇಂಗ್ಲೆಂಡಿನ ಒಂದು ಪ್ರಾಂತ್ಯವಾದ ವೇಲ್ಸ್‌ನಲ್ಲಿ ವೇಲ್ಸ್ ಲಾಂಗ್ವೇಜಿನಲ್ಲಿ ಶಿಕ್ಷಣ ಕೊಡುತ್ತಾ ಇರಬೇಕಾದರೆ, ಚಿನ್ನದ ನಾಡಿನ ಕನ್ನಡ ಕುವರರು ಇಂಗ್ಲೆಂಡಿನ ಮಕ್ಕಳಾಗಬೇಕೇ. ಇದು ಅಪಮಾನಕರವಾದ ಸಂಗತಿ. ಇದರಿಂದ ಕ್ಲಾಸ್ ನಿರ್ಮಾಣವಾಗುತ್ತದೆ. ಇಂಗ್ಲೀಷ್ ಓದಿರುವವರು ಒಂದು ಕ್ಲಾಸ್. ಕನ್ನಡ ಓದಿರುವವರು ಒಂದು ಕ್ಲಾಸ್. ಕನ್ನಡ ಓದುವವರು ನಮ್ಮಂಥ ಬಡವರ ಮಕ್ಕಳು, ಸಫಿಸ್ಟಿಕೇಟೆಡ್ ಕ್ಲಾಸ್ ಇಂಗ್ಲೀಷ್ ಮೀಡಿಯಂ ಸ್ಕೂಲಿಗೆ ಕಳಿಸುತ್ತಾರೆ. Mr. Arumugham, you will agree with me. I do not know how about Mr. Arumugham. ಕ್ಲಾಸ್ ವಾರ್ ನಡೆಯುತ್ತದೆ. ಈ ಕ್ಲಾಸ್‌ವಾರ್ ತೆಗೆಯಬೇಕಾದರೆ ಈ ಕ್ಲಾಸ್ ಡಿಸ್ಟಿಂಕ್ಷನ್ ತೆಗೆಯಬೇಕು.

ರಾಜಾಜಿ ನಗರದಲ್ಲಿ ಒಂದು ಸ್ಕೂಲ್ ಬಿದ್ದು ಹೋಗಿದೆ, ಅದನ್ನು ರಿಪೇರಿ ಮಾಡಿಸಿದರೋ ಇಲ್ಲವೋ ಗೊತ್ತಿಲ್ಲ. ಅದನ್ನು ಆದಷ್ಟು ಬೇಗ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಚಿಕ್ಕಮಗಳೂರು ಟೌನಿನಲ್ಲಿ ಒಂದು ಹಳೆಯ ಸ್ಕೂಲ್ ಇದೆ ಇಲ್ಲಿಯವರೆಗೆ ರಿಪೇರಿಯಾಗಿಲ್ಲ. ಅದು ಬಿದ್ದು ಹೋಗುವ ಪರಿಸ್ಥಿತಿಗೆ ಬಂದಿದ್ದರೂ ಇಲ್ಲಿಯವರೆಗೆ ಅದನ್ನು ರಿಪೇರಿ ಮಾಡಿಸುವ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ, ಇಷ್ಟು ಹೇಳಿ ಕೊನೆಯದಾಗಿ ನಾವು ಈಗ ಏನು ೧೮೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಂಜೂರು ಮಾಡಿಕೊಡುತ್ತಿದ್ದೇವೆ ಅಷ್ಟು ಹಣವನ್ನು ಉಪಯೋಗಿಸಿ ಮುಂದಿನ ವರ್ಷ ಬಜೆಟ್ ರಿಪ್ಲೈ ಕೊಡುವಾಗ ನಿಮ್ಮ ಸಾಧನೆ ಏನು ಎಂಬುದನ್ನು ಮಾನ್ಯ ಮಂತ್ರಿಗಳವರು ಹೇಳುತ್ತಾರೆಂದು ನಂಬಿರುತ್ತೇನೆ. ಇವತ್ತು ಪ್ರೈವೇಟ್ ಸ್ಕೂಲ್‌ಗಳಲ್ಲಿ ಏನು ಭ್ರಷ್ಟಾಚಾರ ನಡೆಯುತ್ತಿದೆ ಅದು ಮಾನ್ಯ ಶ್ರೀ ಶಂಕರರಾವ್ ರವರ ಕಾಲದಲ್ಲಿ ನಿಂತು ಹೋಯಿತು ಎಂದರೆ ಅದರಿಂದ ನಮಗೂ ನಿಮಗೂ ಕೀರ್ತಿ ಬರುತ್ತದೆಂದು ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,.

† ಶ್ರೀ ಎಂ. ಗಂಗಣ್ಣ (ಕುಷ್ಟಗಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರುಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆ ಸೂಚನೆಗಳನ್ನು ನೀಡಬಯಸುತ್ತೇನೆ. ಯುವಕ ಮುಖ್ಯ ಮಂತ್ರಿಗಳವರಾದ ಶ್ರೀ ಗುಂಡುರಾಯರು ಅಧಿಕಾರ ವಹಿಸಿಕೊಂಡ ನಂತರ ಕಳೆದ ವರ್ಷ ಹಾಗೂ ಈ ವರ್ಷ ರಾಜ್ಯದಲ್ಲಿ ಅನೇಕ ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯಲು ಆದೇಶ ನೀಡಿದ್ದಾರೆ. ಇದಕ್ಕಾಗಿ ಎಲ್ಲರೂ ಸ್ವಾಗತವನ್ನು ಕೋರಬೇಕಾಗಿದೆ. ಇದೇ ರೀತಿ ಕೆಲವೊಂದು ಖಾಸಗಿ ಸಂಸ್ಥೆಗಳವರಿಗೂ ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿಯನ್ನು ಸರ್ಕಾರ ನೀಡಿದೆ. ಇದನ್ನು ಕೂಡ

ನಾವೆಲ್ಲರೂ ಸ್ವಾಗತ ಮಾಡಬೇಕಾಗಿದೆ. ಇದೇ ಸಂದರ್ಭದಲ್ಲಿ ರಾಜ್ಯ ಏಕೀಕರಣಗೊಂಡ ಸುಮಾರು ೨೫ ವರ್ಷಗಳ ಹಿನ್ನೆಲೆಯಲ್ಲಿ ನಾಳೆ ಬರುವ ನವೆಂಬರ್‌ನಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸಬೇಕೆಂದು ಸರ್ಕಾರ ನಿರ್ಧರಿಸಿದೆ. ಆದರೂ ಕೂಡ ಏಕೀಕರಣವಾದ ಪ್ರದೇಶಗಳಲ್ಲಿ ಯಾವ ರೀತಿಯಾಗಿ ಶಿಕ್ಷಣ ಮಟ್ಟದಲ್ಲಿ ಪ್ರಗತಿ ಮಾಡಬೇಕಾಗಿತ್ತೋ ಆ ಮಟ್ಟದಲ್ಲಿ ಮಾಡಿಲ್ಲ ಎನ್ನುವ ದೂರು ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳವರ ಗಮನಕ್ಕೆ ತರಬಯಸುತ್ತಿದ್ದೇನೆ. ಇದಕ್ಕೆ ಮಾನ್ಯ ಅಧ್ಯಕ್ಷರು ದಯವಿಟ್ಟು ಅನುಮತಿಯನ್ನು ನೀಡುತ್ತಾರೆಂದು ನಂಬಿ ಈ ಕೆಲವೊಂದು ವಿಷಯಗಳನ್ನು ಸಭೆಯ ಗಮನಕ್ಕೆ ತರ ಬಯಸುತ್ತಿದ್ದೇನೆ. ಸರ್ಕಾರದವರೇ ಪ್ರಕಟಿಸಿರುವ ವರದಿ ಪ್ರಕಾರ ೧ನೇ ನವೆಂಬರ್ ೧೯೫೬ ರಲ್ಲಿ ಪ್ರಥಮ ದರ್ಜೆ ಕಾಲೇಜ್‌ಗಳು ಈ ರೀತಿಯಾಗಿದ್ದವು, ಬೆಂಗಳೂರು–೫ ಕೋಲಾರ–ಇಲ್ಲ, ತುಮಕೂರು–೧, ಮೈಸೂರಿನಲ್ಲಿ-೫, ಮಂಡ್ಯಾ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ–ಇಲ್ಲ, ಬಳ್ಳಾರಿಯಲ್ಲಿ–೧, ಬೆಳಗಾಂ, ಧಾರವಾಡದಲ್ಲಿ ೧, ಉತ್ತರ ಕನ್ನಡದಲ್ಲಿ, ಬೀದರ್, ರಾಯಚೂರ್‌ನಲ್ಲಿ ಇಲ್ಲ. ಗುಲ್ಬರ್ಗದಲ್ಲಿ ೧, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪, ಕೊಡಗಿನಲ್ಲಿ ೧. ಇನ್ನು ಇಂಟರ್ ಮೀಡಿಯೇಟ್ ಕಾಲೇಜುಗಳ ಬಗ್ಗೆ ಹೇಳಬೇಕು ಎಂದರೆ, ಬೆಂಗಳೂರಿನಲ್ಲಿ ೪, ಕೋಲಾರದಲ್ಲಿ ೧, ಮೈಸೂರಿನಲ್ಲಿ ೨, ತುಮಕೂರಿನಲ್ಲಿ ಇಲ್ಲ, ಮಂಡ್ಯಾದಲ್ಲಿ ಇಲ್ಲ, ಹಾಸನದಲ್ಲಿ ೨, ಶಿವಮೊಗ್ಗದಲ್ಲಿ ೧, ಚಿಕ್ಕಮಗಳೂರಿನಲ್ಲಿ ೧, ಚಿತ್ರದುರ್ಗದಲ್ಲಿ ೨, ಬೆಳಗಾಂ, ಧಾರವಾಡ, ಬಿಜಾಪುರದಲ್ಲಿ ಮತ್ತು ಉತ್ತರ ಕನ್ನಡದಲ್ಲಿ ೬, ರಾಯಚೂರು ಬೀದರ್‌ನಲ್ಲಿ ಇಲ್ಲ, ಗುಲ್ಬರ್ಗದಲ್ಲಿ ೧, ದಕ್ಷಿಣ ಕನ್ನಡದಲ್ಲಿ ೩. ಇನ್ನು ಪ್ರೌಢ ಶಾಲೆಗಳು ಬೆಂಗಳೂರಿನಲ್ಲಿ ೬೩, ಕೋಲಾರದಲ್ಲಿ ೧೯, ತುಮಕೂರಿನಲ್ಲಿ ೨೯, ಮೈಸೂರಿನಲ್ಲಿ ೩೬, ಮಂಡ್ಯದಲ್ಲಿ ೧೭, ಹಾಸನದಲ್ಲಿ ೨೧, ಶಿವಮೊಗ್ಗದಲ್ಲಿ ೨೪, ಚಿಕ್ಕಮಗಳೂರಿನಲ್ಲಿ ೧೪, ಚಿತ್ರದುರ್ಗದಲ್ಲಿ ೧೭, ಧಾರವಾಡ, ಬಿಜಾಪುರ, ಬೊಂಬಾಯಿ, ಕರ್ನಾಟಕದಲ್ಲಿ ೧೨೬, ಬೀದರ್‌ನಲ್ಲಿ ೩, ರಾಯಚೂರ್‌ನಲ್ಲಿ ೭, ಗುಲ್ಬರ್ಗದಲ್ಲಿ ೮, ದಕ್ಷಿಣ ಕನ್ನಡದಲ್ಲಿ ೬೪, ಕೊಡಗಿನಲ್ಲಿ ೧೧. ಇಷ್ಟು ಹಿಂದೆ ಇದ್ದುದು ನಮ್ಮ ಭಾಗದಲ್ಲಿ ಅಷ್ಟೇ ಸಂಖ್ಯೆ ಇದೆ ಜಾಸ್ತೀನೆ ಆಗಿಲ್ಲ. ಆದರೆ ಕಳೆದ ಸಲ ಮತ್ತು ಈ ಸಲ ಮಾತ್ರ ರಾಯಚೂರಿಗೆ ೩ ಮತ್ತು ೨ ಶಾಲೆಗಳನ್ನು ಕೊಟ್ಟಿದ್ದೀರಿ. ಹಿಂದೆ ಇದ್ದಂಥ ಪರಿಸ್ಥಿತಿಗೆ ನಾವು ಮೊಘಲಾಯರ ಕಾಲವೆಂದು ಹೇಳುತ್ತೇವೆ ಆಗ ಏನು ಇತ್ತೋ ಅದೇ ಪರಿಸ್ಥಿತಿ ಇವತ್ತಿಗೂ ಇದೆ, ಈ ತಾರತಮ್ಯ ಏತಕ್ಕೆ ಸ್ವಾಮಿ? ಇವತ್ತು ರಾಜ್ಯದ ದೊಡ್ಡ ಜಿಲ್ಲೆಗಳಲ್ಲಿ ನಮ್ಮ ರಾಯಚೂರು ಜಿಲ್ಲೆಯೇ ೩ನೇ ಜಿಲ್ಲೆಯಾಗಿದೆ. ಇಂಥಾದ್ದರಲ್ಲಿ ಇಂಥಾ ತಾರತಮ್ಯ ಏತಕ್ಕೆ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ಕಳೆದ ವರ್ಷ ೬ ಕಾಲೇಜ್‌ಗಳನ್ನು ಕೊಟ್ಟಿದ್ದಾರೆ ಅದರಲ್ಲಿ ಆನೇಕಲ್ ಬೆಂಗಳೂರು ಜಿಲ್ಲೆ, ಕುಶಾಲ ನಗರ ಕೂರ್ಗ್, ಚನ್ನಗಿರಿ ಶಿವಮೊಗ್ಗ ಜಿಲ್ಲೆಯಲ್ಲಿ ಮತ್ತು ಹೊಳೆನರಸೀಪುರ ಹಾಸನ ಜಿಲ್ಲೆ, ಆದರೆ ನಮ್ಮ ರಾಯಚೂರು, ಗುಲ್ಬರ್ಗ, ಬೀದರ್, ಬೆಳಗಾಂನಲ್ಲಿ ಏತಕ್ಕೆ ಕೊಟ್ಟಿಲ್ಲ ಸ್ವಾಮಿ, ಮಾನ್ಯ ವಿದ್ಯಾ ಮಂತ್ರಿಗಳವರು ನಮ್ಮ ಕಡೆಯವರೇ ಇದ್ದಾರೆ ಅಂಥಾದ್ದರಲ್ಲಿ ಈ ತಾರತಮ್ಯ ಏತಕ್ಕೆ ಸ್ವಾಮಿ? ಹೀಗಾದರೆ ನಾವು ಆ ಭಾಗದ ಶಾಸಕರು ಅಲ್ಲಿಯ ಜನಗಳಿಗೆ ಏನೆಂದು ಉತ್ತರ ಕೊಡಬೇಕು ಸ್ವಾಮಿ?

ಇನ್ನು ಸ್ವಾಮಿ, ಇವತ್ತು ಶಿಕ್ಷಣ ಮಟ್ಟ ಕಡಿಮೆಯಾಗುತ್ತಲೇ ಇದೆಯೆಂದು ಎಲ್ಲ ಮಾನ್ಯ ಸದಸ್ಯರುಗಳು ಸಹ ಹೇಳಿದ್ದಾರೆ. ಇವತ್ತು ಕ್ವಾಂಟಿಟಿ ಹೆಚ್ಚಾಗಿದೆಯೇ ಹೊರತು ಕ್ವಾಲಿಟಿ ಹೆಚ್ಚಾಗಿಲ್ಲವೆಂದು ದೂರು ಇದೆ. ಇವತ್ತು ಏನಾಗಿದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಹುಡುಗರನ್ನು ಒಂದನೇ ಇಯತ್ತೆನಿಂದ ೧೦ನೇ ಇಯತ್ತೆನವರೆಗೆ ಪಾಸ್ ಆಗಿರಲಿ ಆಗದೇ ಇರಲೀ ಪಾಸ್ ಎಂದು ಮುಂದಕ್ಕೆ ತಳ್ಳಿಕೊಂಡು ಬರುತ್ತಾರೆ. ಕಾರಣ ಕೇಳಿದರೆ ಸೆಂಟ್ ಪರ್ಸೆಂಟ್ ರಿಜಲ್ಟ್ ತೋರಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಮಾಡುತ್ತಿದ್ದಾರೆ. ಇವತ್ತು ಯಾರು ಸ್ಕೂಲಿಗೇ ಬರುವುದಿಲ್ಲವೋ ಅಂಥ ವರನ್ನು ಸಹ ಇವತ್ತು ತಳ್ಳಿಕೊಂಡು ಹೋಗುತ್ತಿದ್ದಾರೆ. ಹಿಂದೆಯಾದರೂ ೭ನೇ ತರಗತಿಯಲ್ಲಿ ಪಬ್ಲಿಕ್ ಎಗ್ಸಾಮಿನೇಷನ್ ಇತ್ತು ಅದರಲ್ಲಿ ಸ್ವಲ್ಪ ಹುಡುಗರು ಫೇಲಾಗುತ್ತಿದ್ದರು. ಈಗ ಅದನ್ನು ಸಹ ತೆಗೆದು ಹಾಕಿ ಬಿಟ್ಟಿದ್ದಾರೆ. ಆದುದರಿಂದ ಇದರ ಬಗ್ಗೆ ನಾನು ಒಂದು ಕಾಲಿಂಗ್ ಅಟೆನ್‌ಷನ್ ಕೂಡ ಕಳುಹಿಸಿದ್ದೇನೆ. ಹಿಂದೆ ಏನು ೭ನೇ ತರಗತಿಗೆ ಪಬ್ಲಿಕ್ ಎಗ್ಸಾಮಿನೇಷನ್ ನಡೆಯುತ್ತಿತ್ತು ಅದನ್ನು ಪುನಃ ನಡೆಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಆದರೆ ಸರ್ಕಾರ ಇದುವರೆಗೆ ಯಾವುದೇ ಕಾರ್ಯಕ್ರಮವನ್ನು ಕೈಕೊಂಡ ಹಾಗೆ ಕಾಣುತ್ತಿಲ್ಲ. ಅದನ್ನು ಪುನಃ ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಸ್ಕೂಲ್ ಟಿ.ಸಿ. ಫಾರಂನಲ್ಲಿ ಕಾಲಂ ೧೦, ೧೧ ರಲ್ಲಿ ನ್ಯಾಶನಾಲಿಟಿ, ರಿಲಿಜನ್, ಕ್ಯಾಸ್ಟ್ ಅಂತ ಇದೆ. ಇದೇ ರೀತಿ ಕ್ಯುಮ್ಯುಲೇಟಿವ್ ರಿಕಾರ್ಡ್‌ನಲ್ಲಿದೆ. ಆದರೆ ಇಲ್ಲಿ ಏನಾಗುತ್ತಿದೆ ಎಂದರೆ ರಿಲಿಜನ್ ಕಾಲಂನಲ್ಲಿ ಹಿಂದೂ ಒಕ್ಕಲಿಗ, ಹಿಂದೂ ಕುರುಬ, ಹಿಂದೂ ಬ್ರಾಹ್ಮಿಣ್, ಹಿಂದೂ ಎಸ್.ಟಿ. ಎಂದು ಬರೆಯುತ್ತಿದ್ದಾರೆ. ಆದರೆ ನಮ್ಮ ಸಂವಿಧಾನದ ಪ್ರಕಾರ ೭ ಧರ್ಮಗಳನ್ನು ಮಾನ್ಯತೆ ಮಾಡ ಲಾಗಿದೆ. ಅವು ಯಾವುವು ಎಂದರೆ ಇಸ್ಲಾಂ, ಹಿಂದೂ, ಜೈನ್, ಬುದ್ಧ, ಕ್ರಿಶ್ಚಿಯನ್, ಸಿಖ್, ಪಾರ್ಸಿ ಎಂದು ಇದನ್ನು ಯಾರೂ ಭರ್ತಿ ಮಾಡುತ್ತಿಲ್ಲ ಇದು ಅಲ್ಲಿರುವ ಮಾಸ್ತರ್‌ಗಳಿಗೂ ಗೊತ್ತಿಲ್ಲ. ಅವರು ಸರಿಯಾಗಿ ಕ್ಯುಮುಲೇಟಿವ್ ರೆಕಾರ್ಡ್‌ನಲ್ಲಿ ಭರ್ತಿ ಮಾಡುತ್ತಿಲ್ಲ.

ಅಧ್ಯಕ್ಷರು.—ಹಿಂದುಳಿದ ಜನಾಂಗದವರಿಗೆ ಏನು ಮಾಡುತ್ತೀರಾ? ಅದನ್ನು ನಮೂದು ಮಾಡದೇ ಹೋದರೆ ತೊಂದರೆಯಾಗುವುದಿಲ್ಲವೇ? ಹಿಂದೂ ಅಂತ ಬರೆದು ಫುಲ್ ಸ್ಟಾಪ್ ಇಡದೇ ಬರೆದಿರಬಹುದು ನೋಡಿ.

೫–೦೦ ಪಿ.ಎಂ.

ಧರ್ಮ ಎಂಬ ಕಲಂ ಏನಿದೆ ಅಲ್ಲಿ ಅಷ್ಟನ್ನು ಮಾತ್ರ ಭರ್ತಿ ಮಾಡಬೇಕು.

MR. SPEAKER.—Please think over it. You have agreed for reservation in favour of backward communities, backward classes. Supposing a particular caste is not mentioned in that list, how to extend the facilities? Please think over it.

ಶ್ರೀ ಗಂಗಣ್ಣ.—ತಮ್ಮ ಮುಖಾಂತರ ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ, ಪಿ.ಯು.ಸಿ. ಬೋರ್ಡಿನಲ್ಲಿ ಏನಾಗಿದೆ ಎಂದರೆ ಇಂಡಿಪೆಂಡೆಂಟ್ ಜೂನಿಯರ್ ಕಾಲೇಜು ಇದ್ದರೆ ಅದು ಪಿ.ಯುಸಿ. ಬೋರ್ಡಿನ ಡೈರೆಕ್ಟರ್‌ರವರ ಕಂಟ್ರೋಲಿಗೆ ಬರುತ್ತದೆ. ಕಾಂಪೋಸಿಟ್ ಜೂನಿಯರ್ ಕಾಲೇಜು ಇದ್ದರೆ ಅದು ಕಮೀಷನ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ರವರ ಕಂಟ್ರೋಲಿಗೆ ಬರುತ್ತದೆ ಹಾಗೂ ಪಿ.ಯು.ಸಿ. ಫಸ್ಟ್ ಗ್ರೇಡ್ ಕಾಲೇಜಿನಲ್ಲಿದ್ದರೆ ಡೈರಕ್ಟರೇಟ್ ಕೊಲೀಜಿಯೇಟ್ ಎಜುಕೇಷನ್‌ಗೆ ಬರುತ್ತದೆ. ಈ ರೀತಿ ಇರುವುದನ್ನು ರದ್ದು ಮಾಡಿ ಮೂರನ್ನೂ ಒಂದೇ ಕಡೆ ಬರುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ಅವ್ಯವಸ್ಥೆ ಬೇಡ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಿಂದಿನ ಸರ್ಕಾರ ನಿಮ್ಮ ಜಾತಿಯ ಹಾಗೂ ನಿಮ್ಮ ವರ್ಗಕ್ಕೆ ಸಂಬಂಧ ಪಟ್ಟ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದ ಕೂಡಲೇ ಅನುದಾನವನ್ನು ನೀಡುವ ಒಂದು ವ್ಯವಸ್ಥೆಯನ್ನು ಮಾಡಿತ್ತು. ಅದೇ ರೀತಿ ಹಿಂದುಳಿದ ವರ್ಗದವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿದರೆ ೩ ವರ್ಷ ಗಳ ಕಾಲದನಂತರ ಅನುದಾನವನ್ನು ಪಡೆಯುತಕ್ಕ ವ್ಯವಸ್ಥೆಯನ್ನು ನಮ್ಮ ಇಂದಿನ ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕೊನೆಯ ಸಲಹೆ ಏನೆಂದರೆ, ಟಿ.ಡಿ.ಬಿ.ಯು, ಮುನಿಸಿ ಪಾಲಿಟಿಯು, ಪಂಚಾಯಿತಿಯ ಪ್ರೌಢ ಶಾಲೆಗಳನ್ನು ಸರ್ಕಾರ ವಹಿಸಿಕೊಂಡ ಈ ಲಾಗಾಯ್ತು ಉಪಾಧ್ಯಾಯರ ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡಿಲ್ಲ. ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಶಿಕ್ಷಣ ಸಚಿವರಾಗಿದ್ದಾಗ ನಮ್ಮ ಭಾಗದಲ್ಲಿ ೨ ಟಿ.ಡಿ.ಬಿ.ಯು, ೨ ಮುನಿಸಿಪಾಲಿಟಿಯು, ಒಂದು ಟೌನ್ ಪಂಚಾಯ್ತಿಯು ಪ್ರೌಢ ಶಾಲೆಗಳನ್ನು ಸರ್ಕಾರ ವಶಪಡಿಸಿಕೊಂಡಿದ್ದು, ಇದುವರೆಗೆ ಏನು ಕ್ರಮ ಕೈ ಗೊಂಡಿಲ್ಲ. ಅನೇಕ ಜನ ಉಪಾಧ್ಯಾಯರು ನಿವೃತ್ತರಾಗಿ ಕೆಲವೇ ಜನರು ಉಳಿದಿದ್ದಾರೆ. ಕೊನೇಪಕ್ಷ ಅವರಿಗಾದರೂ ಬಡ್ತಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ರಾಯಚೂರು ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಡಿಡಿಪಿಐ. ಹುದ್ದೆ ಖಾಲಿ ಇದೆ, ಜಿಲ್ಲಾ ವಿದ್ಯಾಧಿಕಾರಿಗಳ ಹುದ್ದೆ ಹಾಗೂ ಅದೇ ಕಛೇರಿಯಲ್ಲಿರತಕ್ಕ ಮ್ಯಾನೇಜರ್ ಹುದ್ದೆ ಮತ್ತು District Adult Education Officer Post ಖಾಲಿ ಇದೆ. ಈ ಬಗ್ಗೆ ನಾನು ಅಧಿಕಾರಿಗಳನ್ನು ಮತ್ತು ಸಚಿವರನ್ನು ಕಂಡಿದ್ದೇನೆ ಆದರೂ ಕೂಡ ಇದುವರೆಗೆ ಹುದ್ದೆಗಳದ್ದು ಭರ್ತಿ ಮಾಡಿಲ್ಲ. ದಯವಿಟ್ಟು ಆದಷ್ಟು ಜಾಗ್ರತೆ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡು ತಾವು ನನಗೆ ಮಾತ ನಾಡಲು ಸಾಕಷ್ಟು ಕಾಲಾವಕಾಶವನ್ನು ಕೊಟ್ಟದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ. ರಾಮು (ಚನ್ನಪಟ್ಟಣ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ವಿದ್ಯಾ ಇಲಾಖೆಯ ಇಬ್ಬರು ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಪ್ರಪ್ರಥಮವಾಗಿ ನಮ್ಮ ಮಕ್ಕಳ, ನಮ್ಮ ನಾಡಿನ ಹಣೆಬರವನ್ನು ಬರೆಯತಕ್ಕ ಮಹತ್ವದ ಇಲಾಖೆಯೆಂದರೆ ಈ ವಿದ್ಯಾ ಇಲಾಖೆ. ಈ ಇಲಾಖೆ ಸರಿಯಾಗಿ ಕೆಲಸ ಮಾಡಿದರೆ, ಒಳ್ಳೆಯ ರೀತಿಯಲ್ಲಿ ನಡೆದರೆ ಒಂದು ಉತ್ತಮವಾದ ರಾಜ್ಯವನ್ನು ರಾಷ್ಟ್ರವನ್ನು ನಿರ್ಮಾಣ ಮಾಡಬಹುದು, ಇಲ್ಲದೆ ಹೋದರೆ ನಮ್ಮ ಮುಂದಿನ ಪೀಳಿಗೆ ಬಹಳಷ್ಟು ಸಂಕಷ್ಟಕ್ಕೆ ಸಿಕ್ಕುವ ಪರಿಸ್ಥಿತಿಯನ್ನು ಎದುರಿಸತಕ್ಕ ಸನ್ನಿವೇಶವನ್ನು ನಾವು ನಿರ್ಮಾಣ ಮಾಡಿದಂತಾಗುತ್ತದೆಂದು ನನ್ನ ಭಾವನೆ. ಇವತ್ತಿನ ದಿವಸ ಈ ರಾಜ್ಯದಲ್ಲಿ ೩೪,೯೭೦ ಪ್ರಾಥಮಿಕ ಶಾಲೆಗಳೂ, ೨೩೫೨ ಪ್ರೌಢಶಾಲೆಗಳೂ ಹಾಗೂ ೨೮೧ ಜೂನಿಯರ್ ಕಾಲೇಜುಗಳು ಇವೆ. ನಮ್ಮ ಆಯವ್ಯಯದ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಹಣವನ್ನು ವಿದ್ಯಾಭ್ಯಾಸಕಾ ಗಿ ಖರ್ಚು ಮಾಡುತ್ತಿದ್ದೇವೆ. ಆದರೆ ದುರಾದೃಷ್ಟವಶಾತ್ ನಮಗೆ ಸ್ವಾತಂತ್ರ್ಯ ಬಂದು ೩೪ ವರ್ಷಗಳು ಕಳೆಯುತ್ತ ಬಂದಿದ್ದರೂ ಸಹ ನಾವು ಇವತ್ತು ಮಾರಿ ಗುಡಿಗಳಲ್ಲೇ ಶಾಲೆಗಳನ್ನು ನಡೆಸುತ್ತಿದ್ದೇವೆ. ಈ ದೃಶ್ಯವನ್ನು ಹಳ್ಳಿಗಾಡಿನ ಕಡೆ ಹೋದರೆ ಕಾಣಬಹುದು. ಆದುದರಿಂದಲೇ, ನಾನು ಈ ಸದನದಲ್ಲಿ ಮಾತನಾಡುವಾಗ ಹಳ್ಳಿಯ ವಿದ್ಯಾರ್ಥಿಗಳಿಗೆ, ಹಳ್ಳಿಯಿಂದ ಬರತಕ್ಕ ಜನರಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಹೇಳುತ್ತಲೇ ಬರುತ್ತಿದ್ದೇನೆ. ಮಾನ್ಯ ಮಳ್ಳೂರು ಆನಂದರಾಯರು ಹೇಳುತ್ತಿದ್ದರು, ನಗರಗಳಲ್ಲಿರತಕ್ಕ ಶಾಲೆಗಳಲ್ಲಿ ಕ್ಯಾಪಿಟೇಷನ್ ಫೀ ವಸೂಲ್ಮಾಡುತ್ತಾರೆ, ಹಣದ ಹೊಳೆಯನ್ನೇ ಹರಿಸುತ್ತಾರೆ ಎಂದು. ನಗರ ಪ್ರದೇಶಗಳಲ್ಲಿರತಕ್ಕ ಮಕ್ಕಳಿಗೆ ಒಳ್ಳೆಯ ಅನುಕೂಲತೆ ಇದೆ ಅವರು ಒಳ್ಳೆಯ ವಿದ್ಯಾಭಾಸವನ್ನು ಮತ್ತು ಉತ್ತಮ ಅಂಕಗಳನ್ನು ಪಡೆಯುತ್ತಾರೆ. ಆದರೆ ಹಳ್ಳಿಯ ಶಾಲೆಗಳಲ್ಲಿ ಓದತಕ್ಕ ಮಕ್ಕಳಿಗೆ ಆ ಅನುಕೂಲ ಇರುವುದಿಲ್ಲ, ಆ ಪರಿಸರ, ಆ ಸನ್ನಿವೇಶ ಇರುವುದಿಲ್ಲ. ಆದುದರಿಂದ ಅವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತಿ ಹಿಂದೆ ಬೀಳುತ್ತಾರೆ ಹೆಚ್ಚು ಅಂಕಗಳನ್ನು ಪಡೆಯುವುದಕ್ಕಾಗುವುದಿಲ್ಲ. ಆದುದರಿಂದ ಮೆಡಿಕಲ್ ಕಾಲೇಜುಗಳಿಗೆ ಮತ್ತು ಟೆಕ್ನಿಕಲ್ ಕಾಲೇಜುಗಳಿಗೆ ಅಭ್ಯರ್ಥಿಗಳನ್ನು ಆರಿಸುವಾಗ ಶೇಕಡ ೫೦ರಷ್ಟು ಮಂದಿ ಹಳ್ಳಿಗಳಿಂದ ಬರತಕ್ಕ ವಿದ್ಯಾರ್ಥಿಗಳನ್ನು ಆರಿಸಬೇಕೆಂದು ಸಲಹೆ ಮಾಡುತ್ತೇನೆ. ಅವರಿಗೋಸ್ಕರ ಅಷ್ಟು ಸೀಟುಗಳನ್ನು ಮೀಸಲಾಗಿಡಬೇಕೆಂದು ಹೇಳುತ್ತೇನೆ. ೧೯೪೭ಕ್ಕೆ ಮೊದಲು ನಮ್ಮ ಗಂರಿ ಸ್ವಾತಂತ್ರ್ಯವನ್ನು ಸಂಪಾದಿಸಕ್ಕದ್ದು ಆಗಿತ್ತು. ಅವತ್ತಿನ ದಿವಸ ಯಾವುದೇ ಕಾಲೇಜಿಗೆ ಹೋಗಲಿ, ಯಾವುದೇ ಶಾಲೆಗೆ ಹೋಗಲಿ ಆ ಮಕ್ಕಳಲ್ಲಿ ದೇಶಭಕ್ತಿ ಹಾಗೂ ಸ್ವಾತಂತ್ರ್ಯದ ಬಗ್ಗೆ ತಿಳಿವಳಿಕೆ ತಾಂಡವವಾಡುತ್ತಿತ್ತು. ಆದರೆ ದುರಾದೃಷ್ಟವಶಾತ್ ಸ್ವಾತಂತ್ರ್ಯ ಬಂದ ಮೇಲೆ ಇವತ್ತಿನ ದಿವಸ ಮಕ್ಕಳನ್ನು ನೋಡಿದರೆ ದೇಶಭಕ್ತಿ ಎಂಬುದು ಅವರಲ್ಲಿ ಲವಲೇಶವೂ ಕಾಣುವುದಿಲ್ಲ, ನಮಗೆ ಸ್ವಾತಂತ್ರ್ಯ ಸಿಕ್ಕಿರುವುದರಿಂದ ರಸ್ತೆಯ ಮಧ್ಯದಲ್ಲಿ ನೇರವಾಗಿ ನಡೆಯಬಹುದೆಂದು ಭಾವಿಸಿ ನಡೆಯುತ್ತಿರುವಾಗ ಹಿಂದುಗಡೆಯಿಂದ ಕಾರಿನವನು ಬಂದು ಹಾರ್ನ್ ಮಾಡಿದರೂ ದಾರಿ ಬಿಡದೆ ನಮಗೆ ಸ್ವಾತಂತ್ರ್ಯ ಸಿಕ್ಕಿದೆ, ನನ್ನನ್ನು ಕೇಳುವುದಕ್ಕೆ ನೀನು ಯಾರು ಎಂದು ಕೇಳತಕ್ಕ ಪರಿಸ್ಥಿತಿ ಬಂದಿದೆ, ಒಂದು ವೇಳೆ ಕಾರಿನವನು ಡಿಕ್ಕಿ ಹೊಡೆದರೆ ಆ ಮೇಲೆ ಸ್ವಾತಂತ್ರ್ಯದ ಗತಿ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಇವತ್ತಿನ ದಿವಸ ಇಡೀ ರಾಷ್ಟ್ರದಲ್ಲಿ ವಿದ್ಯಾರ್ಥಿಗಳ ಆಂದೋಳನವನ್ನು ಕಾಣುತ್ತಿದ್ದೇವೆ. ಎಲ್ಲಿ ನೋಡಿದರೂ ಅಶಾಂತಿ ಕಂಡುಬರುತ್ತಿದೆ. ಕಾರಣ ಏನೆಂದರೆ, ಅದಕ್ಕೆಲ್ಲ ಇವತ್ತಿನ ಪರಿಸರ, ಸನ್ನಿವೇಶ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ತಪ್ಪು ಬರೀ ವಿದ್ಯಾರ್ಥಿಗಳದ್ದು ಅಲ್ಲ, ಆ ತಪ್ಪನ್ನು ಉಪಾಧ್ಯಾಯರು ಮತ್ತು ಪೋಷಕರು ಕೂಡ ಹಂಚಿಕೊಳ್ಳಬೇಕು. ಎಲ್ಲರೂ ಕೂಡಿ ಎಚ್ಚರಗೊಂಡರೆ ಮಾತ್ರ ನೇರವಾಗಿ ನಮ್ಮ ಮಕ್ಕಳನ್ನು ತಿದ್ದಬಹುದು, ಇಲ್ಲದಿದ್ದಾಗ, ಅಶಾಂತಿಯ ಕಡೆಗೆ, ಸ್ವಾತಂತ್ರ್ಯವನ್ನು ಹರಣ ಮಾಡುವ ಕಡೆಗೆ ಹೋಗಬಹುದು. ವಿದ್ಯಾರ್ಥಿಗಳು ರಸ್ತೆಗೆ ಇಳಿದರೆ ಹೊಸ ಹೊಸ ಬಸ್ಸುಗಳು ನುಚ್ಚುನೂರಾಗುತ್ತವೆ. ಬೀದಿಯ ದೀಪಗಳು ತನ್ನದೇ ಆದ ರೀತಿಯಲ್ಲಿ ಚೂರು ಚೂರಾಗುತ್ತವೆ. ಇಂಥ ಪರಿಸರವನ್ನು ನಿರ್ಮಾಣ ಮಾಡುವುದಕ್ಕೆ ನಾವು ಇವತ್ತು ಹೊರಟಿದ್ದೇವೆ. ಆದ್ದರಿಂದ, ಸರ್ಕಾರ ಇವತ್ತು ಬಿಗಿ ನೀತಿಯನ್ನು ಅನುಸರಿಸಲೇಬೇಕು. ಉಪಾಧ್ಯಾಯರು ತಮ್ಮ ಒಂದು ಕರ್ತವ್ಯನಿಷ್ಠೆಯಿಂದ, ವಿಶಾಲ ಮನೋಭಾವನೆಯಿಂದ ಕೆಲಸ ಮಾಡಬೇಕು. ಅದನ್ನು ಬಿಟ್ಟು ೩೦ ದಿನಗಳನ್ನು, ಗಂಟೆಗಳನ್ನು ಲೆಕ್ಕ ಹಾಕತಕ್ಕ ದಿಕ್ಕಿನಲ್ಲಿ ಕೆಲಸ ಮಾಡಿದರೆ ಅದರಿಂದ ಒಳ್ಳೆಯ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಉಪಾಧ್ಯಾಯರು ಮತ್ತು ಪೋಷಕರು ಎಚ್ಚರಿಕೆಯಿಂದ ಮಕ್ಕಳನ್ನು ನೋಡಿಕೊಳ್ಳಬೇಕು. ಮಕ್ಕಳು ಮನೆಗೆ ಬಂದ ತಕ್ಷಣ ಶಾಲೆಯಲ್ಲಿ ಏನು ಪಾಠ ಮಾಡಿದರು

ನೋಟ್ಸ್ ಬರೆ, ಓದು ಎಂದು ತಂದೆತಾಯಿಗಳು ಹೇಳಿದರೆ ಮಕ್ಕಳು ಚೆನ್ನಾಗಿ ಓದಿ ಪಾಸಾಗುತ್ತಾರೆ. ಆ ಒಂದು ಕೆಲಸವನ್ನು ತಂದೆತಾಯಿಗಳಾದರು ಮಾಡದೆ ಇದ್ದರೆ ಅವರನ್ನು ಹೇಳುವವರು ಕೇಳುವವರು ಯಾರೂ ಇಲ್ಲವಾಗಿ ಸಿನೇಮಾ ನೋಡುವ ದುಶ್ಚಟ, ತುಂಟಾಟ ಮಾಡುವ ದುಶ್ಚಟಗಳನ್ನು ಕಲಿತು ಹಾಳಾಗತಕ್ಕ ಪರಿಸ್ಥಿತಿ ಬರುತ್ತದೆ. ಇವತ್ತು ಅನೇಕ ಮಕ್ಕಳು ಆ ರೀತಿ ಹಾಳಾಗುತ್ತಿದ್ದಾರೆ. ಇವತ್ತಿನ ದಿವಸ, ಚಲನಚಿತ್ರಗಳು ಸಹ ಯುವಕರ ಮೇಲೆ ಮಕ್ಕಳ ಮೇಲೆ ಬಹಳ ಕೆಟ್ಟ ಪರಿಣಾಮವನ್ನು ಬೀರುತ್ತಿವೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ೧೯೫೪ರಲ್ಲಿ ನಾನು ಜೂನಿಯರ್ ಇಂಟರ್‌ನಲ್ಲಿ ಓದುತ್ತಿರಬೇಕಾದರೆ ಝಾನ್ಸಿರಾಣಿ ಲಕ್ಷ್ಮಿಬಾಯಿ ಎಂಬ ಸಿನೇಮಾಕ್ಕೆ ಹೋಗಿದ್ದೆ. ಸಿನಿಮಾ ನೋಡುತ್ತಾ ನೋಡುತ್ತಾ ನನ್ನ ಪಕ್ಕದಲ್ಲಿದ್ದ ಯುವಕ ಎದ್ದೇಬಿಟ್ಟ ಹೊಡೀ ಹೊಡೀ ಎಂದು. ಅಂದರೆ ಅಂಥಚಿತ್ರಗಳನ್ನು ನೋಡುವಾಗ ದೇಶಭಕ್ತಿ ಹುಟ್ಟುತ್ತಿತ್ತು. ಆದರೆ ಇವತ್ತಿನ ದಿವಸ ಸಿನಿಮಾಗಳನ್ನು ನೋಡಿ ಚೂರಿ ತೆಗೆದುಕೊಳ್ಳತಕ್ಕ, ಕಲ್ಲು ಬೀರತಕ್ಕ ಮತ್ತು ಕೆಟ್ಟ ರೀತಿಯಲ್ಲಿ ವರ್ತಿಸತಕ್ಕ ಗುಣ ಬರುತ್ತಿದೆ. ಈ ಎಲ್ಲ ಅಂಶಗಳೂ ಸಹ ಇವತ್ತಿನ ದಿವಸ ವಿದ್ಯಾರ್ಥಿಗಳ, ಯುವಕರ ಮನಸ್ಸನ್ನು ಕೆಡಿಸಿ ವಿದ್ಯಾಭ್ಯಾಸ ಹಾಳಾಗಿ ಆದರ್ಶ ಪೌರರಾಗುವ ಬದಲು ಅದರ ವಿರುದ್ಧವಾದ ದಿಕ್ಕಿನಲ್ಲಿ ನಡೆಯಲು ಅವಕಾಶವಾಗುತ್ತಿದೆ. ಇದನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಇದಕ್ಕೆ ಒಂದು ನಿಯಂತ್ರಣ ಇರಬೇಕು. ಆಗ ಮಾತ್ರ ನಾವು ಒಳ್ಳೆಯದನ್ನು ಮಾಡುವುದಕ್ಕೆ ಸಾಧ್ಯ. ಇವತ್ತು ವಿದ್ಯಾರ್ಥಿಗಳು ಸರಿಯಾದ ರೀತಿಯಲ್ಲಿ ಬರೆದು ಪರೀಕ್ಷೆಯಲ್ಲಿ ಪಾಸಾಗುತ್ತಿಲ್ಲ. ಕಾಪಿ ಹೊಡೆದು ಸುಲಭದಲ್ಲಿ ಡಿಗ್ರಿ ಪಡೆಯುವ ಹವ್ಯಾಸ ಹೆಚ್ಚಾಗಿದೆ. ಇದೆಲ್ಲಾ ನೋಡಿದಾಗ ಒಂದುರೀತಿಯ ನೆಗೆಟೀವ್ ಅಪ್ರೋಚ್ ತೆಗೆದುಕೊಳ್ಳುತ್ತಿದ್ದಾರೆ ಎಂದೆನಿಸುತ್ತದೆ. ಇದು ತಪ್ಪಬೇಕು. ನಾವು ಕೊಡತಕ್ಕ ಶಿಕ್ಷಣ ವೃತ್ತಿ ಶಿಕ್ಷಣವನ್ನು ಅವಲಂಬಿಸಬೇಕು. ಯಾವುದೇ ಯುವಕ ಕಾಲೇಜನ್ನು ಬಿಟ್ಟಮೇಲೆ ತನ್ನ ಕಾಲಿನ ಮೇಲೆ ನಿಂತುಕೊಳ್ಳತಕ್ಕ ಶಕ್ತಿ ಇರತಕ್ಕ ಶಿಕ್ಷಣ ಕೊಡಬೇಕು. ಶಿಕ್ಷಣದ ಮುಖವೇ ಬದಲಾವಣೆಯಾಗಬೇಕು ಆಗ ಮಾತ್ರ ಸಾಮಾಜಿಕ ಚಿತ್ರ ಬದಲಾವಣೆಯಾಗುತ್ತದೆ ಎಂದು ನನ್ನ ಅಭಿಪ್ರಾಯ. ಇವತ್ತಿನ ದಿವಸ ಶಾಲಾ ಕಟ್ಟಡಗಳೇ ಇಲ್ಲದೆ ಶಾಲೆಗಳು ನಡೆಯುತ್ತಿವೆ. ಇದಕ್ಕಾಗಿ ಕೇವಲ ೯ ಲಕ್ಷರೂಪಾಯಿಗಳನ್ನು ಇಡೀ ರಾಜ್ಯಕ್ಕೆ ಒದಗಿಸಿದ್ದೀರಿ. ಇಡೀ ರಾಜ್ಯಕ್ಕೆ ೯ ಲಕ್ಷ ರೂಪಾಯಿ ಎಂದರೆ ಒಂದು ತಾಲ್ಲೂಕಿಗೆ ೧೦ ರೂ. ಬರಬಹುದು (೪,೫೦೦ ರೂಪಾಯಿ ಪ್ರಕಾರ). ಹೀಗಾದರೆ ಗತಿ ಏನು? ಊರಿನಲ್ಲಿರುವ ಮಾರಿ ಗುಡಿಗಳಿಗೇ ಮತ್ತೆ ಶರಣು ಹೋಗಬೇಕು. ಇಂಥ ಪರಿಸ್ಥಿತಿಯಲ್ಲಿದ್ದೇವೆ. ಇದು ತಪ್ಪಬೇಕು. ಮತ್ತೆ ಕಟ್ಟಡಗಳನ್ನು ಕಟ್ಟಿಸಿದಮೇಲೆ ಅದನ್ನು ರಿಪೇರಿ ಮಾಡುವುದಕ್ಕೆ, ಸುಣ್ಣ ಬಣ್ಣ ಮಾಡುವುದಕ್ಕೆ ಹಣ ಇರುವುದಿಲ್ಲ ಇದಕ್ಕೆ ಹೆಚ್ಚು ಹೆಚ್ಚು ಹಣ ಒದಗಿಸಬೇಕು ಎಂದು ಸಲಹೆ ಮಾಡುತ್ತೇನೆ. ಪಾಲಿಟೆಕ್ನಿಕ್‌ನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬಿ.ಇ. ಪದವಿ ತರಗತಿಗೆ ಸೇರುವುದಕ್ಕೆ ಅವಕಾಶ ಒದಗಿಸಿಕೊಡಬೇಕು. ಡಿಪ್ಲೊಮಾ ಪಡೆದ ವಿದ್ಯಾರ್ಥಿಗಳಿಗೆ ಇಂತಿಷ್ಟು ಸೀಟುಗಳನ್ನು ಬಿ.ಇ. ತರಗತಿಯಲ್ಲಿ ಮೀಸಲಾಗಿಡಬೇಕೆಂದು ಮಾನ್ಯ ವಿದ್ಯಾಮಂತ್ರಿಗಳಲ್ಲಿ ನಾನು ಸಲಹೆ ಮಾಡುತ್ತೇನೆ. ಈಗಾಗಲೇ ಈ ಬಗ್ಗೆ ವಿದ್ಯಾರ್ಥಿಗಳು ಆಂಧೋಳನ ನಡೆಸಿ ಅನೇಕ ಬಾರಿ ಉಪವಾಸ ಸತ್ಯಾಗ್ರಹವನ್ನು ನಡೆಸಿದ್ದಾರೆ. ಆದ್ದರಿಂದ ಈ ಬಗ್ಗೆ ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯುವಜನ ಸೇವಾ ಇಲಾಖೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡಬೇಕೆಂದು ಸಲಹೆ ಮಾಡುತ್ತೇನೆ. ರಾಜ್ಯದಲ್ಲಿ ಯೂತ್ ಕ್ಲಬ್‌ಗಳಿವೆ. ಅದು ಚೆನ್ನಾಗಿ ಕೆಲಸ ಮಾಡಿದರೆ ನವರಾಜ್ಯ ನಿರ್ಮಾಣ ಮಾಡುವ ದಿಕ್ಕಿನಲ್ಲಿ ಹೆಚ್ಚು ಕೆಲಸ ಮಾಡಬಹುದು ಎಂದು ನನ್ನ ಭಾವನೆ. ಸ್ಟೇಡಿಯಂಗಳನ್ನು ಒಂದೊಂದು ತಾಲ್ಲೂಕಿನಲ್ಲೂ ಕಟ್ಟಿದರೆ ಅಲ್ಲಿರತಕ್ಕ ಮಕ್ಕಳ ಕ್ರೀಡೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ವಾರ್ತಾ ಮತ್ತು ಪ್ರಚಾರ ಇಲಾಖೆಯೂ ಕೂಡ ಇನ್ನೂ ಚೆನ್ನಾಗಿ ಕೆಲಸ ಮಾಡಬೇಕು. ಆದರೆ ಈ ವರ್ಷದ ಕಾರ್ಯ ತೃಪ್ತಿಕರವಾಗಿಲ್ಲ. ಇನ್ನು ಮುಂದಾದರೂ ರಾಜ್ಯದ ಪ್ರಗತಿಯನ್ನು ಜನರಿಗೆ ತಿಳಿಸಬೇಕು, ಪ್ರಗತಿಯ ಬಗ್ಗೆ ಒಳ್ಳೆಯ ಪ್ರಚಾರ ನೀಡಿ ಜನರಲ್ಲಿ ಹರಡಬೇಕು ಎಂದು ಕೇಳಿಕೊಳ್ಳುತ್ತೇನೆ. ೧೮೦ ಕೋಟಿ ರೂಪಾಯಿಗಳ ಶಿಕ್ಷಣ ಖಾತೆಯ ಬೇಡಿಕೆ ಏನಿದೆ ಇದನ್ನು ಸ್ವಾಗತಿಸುತ್ತಾ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಂಡು ಶಿಕ್ಷಣ ಸುಧಾರಣೆಯಲ್ಲಿ ದಿಟ್ಟ ಹೆಜ್ಜೆಯನ್ನು ಈ ಸಚಿವತ್ರಯರು ಇಟ್ಟು ಕೆಲಸ ಮಾಡುತ್ತಾರೆಂದು ಆಶಿಸುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈಹಿಂದ್.

ಶ್ರೀ ಟಿ, ಚೌಡಯ್ಯ (ಬರಮಸಾಗರ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಶಿಕ್ಷಣ ಖಾತೆಗೆ ಸಂಬಂಧಪಟ್ಟ ೫ ಬೇಡಿಕೆಗಳ ಬಗ್ಗೆ ನಡೆಯುತ್ತಿರುವ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನಾನು ಕೂಡ ನಿಂತಿದ್ದೇನೆ. ಈ ಶಿಕ್ಷಣ ಖಾತೆ ಬೇಡಿಕೆಗೆ ಮಾನ್ಯ ಮಂತ್ರಿಗಳು ಸುಮಾರು ೧೯೦ ಕೋಟಿ ರೂಪಾಯಿಗೂ ಮೇಲ್ಪಟ್ಟು ಹಣವನ್ನು ಅಳವಡಿಸಿದ್ದಾರೆ. ಶಿಕ್ಷಣ ಖಾತೆ ಹಿಂದಿನ ಮೈಸೂರು ರಾಜ್ಯದಲ್ಲೂ ಕೂಡ ಅತ್ಯಂತ ಅಗ್ರ ಸ್ಥಾನವನ್ನು ವಹಿಸಿತ್ತಲ್ಲದೇ ಕರ್ನಾಟಕ ರಾಜ್ಯದಲ್ಲಿ ಈಗಲೂ ಅದೇ ಸ್ಥಾನವನ್ನು ವಹಿಸಿದೆ ಮತ್ತು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಶಿಕ್ಷಣ ರಂಗಕ್ಕೆ ನಮ್ಮ ರಾಜ್ಯದಲ್ಲಿ ಖರ್ಚು ಮಾಡುತ್ತಿರುವಷ್ಟು ಹಣ ಬೇರೆಲ್ಲೂ ಮಾಡುತ್ತಿಲ್ಲ. ಅದೇ ಸಂಪ್ರದಾಯವನ್ನು ಈಗಲೂ ಮುಂದುವರೆಸಿಕೊಂಡು ಬಂದಿರುವುದು ಹೆಮ್ಮೆಯ ವಿಷಯ, ಹಾಗೂ ಸಂತೋಷದಾಯಕವಾದ ವಿಷಯ. ಸ್ವಾತಂತ್ರ್ಯಗಳಿಸಿದ ೨೫ ವರ್ಷಗಳ ನಂತರ ಶಿಕ್ಷಣ ಮತ್ತು ಇತರ ಎಲ್ಲ ರಂಗಗಳಲ್ಲೂ ಪ್ರಗತಿಪರವಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗತಕ್ಕ ದಿಸೆಯಲ್ಲಿ ನಮ್ಮ ರಾಜ್ಯ ಮುನ್ನಡೆಯುತ್ತಿದ್ದು ಶಿಕ್ಷಣ ರಂಗಕ್ಕೆ ದೊಡ್ಡ ಗಾತ್ರದಲ್ಲಿ ಹಣವನ್ನು ಅಳವಡಿಸಿದ್ದಾರೆ. ಆದರೆ ಈ ಗಾತ್ರಕ್ಕೆ ತಕ್ಕಂತೆ ಗುಣಮಟ್ಟ ಶಿಕ್ಷಣದಲ್ಲಿ ನಾವು ಕಾಣುತ್ತಿಲ್ಲ. ಶಿಕ್ಷಣ ರಂಗದಲ್ಲಿ ಅದರ ಪ್ರತಿಫಲ ಕಾಣುತ್ತಿಲ್ಲ. ಇದಕ್ಕೇನಾದರೂ ಒಂದು ಕಾರಣ ಇರಲೇಬೇಕು. ಕಾರಣ ಇಲ್ಲದೆ ಯಾವ ಕಾರ್ಯವೂ ಹೊರಕ್ಕೆ ಬರಲು ಸಾಧ್ಯವಿಲ್ಲ. Without cause there cannot be any effect. ಆದ್ದರಿಂದ ಇದಕ್ಕೆ ಕಾರಣ ಏನು ಎಂಬ ಬಗ್ಗೆ ಶಿಕ್ಷಣ ತಜ್ಞರು ಅನೇಕ ವರದಿಗಳನ್ನು ಕೊಟ್ಟಿದ್ದಾರೆ. ನಮ್ಮ ಭಾರತ ಸರ್ಕಾರ ನೇಮಕ ಮಾಡಿದಂಥ ಕೊಠಾರಿ ಆಯೋಗ, ರಾಧಾಕೃಷ್ಣನ್ ಸಮಿತಿ, ಮೊದಲಿಯಾರ್ ಆಯೋಗ ಇತ್ಯಾದಿ ವರದಿಗಳು ಇವೆ. ಸಮಸ್ಯೆ ತಜ್ಞರ ಪರೀಕ್ಷೆಗೆ ಒಳಪಟ್ಟು ಅದಕ್ಕೆ ಪರಿಹಾರಗಳನ್ನು ಕಂಡುಹಿಡಿದು ನೀಡಿದ ವರದಿ ಭಾರತ ಸರ್ಕಾರದ ಮುಂದೆ ಇದೆ. ಮತ್ತು ನಮ್ಮ ಸರ್ಕಾರದ ಮುಂದೆ ಕೂಡ ಇದೆ. ಹೀಗಿರುವಾಗ ಮತ್ತು ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಹಣವನ್ನು ಶಿಕ್ಷಣ ರಂಗಕ್ಕೆ ಖರ್ಚು ಮಾಡುವಾಗ ನಾವು ಇದರಲ್ಲಿ ಏನು ನ್ಯಾಯವನ್ನು ಜನತೆಗೆ ದೊರಕಿಸಿಕೊಡಬೇಕೋ ಅದನ್ನು ದೊರಕಿಸಿಕೊಡುತ್ತಿದ್ದೇವೆಯೇ ಎಂಬ ಬಗ್ಗೆ ವಿಚಾರ ಮಾಡಬೇಕು. ಬೇರೆ ವೇದಿಕೆಯಲ್ಲಿ ವಿಚಾರ ಮಾಡುವುದಕ್ಕೆ ನಮಗೆ ಅವಕಾಶ ಇಲ್ಲ. ಈ ವೇದಿಕೆಯಲ್ಲಿ ವಿಚಾರ ಮಾಡುವುದಕ್ಕೆ ಅವಕಾಶವಿರುವುದರಿಂದ ಮಾನ್ಯ ಅಧ್ಯಕ್ಷರು ಇದಕ್ಕೆ ಅವಕಾಶ ಮಾಡಿಕೊಡುತ್ತಾರೆಂದು ನಂಬಿ ಸಮಯ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸಂವಿಧಾನದಲ್ಲಿ ಎಲ್ಲರಿಗೂ ಕೂಡ ಶಿಕ್ಷಣ ದೊರೆಯಬೇಕೆಂಬ ನಿಯಮವಿದೆ. ಸಂವಿಧಾನದ ೪೫ನೇ ವಿಧಿಯಲ್ಲಿ,

> "The State shall endeaver to provide within 10 years from the commencement of this Constitution for free compulsory education for all ages until they complete the age of 14 years"

ಎಂದು ಇದೆ. ೨೨ ವರ್ಷಗಳ ಹಿಂದೆ ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ವಿಷಯ ಇದು. ಇದರ ಮೊದಲ ಹೆಜ್ಜೆಯಾಗಿ ಶಾಲೆಗೆ ಹೋಗಲು ಅರ್ಹತೆಯಿರುವ ಮಕ್ಕಳನ್ನು ಶಾಲೆಗೆ ಸೇರಿಸುವುದರಲ್ಲಿ ನಾವು ಎಷ್ಟರಮಟ್ಟಿಗೆ ಹೆಜ್ಜೆಯನ್ನಿಟ್ಟು ಕಾರ್ಯಕ್ರಮವನ್ನು ನಡೆಸಿಕೊಂಡುಬಂದಿದ್ದೇವೆ ಎಂಬುದನ್ನು ನೋಡಿದರೆ ಈ ದಿವಸ ನಮ್ಮ ಸಮಾಜದ ಅದರಲ್ಲೂ ಗ್ರಾಮಾಂತರ ಪ್ರದೇಶಗಳ ಚಿತ್ರವನ್ನು ನೋಡುವುದಾದರೆ ಅಲ್ಲಿ ಶೇಕಡ ಅರ್ಧಕ್ಕಿಂತ ಹೆಚ್ಚು ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಅಂದರೆ ಕಡ್ಡಾಯ ಶಿಕ್ಷಣವನ್ನು ಸರಿಯಾಗಿ ಕೊಡುತ್ತಿಲ್ಲ ಎಂಬುದು ಗೊತ್ತಾಗುತ್ತದೆ. ಇದರ ಬಗ್ಗೆ ಕಾನೂನನ್ನು ತಂದಿರುವುದೂ ನನ್ನ ಜ್ಞಾಪಕದಲ್ಲಿದೆ. ಸಂವಿಧಾನದಲ್ಲಿ ಪ್ರಾವಿಷನ್ ಇದ್ದರೂ, ಇದರ ಬಗ್ಗೆ ಕಾನೂನು ಮಾಡಿಕೊಂಡಿದ್ದರೂ ಕೂಡ ಈ ಇಲಾಖೆ ಕಡ್ಡಾಯ ಶಿಕ್ಷಣದ ಬಗ್ಗೆ ಏತಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ ಎಂದು ಕೇಳಬೇಕಾಗಿದೆ. ಈ ವಾರ್ಷಿಕ ವರದಿಯನ್ನು ಓದಿದರೆ ಎಲ್ಲೂ ಕೂಡ ಕಡ್ಡಾಯ ಶಿಕ್ಷಣದ ಬಗ್ಗೆ ಬರೆದಿಲ್ಲ. ಒಂದು ವೇಳೆ ಬಿಟ್ಟುಹೋಗಿದ್ದರೆ ಸರ್ಕಾರ ಉತ್ತರ ಕೊಡುವಾಗಲಾದರೂ ಅದನ್ನು ತಿಳಿಸಬೇಕು. ಈ ಕಾರ್ಯಕ್ರಮದ ಬಗ್ಗೆ ಸರ್ಕಾರದ ನಿಲುವೇನು, ಸಿಬ್ಬಂದಿ ಇಲ್ಲವೇ, ಏನು ಕಾರಣ ಎಂಬುದನ್ನು ದಯಮಾಡಿ ಸಭೆಯ ಮುಂದೆ ಹೇಳಬೇಕು. ಶೇಕಡ ೮೦ರಷ್ಟು ಹಣವನ್ನು ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದೇವೆಂದು ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಇನ್ನೂರು ಕೋಟಿ ರೂಪಾಯಿಗಳಲ್ಲಿ ಸುಮಾರು ನೂರೈವತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಸಿಬ್ಬಂದಿಗಾಗಿಯೇ

ಖರ್ಚು ಮಾಡುತ್ತಿರುವಾಗ, ಸಿಬ್ಬಂದಿಯ ಕೊರತೆ ಅಷ್ಟಾಗಿ ಇಲ್ಲವೆಂದು ನಾನು ಭಾವಿಸುತ್ತೇನೆ. ನಾವು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಪಡೆಯುತಕ್ಕ ಕಾಲದಲ್ಲಿ ಒಂದು ಜಿಲ್ಲೆಗೆ ಒಬ್ಬರೇ ಜಿಲ್ಲಾ ವಿದ್ಯಾಧಿಕಾರಿ ಇರುತ್ತಿದ್ದರು. ಏಕೀಕರಣವಾದ ನಂತರ ನಮ್ಮ ರಾಜ್ಯ ಸ್ವಲ್ಪ ದೊಡ್ಡದಾಗಿರ ಬಹುದು. ಆಗ ಹಳೆಯ ಮೈಸೂರಿನಲ್ಲಿದ್ದ ಒಂಭತ್ತು ಜಿಲ್ಲೆಗಳಿಗೆ ಅಂದರೆ ಅಂದಿನ ಇಡೀ ಹಳೆ ಮೈಸೂರು ರಾಜ್ಯಕ್ಕೆ ಒಬ್ಬರೇ ಸಾರ್ವಜನಿಕ ಶಿಕ್ಷಣ ನಿರ್ದೇಶಕರಿರುತ್ತಿದ್ದರು. ಆಗ ಜಂಟಿ ನಿರ್ದೇಶಕರೇ ಇರುತ್ತಿರಲಿಲ್ಲ. ಸಾರ್ವಜನಿಕ ಶಿಕ್ಷಣ ನಿರ್ದೇಶಕರೊಬ್ಬರೇ ಇಡೀ ರಾಜ್ಯವನ್ನು ನೋಡಿಕೊಳ್ಳುತ್ತಿದ್ದರು. ಆಗ ಇಂಗ್ಲಿಷ್‌ನವರೂ ಸಹ ಸಾರ್ವಜನಿಕ ಶಿಕ್ಷಣ ನಿರ್ದೇಶಕರಾಗಿದ್ದರು ಮತ್ತು ಬೇರೆ ರಾಜ್ಯಗಳಿಂದ ಬಂದಂಥ ಶ್ರೀ ಸಿ.ಆರ್, ರೆಡ್ಡಿಯವರಂಥ ದೊಡ್ಡ ದೊಡ್ಡ ಶಿಕ್ಷಣ ತಜ್ಞರು ಸಾರ್ವಜನಿಕ ಶಿಕ್ಷಣ ನಿರ್ದೇಶಕರಾಗಿದ್ದರು. ಆಗ ಜಿಲ್ಲೆಗೊಬ್ಬರಂತೆ ಜಿಲ್ಲಾ ಶಿಕ್ಷಣಾಧಿಕಾರಿ ಇರುತ್ತಿದ್ದರು. ಒಂದು ತಾಲ್ಲೂಕಿಗೆ ಒಬ್ಬ ಪ್ರೌಢಶಾಲಾ ಉಪಾಧ್ಯಾಯರ ಮಟ್ಟದ ಒಬ್ಬ ನಾನ್ ಗೆಜೆಟೆಡ್ ಅಧಿಕಾರಿಯೊಬ್ಬರಿರುತ್ತಿದ್ದರು ಮತ್ತು ಅವರು ಬಹಳ ದಕ್ಷತೆಯಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಇತ್ತೀಚೆಗೆ ಜನ ಸಂಖ್ಯೆ ಜಾಸ್ತಿಯಾಗಿರುವುದನ್ನು ಬಿಟ್ಟರೆ, ಆಗಿದ್ದ ಹಳ್ಳಿಗಳು ಈಗಲೂ ಇವೆ ಮತ್ತು ಕಾರ್ಯವ್ಯಾಪ್ತಿಯೂ ಕೂಡ ಅಷ್ಟೇ ಇದೆ. ಆದರೆ ಈಗ ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ಗೆಜೆಟೆಡ್ ಸಹಾಯಕ ವಿದ್ಯಾಧಿ ಕಾರಿಯೂ, ಅವರ ಕೈಕೆಳಗೆ ಶಾಲಾ ಇನ್‌ಸ್ಪೆಕ್ಟರ್‌ಗಳೂ ಮತ್ತು ಜಿಲ್ಲಾ ಮಟ್ಟದಲ್ಲಿ ಕ್ಲಾಸ್-೧ ಅಧಿ ಕಾರಿಯಾಗಿ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರೂ ಹಾಗೂ ಅವರ ಸಹಾಯಕರಾಗಿ ಪ್ರತಿ ಸಬ್ಜೆಕ್ಟ್‌ಗೂ ಒಬ್ಬೊಬ್ಬರು ಸಬ್ಜೆಕ್ಟ್ ಇನ್‌ಸ್ಪೆಕ್ಟರುಗಳೂ ಇದ್ದಾರೆ. ಇದರ ಜೊತೆಗೆ ಮಾನ್ಯ ಆರ್ಮುಗಂ ಅವರು ಹೇಳಿದ ಹಾಗೆ ವಿದ್ಯಾ ಇಲಾಖೆಯಲ್ಲಿ ಸುಮಾರು ಹದಿನಾರು ವಿವಿಧ ಡಿಪಾರ್ಟ್‌ಮೆಂಟುಗಳು ಇವೆ. ಐದು ವಿಶ್ವವಿದ್ಯಾನಿಲಯಗಳಿವೆ. ಸುಮಾರು ೮-೧೦ ನಿರ್ದೇಶನಾಲಯಗಳಿವೆ. ಇಷ್ಟೆಲ್ಲಾ ಇದ್ದು ಶಿಕ್ಷಣ ರಂಗದಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಏನು ತೊಂದರೆ ಇದೆ ಎಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಇನ್ನು, ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಬಹುದು.

ಶ್ರೀ ಟಿ. ಚೌಡಯ್ಯ.—ಕೆಲವು ಸದಸ್ಯರು ಹೆಚ್ಚು ಸಮಯವನ್ನು ತೆಗೆದುಕೊಂಡು ಮಾತನಾಡಿ ದ್ದಾರೆ. ನಾನು ಈಗತಾನೇ ಭಾಷಣವನ್ನು ಪ್ರಾರಂಭ ಮಾಡಿದ್ದೇನೆ. ಅಲ್ಲದೆ, ಆಯ್ಕೆ ಮಾಡಿದ ಕೆಲವು ವಿಷಯಗಳ ಮೇಲೆ ಮಾತ್ರ ನಾನು ಮಾತನಾಡಬಯಸುತ್ತೇನೆ. ಆದುದರಿಂದ, ಮಾನ್ಯ ಅಧ್ಯಕ್ಷರು ನನಗೆ ಹೆಚ್ಚು ಕಾಲಾವಕಾಶವನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಇಂದು ನಾವು ಸಭೆಯನ್ನು ಆರು ಗಂಟೆಗೆ ಮುಗಿಸಬೇಕಾಗಿತ್ತು. ಆದರೆ, ಆರು ಗಂಟೆಗೆ ಮುಗಿಸುವ ಪರಿಸ್ಥಿತಿಯಲ್ಲಿಲ್ಲ. ಇನ್ನೂ ಮೂರು ಜನ ಸದಸ್ಯರು ಮಾತನಾಡುವವರಿದ್ದಾರೆ. ಆದುದರಿಂದ ಇನ್ನೈದು ನಿಮಿಷಗಳಲ್ಲಿ ಮಾನ್ಯ ಸದಸ್ಯರು ಭಾಷಣವನ್ನು ಮುಗಿಸಬೇಕೆಂದು ಪ್ರಾರ್ಥಿ ಸುತ್ತೇನೆ.

ಶ್ರೀ ಟಿ. ಚೌಡಯ್ಯ.—ಮೂಲತಃ ತಪ್ಪು ಎಲ್ಲಿದೆ ಎನ್ನುವುದನ್ನು ಹುಡುಕಿ ಸರಿಪಡಿಸುವ ಬಗ್ಗೆ ಈ ವೇದಿಕೆ ಬಿಟ್ಟರೆ ಬೇರೆ ಕಡೆ ಮಾತನಾಡಲಿಕ್ಕೆ ಅವಕಾಶವಿಲ್ಲ. ಈ ಒಂದು ಅವಕಾಶವನ್ನು ನಾವು ಉಪಯೋಗ ಮಾಡಿಕೊಂಡು ಮಾತನಾಡಬೇಕಾಗಿದೆ, ಅನಾವಶ್ಯಕವಾದುದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದರ ಅರಿವು ನನಗಿದೆ, "ಪುನರುಕ್ತಿ ದೋಷಂ"-ಒಂದು ಮಾತನ್ನು ಎರಡು ಸಲ ಹೇಳಿದರೆ ಅದೊಂದು ದೋಷವೆಂದು ಪೂರ್ವಿಕರು ಹೇಳಿದ್ದಾರೆ. I do not wish to repeat what I mentioned in the last Session. ಈ ಸಲ ನಾನು ಬೇರೆ ವಿಷಯ ಗಳನ್ನು ಆಯ್ಕೆ ಮಾಡಿಕೊಂಡು ಮಾತನಾಡಲು ನಿಂತಿದ್ದೇನೆ, ದಯವಿಟ್ಟು ಅದಕ್ಕೆ ತಾವು ಅವಕಾಶ ಮಾಡಿಕೊಡಿ, ಮಾನ್ಯ ಶಿಕ್ಷಣ ಸಚಿವರು ಒದಗಿಸಿರುವ ಇಲಾಖಾ ವರದಿಯಲ್ಲಿ,

"Pre-primary Education:

The programme was started at the beginning of the V plan with a view to enable the children particularly those belonging to SC/ST to cultivate a school going habit from their early age and also improving the enrolment of girls. During

the V Plan period (1974-79) a total of 600 Government pre-primary centres were established. Subsequently, 650 have been added. Most of these pre-primary centres are located in the areas where the children belonging to SC/ST have an easy accessibility. During 1980-81, it was possible to continue only the centres that were started earlier and which had to be provided for under the plan. As a result of this, it was not possible to start any new centres by Government."

ಹಿಂದೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭ ಮಾಡಿದ್ದ ಈ ಯೋಜನೆ ಅತ್ಯಂತ ಪ್ರಶಂಸನೀಯ ವಾಗಿದ್ದು ನಾನಿದನ್ನು ಬಹಳವಾಗಿ ಮೆಚ್ಚಿಕೊಂಡಿದ್ದೆನು. ಆದರೆ, ೧೯೮೦–೮೧ನೇ ಸಾಲಿಗೆ ಹಾಲಿ ಇದ್ದ ಕೇಂದ್ರಗಳನ್ನು ಮುಂದುವರಿಸಲಿಕ್ಕೆ ಸಾಧ್ಯವಾಯಿತೆ ಹೊರತು ಹೊಸದಾಗಿ ಪ್ರಾರಂಭ ಮಾಡುವುದಕ್ಕಾಗ ಲಿಲ್ಲವೆಂದು ಸರ್ಕಾರ ತನ್ನ ಅಸಹಾಯಕತೆಯನ್ನು ಹೇಳಿಕೊಂಡಿದೆ. ಈಗಲಾದರೂ ಈ ಯೋಜನೆಯ ಕೆಳಗೆ ಇನ್ನಷ್ಟು ಕೇಂದ್ರಗಳನ್ನು ಹೊಸದಾಗಿ ಸೇರಿಸಬೇಕೆಂದು ಪ್ರಾಥಮಿಕ ಶಿಕ್ಷಣ ಸಚಿವರನ್ನು ಕೇಳಿ ಕೊಳ್ಳುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು ೩,೪,೯೭೦ ಪ್ರಾಥಮಿಕ ಶಾಲೆಗಳಿವೆ. ಕಿರಿಯ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳೆರಡೂ ಸೇರಿದಂತೆ ಸುಮಾರು ಐವತ್ತು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿ ಗಳಿದ್ದಾರೆ. ಅದರಲ್ಲಿ ಮುಕ್ಕಾಲು ಭಾಗದ ಮಕ್ಕಳು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡು ತ್ತಿದ್ದಾರೆ ನಾನು ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಮಾಡುವವನಾಗಿದ್ದೇನೆ, ಅಲ್ಲಿ ತಾವೂ ಕೂಡ ನೋಡಿರಬಹುದು. ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ನೂರಕ್ಕೆ ಎಪ್ಪತ್ತೈದು ಶಾಲೆಗಳ ಕಟ್ಟಡ ಬಹಳ ಶಿಥಿಲವಾಗಿವೆ. ಬಹಳ ಕಡೆ ಕಟ್ಟಡಗಳೇ ಇಲ್ಲ. ಅಂತಹ ಕಡೆ ದೇವಸ್ಥಾನ ಗಳಲ್ಲಿ ವ್ಯಾಸಂಗ ಮಾಡತಕ್ಕ ಪರಿಸ್ಥಿತಿ ಬಂದಿದೆ. ದೇವಸ್ಥಾನ ಎಂದ ಕೂಡಲೇ ಹರಿಜನ ಮಕ್ಕಳು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರ ಮನಗಾಣಬೇಕು. ಈ ಕಾರಣದಿಂದಲೇ ಅಲ್ಲಿ ಶಾಲೆಗಳಿಗೆ ಮಕ್ಕಳು ಹೋಗುವುದಕ್ಕಾಗುತ್ತಿಲ್ಲ. The drop-cuts have increased at the primary level of education. ಇದನ್ನು ತಡೆಗಟ್ಟುವುದಕ್ಕೆ ಮತ್ತು ಮಕ್ಕಳ ಶಿಕ್ಷಣ ಮುಂದುವರಿಸುವುದಕ್ಕಾಗಿ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣದ ಬಗ್ಗೆ ಸಮಗ್ರ ಸರ್ವೆ ಮಾಡ ಲಾಗಿದೆಯೆ? ಕರ್ನಾಟಕ ರಾಜ್ಯದಲ್ಲಿ ಎಷ್ಟು ಹಳ್ಳಿಗಳಿವೆ, ಎಷ್ಟು ಶಾಲೆಗಳಿವೆ, ಎಷ್ಟು ಹಳ್ಳಿಗಳಲ್ಲಿ ಪಾಠಶಾಲೆಗಳಿವೆ, ಎಷ್ಟು ಹಳ್ಳಿಗಳಲ್ಲಿ ಇಲ್ಲ, ಎಷ್ಟು ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳ ದುರಸ್ತಿ ಆಗಬೇಕು, ಎಷ್ಟು ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳ ಭಾರಿ ಪ್ರಮಾಣದ ದುರಸ್ತು ಆಗಬೇಕು ಅಥವಾ ಇಡೀ ಶಾಲೆ ಯನ್ನೇ ಪುನರ್ ನಿರ್ಮಾಣ ಮಾಡಬೇಕು ಎನ್ನುವ ಬಗ್ಗೆ ಸರ್ವೆ ಮಾಡಲಾಗಿದೆಯೋ ಎಂಬುದನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಸಂತೋಷದ ಸಂಗತಿ ಎಂದರೆ, ವರದಿಯಲ್ಲಿ ತಿಳಿಸಿರುವಂತೆ ೧೯೮೦–೮೧ನೇ ಸಾಲಿಗೆ ೨೧೦ ಲಕ್ಷ ರೂಪಾಯಿಗಳನ್ನು ಕೊಠಡಿ ನಿರ್ಮಾಣಕ್ಕೆ ನೀಡಲಾಗಿದೆ. ಇದರಂತೆ ಪ್ರತಿ ಜಿಲ್ಲೆಯಲ್ಲಿ ಸುಮಾರು ಎಂಬತ್ತು ಕೊಠಡಿಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಿದೆ. ಅಂದರೆ ಒಂದು ತಾಲ್ಲೂಕಿಗೆ ೮–೧೦ ಕೊಠಡಿಗಳು ಬರುತ್ತವೆ. ಸಮಸ್ಯೆಯ ಗಾತ್ರ ಬಹಳ ದೊಡ್ಡದಿದೆ. ಆದರೆ, ಪರಿಹಾರದ ಪ್ರಮಾಣ ಮಾತ್ರ ಬಹಳ ಚಿಕ್ಕದು. ಆದುದರಿಂದ. ಇದರ ಬಗ್ಗೆ ಸಮಗ್ರವಾದ ಯೋಜನೆ ತಯಾರಿಸಿ, ಭಾರತ ಸರ್ಕಾರದಿಂದಲಾದರೂ ನೆರವನ್ನು ಪಡೆದು, ಶಾಲಾ ಕಟ್ಟಡ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸುವುದಕ್ಕೆ ಪ್ರಯತ್ನ ಮಾಡಲಾಗಿದೆಯೋ ಎನ್ನುವ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ಹೇಳುತ್ತೇನೆ.

ಇನ್ನು ಮಾಧ್ಯಮಿಕ ಶಿಕ್ಷಣ. ಇಲ್ಲಿ ಬೇಕಾದಷ್ಟು ಇನ್‌ಸೆಂಟೀವ್‌ಗಳನ್ನು ಕೊಟ್ಟಿದ್ದಾರೆ. attendance scholarship ಕೊಟ್ಟಿದ್ದಾರೆ. ಪುಕ್ಕಟೆಯಾಗಿ ಪಠ್ಯಪುಸ್ತಕಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಸೌಲಭ್ಯಗಳನ್ನು ಇನ್ನೂ ಹೆಚ್ಚಿನ ಸಂಖ್ಯೆ ಯಲ್ಲಿ ವಿಸ್ತರಿಸುವುದರಿಂದ ಬಡಮಕ್ಕಳು ವ್ಯಾಸಂಗ ಮುಂದುವರಿಸುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ, ಈ ಯೋಜನೆಯನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

೫.೩೦ ಪಿ.ಎಂ.

ಅಧ್ಯಕ್ಷರು.—ಈಗಾಗಲೇ ೧೫ ನಿಮಿಷ ಆಗಿದೆ.

ಶ್ರೀ ಟಿ. ಚೌಡಯ್ಯ.—ಇನ್ನು ೫ ನಿಮಿಷದಲ್ಲಿ ಮುಗಿಸುತ್ತೇನೆ. ಮಾಧ್ಯಮಿಕ ಶಿಕ್ಷಣ ಬಹಳ ಮುಖ್ಯವಾದುದು. ನಾನು ಕೆಲವಾರು ವರ್ಷಗಳ ಕಾಲ ಶಿಕ್ಷಣ ರಂಗದಲ್ಲಿ ಅನುಭವ ಪಡೆದಿದ್ದೇನೆ. ೧೯೫೫ರಲ್ಲಿ ಮಾಧ್ಯಮಿಕ ಶಿಕ್ಷಣದ ಬಗ್ಗೆ, ಭಾರತ ಸರ್ಕಾರದ ವಿದ್ಯಾ ಇಲಾಖೆಯವರು ಒಂದು ಪುಸ್ತಕ ವನ್ನು ಹೊರಡಿಸಿದ್ದಾರೆ, ಅದರಲ್ಲಿರತಕ್ಕ ಮುಖ್ಯವಾದ ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡು ತ್ತೇನೆ. Secondary Education is admittedly the weakest joint or the weakest link in our educational system. ಎನ್ನುವ ಮಾತನ್ನು ಕೊಠಾರಿ ಕಮೀಷನ್‌ನವರೂ, ಎಲ್ಲ ಶಿಕ್ಷಣ ತಜ್ಞರೂ ಕೂಡ ಹೇಳಿದ್ದಾರೆ. ಮಾಧ್ಯಮಿಕ ವಿದ್ಯಾಭ್ಯಾಸದಲ್ಲಿ ನಮ್ಮ ಕಾಲದಲ್ಲಿ ಯಾವ ಪಠ್ಯಪುಸ್ತಕಗಳ ವ್ಯವಸ್ಥೆಯಿತ್ತೋ, ಅದನ್ನೇ ಸ್ವಲ್ಪ ಮಾರ್ಪಾಡು ಮಾಡಿ ಮುಂದು ವರಿಸಿದ್ದಾರೆ. ಆದರೆ, ಮುಂದಿನ ಪೀಳಿಗೆಗೆ. ಜೀವನಕ್ಕೆ ಆಧಾರವಾಗುವಂತ ಶಿಕ್ಷಣ ದೊರೆಯುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಬೇಸಿಕ್ ಇನ್‌ಸ್ಟಿಟ್ಯೂಷನ್‌ಗಳ ಬಗ್ಗೆ ಅನೇಕ ವರದಿಗಳು ಬಂದಿವೆ. ಅವುಗಳನ್ನು ಅಳವಡಿಸಿಕೊಂಡು ಕೃಷಿಗೆ ಸಂಬಂಧಪಟ್ಟಂತೆ, ರೇಷ್ಮೆ ಕೈಗಾರಿಕೆಗೆ ಸಂಬಂಧ ಪಟ್ಟಂತೆ, ಇನ್ನಿತರ ಕಸುಬುಗಳಿಗೆ ಸಂಬಂಧಪಟ್ಟಂತೆ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಜಾರಿಗೆ ತರಬೇಕೆಂದು ಹೇಳುತ್ತೇನೆ. ವಿದ್ಯಾರ್ಥಿಯೂ ಎಸ್.ಎಸ್.ಎಲ್.ಸಿ. ಮುಗಿದ ಕೂಡಲೇ. ಬ್ಯಾಂಕುಗಳಿಂದ, ಹಣಕಾಸಿನ ಸಂಸ್ಥೆಗಳಿಂದ ಆರ್ಥಿಕ ನೆರವನ್ನು ಪಡೆದು ತಮ್ಮ ಕಾಲಮೇಲೆ ತಾವು ನಿಲ್ಲು ವಂತ ವಿದ್ಯೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಮಾನ್ಯ ಶಂಕರರಾಯರು ಕಳೆದ ವರ್ಷ ೧೧೦ ಹೈಸ್ಕೂಲುಗಳನ್ನು ೧೫ ಜೂನಿಯರ್ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ. ಇದರಲ್ಲಿ ನಿಮ್ಮ ವರ್ಗದವರಿಗೂ ಕೆಲವು ಸ್ಕೂಲು ಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಸರ್ಕಾರದ ಅನುದಾನದ ಪ್ರಕಾರ ೫೦ ಪರ್ಸೆಂಟ್ ಅಡ್ಮಿಷನ್ ಇರಬೇಕಾಗಿದೆ. ಹಿಂದುಳಿದವರಿಗೆ, ಹರಿಜನ ಗಿರಿಜನರಿಗೆ. ಮತ್ತು ಅಲ್ಪ ಸಂಖ್ಯಾತರಿಗೆ ಕಡ್ಡಾಯವಾಗಿ ಅನುದಾನದ ಪ್ರಕಾರ ಅಡ್ಮಿಷನ್ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ. ೭ನೇ ತರಗತಿಯ ಪಬ್ಲಿಕ್ ಪರೀಕ್ಷೆ ತೆಗೆದಿರುವುದರಿಂದ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಪ್ರೌಢ ಶಾಲೆಗಳಿಗೆ ಬರುತ್ತಿದ್ದಾರೆ. ಎಲ್ಲರೂ ಪಟ್ಟಣಗಳಲ್ಲಿ ಬಂದು ವಿದ್ಯಾಭ್ಯಾಸ ಮಾಡುವುದಕ್ಕೆ ಕಷ್ಟ ವಿದೆ, ಅದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಿಮ್ಮ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಖಾಸಗಿ ಪ್ರೌಢ ಶಾಲೆಗಳನ್ನು ತೆರೆಯುವುದಕ್ಕೆ. ಮತ್ತು ರೆಸಿಡೆನ್ಸಿಯಲ್ ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಗ್ರಾಂಟ್‌ಇನ್‌ಎಯಿಡ್ ಪ್ರಕಾರ ಅವಕಾಶ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ನನಗೆ ಸಮಯ ಸಾಕಷ್ಟು ಇಲ್ಲದೇ ಇರುವುದರಿಂದ. ಮಾನ್ಯ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಪು ಸಂಜೀವಶೆಟ್ಟಿ (ಕುಂದಾಪುರ).—ಮಾನ್ಯ ಸಭಾಧ್ಯಕ್ಷರೇ, ೧೯೮೧ ೮೨ನೇ ಸಾಲಿನ ವಿದ್ಯಾ ಇಲಾಖೆಯ ಮತ್ತು ಯುವಜನ ಖಾತೆಯ ಬೇಡಿಕೆಯನ್ನು ಸ್ವಾಗತಿಸುತ್ತಾ, ಕೆಲವೊಂದು ಸಲಹೆ ಗಳನ್ನು ಮಾತ್ರ ಕೊಡುತ್ತೇನೆ. ನಿನ್ನೆ ಮತ್ತು ಇವತ್ತು ಈ ಬೇಡಿಕೆ ಮೇಲೆ ಮಾತನಾಡಿದಂತ ಹಲವು ಮಿತ್ರರು ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೂ ಪ್ರಾಥಮಿಕ ವಿದ್ಯಾಭ್ಯಾಸದ ಗುಣಮಟ್ಟ ತಮಗೆಲ್ಲಾ ಗೊತ್ತಿದ್ದಂತೆ ಕೆಳಕ್ಕೆ ಬರುತ್ತಿದೆ. ಇವರಲ್ಲಿ ನಿಜಸ್ಥಿತಿ ಉಂಟು. ಇದಕ್ಕೆ ಮುಖ್ಯವಾದ ಕಾರಣ, ಇವತ್ತು ನಮ್ಮ ಶಾಲೆಗಳಿಗೆ ಬೇಕಾದ ಕಟ್ಟಡಗಳ ವ್ಯವಸ್ಥೆ ಇಲ್ಲ. ಅಧ್ಯಾಪಕರುಗಳ ಸಂಖ್ಯೆ ಕೂಡ ಇಲ್ಲ. ಜನಸಂಖ್ಯೆ ಹೆಚ್ಚಿದಂತೆ, ಮಕ್ಕಳ ಸಂಖ್ಯೆ ಜಾಸ್ತಿಯಾಗಿ, ವಿದ್ಯಾರ್ಥಿಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ಇವತ್ತು ಸ್ಕೂಲು ಇನ್ಸ್‌ಪೆಕ್ಟರುಗಳ ಸಂಖ್ಯೆ ಕೂಡ ಜಾಸ್ತಿಯಿಲ್ಲ. ಸರ್ಕಾರಿ ಸ್ಕೂಲುಗಳಿಗೆ ಸ್ಕೂಲು ಇನ್ಸ್‌ಪೆಕ್ಟರುಗಳು ಹೋಗುವುದೇ ಇಲ್ಲ. ಇದರಿಂದಾಗಿ ಸರ್ಕಾರಿ ಶಾಲೆಗಳಲ್ಲಿ ಒಳ್ಳೆಯ ವಿದ್ಯಾಭ್ಯಾಸ ಸಿಗುತ್ತಿಲ್ಲ. ಖಾಸಗೀ ಸ್ಕೂಲುಗಳಿಗೆ ಇನ್ಸ್‌ಪೆಕ್ಟರುಗಳು ಹೋಗುತ್ತಾರೆ. ಸರ್ಕಾರದವರು ಶಾಲಾ ಇನ್ಸ್‌ಪೆಕ್ಟರ್ ಸಿಬ್ಬಂದಿಯನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸರ್ಕಾರೀ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರದೇ ಇರುವುದಕ್ಕೆ ಮತ್ತೊಂದು ದೋಷ ಏನೆಂದರೆ ಕೆಲವು ಅಧ್ಯಾಪಕರುಗಳು ೧೦–೧೫ ವರ್ಷಗಳಿಂದ ಒಂದೇ ಜಾಗದಲ್ಲಿದ್ದು

ಕೊಂಡು, ವ್ಯವಸಾಯ ಜಮೀನು ಮತ್ತು ಮರಗಳನ್ನು ಕಡಿದು, ಸ್ಮಗಲಿಂಗ್ ಕೂಡ ಮಾಡುತ್ತಿದ್ದಾರೆ. ಇಂಥವರನ್ನು ಇದುವರೆವಿಗೂ ವರ್ಗ ಮಾಡಿರುವುದಿಲ್ಲ. ಏತಕ್ಕೋಸ್ಕರ ಇಲಾಖೆಯವರು ಇಂಥವರನ್ನು ಮಾಡುವುದಿಲ್ಲ ಎನ್ನುವುದೇ ನನಗೆ ಅರ್ಥವಾಗುವುದಿಲ್ಲ. ಅವರ ಮೇಲಿರತಕ್ಕ ಅಲಿಗೇಷನ್ ಪ್ರೂಫ್ ಆಗಬೇಕೆಂದು ಹೇಳುತ್ತಾರೆ. ಅಧ್ಯಾಪಕರ ಹಿಡಿತವೇ ಇಲ್ಲದಂತಾಗಿದೆ. ಇದರ ಕಡೆ ಸರ್ಕಾರ ನೋಡ ಬೇಕೆಂದು ಹೇಳುತ್ತೇನೆ. ಒಂದೇ ಶಾಲೆಯಲ್ಲಿರತಕ್ಕವರನ್ನು ಬದಲಾಯಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಒಂದು ತರಗತಿಯಲ್ಲಿ ೪೦ ಮಕ್ಕಳಿಗೆ ಬದಲಾಗಿ ೬೦ ಮಕ್ಕಳನ್ನು ಇರುವಂತೆ ಮಾಡಿದರೆ, ಆ ಮಕ್ಕಳ ಭವಿಷ್ಯವೇನು? ಒಬ್ಬ ಅಧ್ಯಾಪಕ ೬೦ ಮಕ್ಕಳನ್ನು ಹೇಗೆ ನೋಡಿಕೊಳ್ಳುತ್ತಾನೆಂಬುದನ್ನು ಸರ್ಕಾರದವರು ನೋಡಬೇಕು. ಪ್ರೌಢ ಶಾಲೆಗಳಲ್ಲಿ ಅಧ್ಯಾಪಕರ ಅಭಾವ ಇದೆ. ನನ್ನ ಕ್ಷೇತ್ರದ ಬಜ್ಜಗಟ್ಟಿ ಪ್ರೌಢಶಾಲೆಯು ೧೯೬೨ರಲ್ಲಿ ಪ್ರಾರಂಭವಾಯಿತು, ಅಲ್ಲಿ ೨೦೦-೨೫೦ ಹುಡುಗರಿದ್ದಾರೆ. ಮೂರು ಜನ ಮಾತ್ರ ಅಧ್ಯಾಪಕರುಗಳು ಇದ್ದಾರೆ. ಈ ಸಾರಿಯಾದರೂ ಒಂದೆರಡು ಅಧ್ಯಾಪಕರ ಹುದ್ದೆಗಳನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ಅಧ್ಯಾಪಕರು ನಿವೃತ್ತಿಯಾದ ಕೂಡಲೇ, ನಿವೃತ್ತಿವೇತನವನ್ನು ಕೊಡುವಂತ ವ್ಯವಸ್ಥೆ ಮಾಡಬೇಕು. ಕಾರಣ, ದಾಖಲೆಗಳನ್ನು ಸರಿಯಾಗಿ ಇಟ್ಟಿರದೇ ವರ್ಷಗಟ್ಟಲೆಯಾದರೂ ನಿವೃತ್ತಿವೇತನ ಸಿಗದೆ ಬಹಳ ತೊಂದರೆಗೆ ಅಧ್ಯಾಪಕರುಗಳು ಗುರಿಯಾಗಿದ್ದಾರೆ ನನಗೆ ತಿಳಿದಂತ ಒಂದು ಕೇಸ್‌ನಲ್ಲಿ ಒಳ್ಳೆಯ ಕೆಲಸ ಮಾಡಿದಂತ ಒಬ್ಬ ಅಧ್ಯಾಪಕರು. ಕಳೆದ ೧೩ ವರ್ಷಗಳಿಂದ ಪೇಪರು ಬೆನ್ನ ಹಿಂದೆ ತಿರುಗಿದರೂ ಕೂಡ ನಿವೃತ್ತಿ ವೇತನ ತೀರ್ಮಾನವಾಗಿಲ್ಲ, ಇವತ್ತು ಆಕೆ ವಿಧವೆ ಹೆಂಗಸು, ಊಟಕ್ಕೆ ಕೂಡ ಗತಿಯಿಲ್ಲ ಇಂಥ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಅನುಕಂಪ ತೋರಿಸಿ, ನಿವೃತ್ತಿ ಹೊಂದಿದ ಅಧ್ಯಾಪಕರುಗಳಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬಡ ವಿದ್ಯಾರ್ಥಿಗಳಿಗೆ, ಹಿಂದುಳಿದ ವಿದ್ಯಾರ್ಥಿಗಳಿಗೆ ಫ್ರೀಷಿಪ್ ಕೊಡುತ್ತಿದ್ದಾರೆ. ದುರ್ದೈವದಿಂದ ನಮ್ಮ ಕುಂದಾಪುರ ಕಾಲೇಜಿನಲ್ಲಿ ಫ್ರೀಷಿಪ್‌ಗೆ ಸಂಬಂಧಪಟ್ಟಂತೆ ಪ್ರತಿ ವರ್ಷವೂ ತೊಂದರೆ ಕೊಡುತ್ತಿದ್ದಾರೆ. ಪರೀಕ್ಷೆ ಕಾಲದಲ್ಲಿ ಅಡ್ಮಿಷನ್ ಟಿಕೇಟ್ ಕೊಡದೇ ಹುಡುಗರಿಗೆ ತೊಂದರೆ ಮಾಡುತ್ತಾರೆ. ಈ ವಿಚಾರವನ್ನು ಡೈರೆಕ್ಟರ್‌ರವರಿಗೂ ಕೂಡ ತಿಳಿಸಿದ್ದೇನೆ. ಈ ವಿಚಾರದಲ್ಲಿ ಸರ್ಕಾರ ದವರು ಹುಡುಗರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಬೇಕೆಂದು ಹೇಳುತ್ತೇನೆ. ೧೯೮೦ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವನ್ನು ಸರ್ಕಾರದವರು ಕೊಟ್ಟಿದ್ದಾರೆ, ನಮಗೆ ಬಹಳ ಸಂತೋಷ ವಾಯಿತು. ಈ ವಿಶ್ವವಿದ್ಯಾನಿಲಯದಡಿಯಲ್ಲಿ ೪೩ ಕಾಲೇಜುಗಳು, ೨೪ ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಹೊಸ ವಿಶ್ವವಿದ್ಯಾನಿಲಯಕ್ಕೆ ಸೇರಿದಂತೆ ಕಟ್ಟಡಗಳು, ಸಿಬ್ಬಂದಿವರ್ಗಕ್ಕೆ ಬೇಕಾದ ಹಲವಾರು ಸೌಕರ್ಯಗಳು ಬೇಕಾಗಿವೆ. ಈಗಾಗಲೇ ೨೧೯ ಎಕರೆ ಜಮೀನನ್ನು ತೆಗೆದುಕೊಳ್ಳಲಾಗಿದೆ. ವಿಶ್ವ ವಿದ್ಯಾನಿಲಯಕ್ಕೆ ಸೇರಿದಂತ ಒಂದು ಮಾಸ್ಟರ್‌ಪ್ಲಾನ್ ಕೂಡ ತಯಾರಾಗಿದೆ. ಸರ್ಕಾರದವರು ಈ ದಿಶೆಯಲ್ಲಿ ಹೆಚ್ಚಿನ ಹಣ ಸಹಾಯ ಮಾಡಿ ಮಂಗಳೂರು ವಿಶ್ವವಿದ್ಯಾನಿಲಯ ಮಾದರಿ ವಿಶ್ವವಿದ್ಯಾ ನಿಲಯವಾಗುವಂತೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರೆ, ಇನ್ನು ಹೊಸ ಆಡಳಿತದ ಬಗ್ಗೆ ಅದಕ್ಕೆ ಸೆನೆಟ್, ಸಿಂಡಿಕೇಟ್ ಯಾವುದೂ ಇನ್ನೂ ನೇಮಕ ಆಗಿಲ್ಲ. ಅಲ್ಲದೆ ಹಲವಾರು ಪೋಸ್ಟ್‌ಗಳನ್ನು ಕೊಡುವಂಥ ಕೆಲಸ ಇನ್ನೂ ಆಗಿಲ್ಲ. ಈ ದಿಸೆಯಲ್ಲಿ ಮಾನ್ಯ ವಿದ್ಯಾ ಮಂತ್ರಿಗಳು ಹೆಚ್ಚು ಗಮನ ಹರಿಸಬೇಕೆಂದು ಕೇಳಿಕೊಳುತ್ತೇನೆ. ಇನ್ನು ಯುವಜನ ಖಾತೆಯ ಬಗ್ಗೆ ಮಾತನಾಡಲಿಕ್ಕೆ ಹೆಚ್ಚು ಅವಕಾಶ ಇಲ್ಲ. ಯುವಜನ ಮಂತ್ರಿಗಳು ನಮ್ಮವರೇ ಆಗಿದ್ದು ಬಹಳ ತರುಣರಾಗಿರುವುದರಿಂದ ಅವರಿಗೆ ಯುವಕರ ಬಗ್ಗೆ ಹೆಚ್ಚು ಆಸಕ್ತಿ ಪ್ರೀತಿಯನ್ನು ಹೊಂದಿ, ಉತ್ತಮ ಕೆಲಸ ಮಾಡುವವರಾಗಿದ್ದಾರೆ. ಅದೇ ರೀತಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನಮ್ಮಲ್ಲಿ ೧೩ ಯೂತ್ ಕ್ಲಬ್‌ಗಳು ಉಂಟು. ಅದರಲ್ಲಿ ಅವರ ಕಾರ್ಯಕ್ರಮ ಗಳನ್ನು ಮುಂದುವರಿಸಲಿಕ್ಕೆ ಬೇಕಾದಷ್ಟು ಅವಕಾಶ ಉಂಟು. ಅದರೂ ಕೂಡ ಕೆಲವು ಕಡೆಗಳಲ್ಲಿ ಕಟ್ಟಡದ ಅಭಾವ ಉಂಟು. ನಮ್ಮ ಕಡೆ ಮಾನ್ಯ ಮಂತ್ರಿಗಳು ಪ್ರವಾಸ ಬಂದಾಗ ಅವರ ಕಾರ್ಯ ಕ್ರಮಗಳ ಬಗ್ಗೆ ತಿಳಿಸಿದ್ದಾರೆ. ಯುವಕ ಯುವತಿಯರು ತಮ್ಮ ಬಿಡುವಿನ ವೇಳೆಯಲ್ಲಿ ಒಳ್ಳೆಯ ರೀತಿ ಯಲ್ಲಿ ಕೆಲಸ ಮಾಡಲಿಕ್ಕೆ ಇನ್ನೂ ಹೆಚ್ಚಿನ ಉತ್ತೇಜನ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಈಗ

ನಮ್ಮ ಡಿಸ್ಟ್ರಿಕ್ಟ್ ಮಂಗಳೂರಿನಲ್ಲಿ ಒಂದು ಸ್ಟೇಡಿಯಂ ಆಗಿದೆ. ಅದೇ ರೀತಿ ನಮ್ಮ ಕುಂದಾಪುರಕ್ಕೂ ಒಂದು ಸ್ಟೇಡಿಯಂ ಕಟ್ಟಿಸಿಕೊಡಬೇಕೆಂದು ಮಾನ್ಯ ಯುವಜನ ಖಾತೆ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈಗಾಗಲೇ ಅನೇಕ ಸದಸ್ಯರು ಮಾನ್ಯ ಯುವಜನ ಖಾತೆಯ ಬಗ್ಗೆ ಮಾತನಾಡಿರುವುದರಿಂದ, ಹಾಗೂ ನನಗೆ ಸಮಯ ಇಲ್ಲದೇ ಇರುವುದರಿಂದ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರುಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಹಾಸನ ಫಸ್ಟ್ ಎಯಡ್ ಕಾಲೇಜಿನಲ್ಲಿ ಸುಮಾರು ೨,೮೦೦ ಜನ ವಿದ್ಯಾರ್ಥಿಗಳಿದ್ದು ಅಲ್ಲಿ ಒಬ್ಬರೇ ಪ್ರಿನ್ಸಿಪಾಲರು ಇದ್ದು ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಮ್ಯಾನೇಜ್ ಮಾಡುವುದು ಬಹಳ ಕಷ್ಟವಾಗಿದೆ ಅಲ್ಲದೆ ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿರುವುದರಿಂದ, ಅಧ್ಯಾಪಕರ ವರ್ಗಕ್ಕೂ ವಿದ್ಯಾರ್ಥಿ ವೃಂದಕ್ಕೂ ಒಳ್ಳೆಯ ಬಾಂಧವ್ಯವಿಲ್ಲ, ಅನ್ ಕಂಟ್ರೋಲ್ ಇದೆ, ಬಹಳ ಹೀನಸ್ಥಿತಿಯಲ್ಲಿದೆ, ಮಧ್ಯೆ ಮಧ್ಯೆ ಗಲಭೆಗಳು ನಡೆಯುತ್ತಿದೆ ಎನ್ನುವ ವಿಚಾರವನ್ನು ನಾನು ಕಳೆದ ಸಾರಿ ನಡೆದ ಶಾಸನ ಸಭೆಯಲ್ಲಿ ಕ್ಲಾರಿಫಿಕೇಷನ್ ಮುಖಾಂತರ ನಾನು ವಿದ್ಯಾ ಸಚಿವರು ಉತ್ತರ ಕೊಡುವಾಗ ಪ್ರಸ್ತಾಪ ಮಾಡಿದ್ದಕ್ಕೆ ಅವರು ಏನು ಹೇಳಿದ್ದರು ಎಂದರೆ ಫಸ್ಟ್ ಎಯಡ್ ಕಾಲೇಜನ್ನು ಎರಡು ವಿಭಾಗ ಮಾಡಿ ಸೈನ್ಸ್ ಮತ್ತು ಆರ್ಟ್ಸ್ ವಿಭಾಗಗಳನ್ನು ಬೇರೆ ಬೇರೆ ಮಾಡಿ ಈ ವರ್ಷದಿಂದಲೇ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಕಳೆದ ವರ್ಷ ಇದೇ ದಿನದಲ್ಲಿ ಮಾನ್ಯ ವಿದ್ಯಾ ಮಂತ್ರಿಗಳು ಉತ್ತರ ಕೊಟ್ಟಿದ್ದರು. ಈ ಬಗ್ಗೆ ನಾನು ಮೊನ್ನೆ ವಿಚಾರಿಸಿ ನೋಡಿದರೆ ಆ ಕಾಲೇಜಿನಲ್ಲಿ ಇನ್ನೂ ಒಬ್ಬರೇ ಪ್ರಿನ್ಸಿಪಾಲರು ಇದ್ದಾರೆ. ಸುಮಾರು ೨,೮೦೦ ವಿದ್ಯಾರ್ಥಿಗಳು ಇದ್ದಾರೆ. ಅದನ್ನು ದನದ ದೊಡ್ಡಿಗಿಂತಲೂ ಕಡೆ ಎಂದು ಹೇಳಬೇಕಾಗಿದೆ. ಅಧ್ಯಕ್ಷರೆ, ಹಿಂದೆ ನಾವು, ನೀವು ಓದುವಾಗ ಅಧ್ಯಾಪಕ ವರ್ಗದವರನ್ನು ಕಂಡರೆ ವಿದ್ಯಾರ್ಥಿಗಳು ಹೆದರುತ್ತಿದ್ದರು. ಈಗ ಹಾಸನ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಕಂಡರೆ ಅಧ್ಯಾಪಕ ವರ್ಗದವರು ಹೆದರಬೇಕಾಗಿದೆ. ಅಲ್ಲಿ ನಡೆಯುತ್ತಕ್ಕ ಅನ್‌ಕಂಟ್ರೋಲ್ ಪರಿಸ್ಥಿತಿ ಹೇಳಬೇಕು ಎಂದರೆ ನಾಚಿಕೆಯಾಗುತ್ತದೆ. ಅಲ್ಲಿಯ ವಿದ್ಯಾರ್ಥಿಗಳ ತಂದೆತಾಯಿಯರು ನಾವು ಯಾವ ಪುರುಷಾರ್ಥಕ್ಕಾಗಿ ಈ ದನದ ದೊಡ್ಡಿಗೆ ನಮ್ಮ ಮಕ್ಕಳನ್ನು ಕಳುಹಿಸಬೇಕು ಎಂದು ಕೇಳುತ್ತಿದ್ದಾರೆ. ಬಿಲ್ಡಿಂಗ್ ಇದೆ, ವ್ಯವಸ್ಥೆ ಇದೆ, ವಿದ್ಯಾರ್ಥಿಗಳು ಇದ್ದಾರೆ ಎಲ್ಲಾ ವ್ಯವಸ್ಥೆ ಇದ್ದರೂ ಕಳೆದ ಎರಡೂ ಮೂರು ವರ್ಷಗಳಿಂದ ಆ ಕಾಲೇಜನ್ನು ಬೈಫರ್‌ಕೇಟ್ ಮಾಡದೇ ಏತಕ್ಕೆ ಇಟ್ಟಿದ್ದಾರೋ ಗೊತ್ತಿಲ್ಲ. ಒಂದೇ ಕಡೆಯಲ್ಲಿ ೨,೮೦೦ ವಿದ್ಯಾರ್ಥಿಗಳನ್ನು ಕೂರಿಸಿದರೆ ಕಂಟ್ರೋಲ್ ಮಾಡುವುದು ಕಷ್ಟ ಎನ್ನುವುದು ಮಾನ್ಯ ವಿದ್ಯಾ ಸಚಿವರಿಗೂ ಗೊತ್ತಿದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಆರ್ಡರ್ ಮಾಡಿ ಕಳುಹಿಸಿದ್ದಾರೋ ಏನೋ ಗೊತ್ತಿಲ್ಲ. ಇವರು ಆರ್ಡರ್ ಕಳುಹಿಸಿದ್ದು, ಇವರ ಅಧಿಕಾರಿಗಳು ಅದನ್ನು ಕಾರ್ಯಗತ ಮಾಡದೇ ಇದ್ದರೆ, ಅಧಿಕಾರಿಗಳು ಇನ್ನೂ ಏನು ಮಾಡುತ್ತಿದ್ದಾರೆ ಎಂದು ನಾನು ಕೇಳಬೇಕಾಗುತ್ತದೆ.

ಶ್ರೀ ಜಿ. ಬಿ. ಶಂಕರರಾವ್.—ಆರ್ಡರ್ಸ್ ಆಗಿದೆ, ಪ್ರಿನ್ಸಿಪಾಲರ ನೇಮಕ ಆಗಬೇಕಾಗಿದೆ ಅಷ್ಟೆ. Our difficulty is that there are vacant posts for which we have to recruit people as Principals. We have written to the Public Service Commission. The Public Service Commission has not so far sent selection list. That is why the matter has been delayed. Otherwise we have already passed orders to bifurcate the College into Arts and Science Colleges.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ೨,೮೦೦ ವಿದ್ಯಾರ್ಥಿಗಳ ಭವಿಷ್ಯ ಮುಖ್ಯ. ಒಬ್ಬ ಪ್ರಿನ್ಸಿಪಾಲರನ್ನು ಸೆಲೆಕ್ಟ್ ಮಾಡುವುದು ಸರ್ಕಾರಕ್ಕೆ ಕಷ್ಟವಾದರೆ. ಮಕ್ಕಳ ವಿದ್ಯಾಭ್ಯಾಸದ ಗತಿ ಏನು ? ಇದು ಏನು ಎನ್ನುವುದೇ ನಮಗೆ ಅರ್ಥವಾಗುತ್ತಿಲ್ಲ. ಪ್ರಿನ್ಸಿಪಾಲರ ನೇಮಕ ಮಾಡಲಿಕ್ಕೆ ಕೊರತೆ ಏನಿದೆ ? ಬೇಕಾದಷ್ಟು ಜನ ಪ್ರೊಫೆಸರ್ಸ್ ಇದ್ದಾರೆ, ಅವರಲ್ಲಿ ನೀವು ಯಾರನ್ನಾದರೂ ಸೆಲೆಕ್ಟ್ ಮಾಡಿ ಹಾಕಬಹುದಾಗಿತ್ತು. ಅದು ಸಾಧ್ಯವಾಗದೇ ಹೋಗಿದ್ದರೆ, ಸೆಲೆಕ್ಟ್ ಮಾಡುವವರೆಗೂ ಟೆಂಪರರಿಯಾಗಿ ಆದರೂ ಯಾರನ್ನಾದರೂ ಹಾಕಬಹುದಾಗಿತ್ತು. ಒಬ್ಬ ಪ್ರಿನ್ಸಿಪಾಲರನ್ನು ನೇಮಕ ಮಾಡಲಿಕ್ಕೆ

ಏನಾದರೂ ಅಡಚಣೆ ಇದೆಯೇ ? ಇವೊತ್ತು ೨,೮೮೦ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಕುಂಠಿತವಾಗುವ ರೀತಿಯಲ್ಲಿ ನಡೆದುಕೊಳ್ಳುವುದಾದರೆ, ಯಾವ ಪುರುಷಾರ್ಥಕ್ಕೋಸ್ಕರ ಈ ವಿದ್ಯಾ ಇಲಾಖೆ ಇರಬೇಕು ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಬೇಕಾಗುತ್ತದೆ. ದಯಮಾಡಿ ಇದಕ್ಕೆ ಅವಕಾಶ ಕೊಡಬೇಡಿ. ಅಲ್ಲಿಗೆ ಬಂದಿರತಕ್ಕ ವಿದ್ಯಾರ್ಥಿಗಳಲ್ಲಿ ಬಹುತೇಕ ಮಂದಿ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ರೈತರ ಮಕ್ಕಳು. ಶ್ರೀಮಂತ ವರ್ಗಕ್ಕೆ ಸೇರಿದವರು ಹೆಚ್ಚು ಹಣ ಕೊಟ್ಟು ಕಾನ್‌ವೆಂಟ್‌ಗೆ ಸೇರಿಸುವುದರಿಂದ, ಆ ಮಕ್ಕಳು ಹೆಚ್ಚು ಅಂಕಗಳನ್ನು ಪಡೆಯುವುದರಿಂದ, ಅವರಿಗೆ ಬೇರೆ ಬೇರೆ ಕಡೆಗಳಲ್ಲಿ ಕೆಲಸಗಳು ಸಿಕ್ಕುತ್ತವೆ. ಅಲ್ಲದೆ, ಅವರು ಟೆಕ್ನಿಕಲ್ ಕೋರ್ಸ್‌ಗಳಿಗೆ ಹೋಗಲಿಕ್ಕೆ ಅವಕಾಶವಿರುತ್ತದೆ. ಗ್ರಾಮಾಂತರ ಪ್ರದೇಶದ ರೈತರು ನಮ್ಮ ಮಕ್ಕಳು ನಾಲ್ಕು ಅಕ್ಷರ ಕಲಿಯಲಿ, ನಮ್ಮ ಮಗ ನಮ್ಮ ಮನೆಗೆ ದಾರಿದೀಪವಾಗಲಿ ಎಂದು ಕಾಲೇಜುಗಳಿಗೆ ಕಳುಹಿಸುತ್ತಾರೆ. ಇಲ್ಲಿ ಒಬ್ಬ ಪ್ರಿನ್ಸಿಪಾಲರನ್ನು ನೇಮಕ ಮಾಡುವುದು ಕಷ್ಟ ಎಂದರೆ ನಾನು ಹೇಳುತ್ತೇನೆ, ಇಂತಹ ಅಸಹಾಯ ಕತೆಯನ್ನು ತಾವು ಹೇಳಬಾರದು ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಎಷ್ಟು ದಿವಸದಲ್ಲಿ ಅಲ್ಲಿಗೆ ಪ್ರಿನ್ಸಿಪಾಲರನ್ನು ನೇಮಕ ಮಾಡುತ್ತಾರೆ ಎನ್ನುವುದನ್ನು ಅವರು ಉತ್ತರ ಹೇಳುವ ಸಂದರ್ಭದಲ್ಲಿ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಹಾಸನದಲ್ಲಿ ಒಂದು ಪಾಲಟೆಕ್ನಿಕ್ ಇದೆ, ವಿದ್ಯಾವಂತರಾದ ಹೆಣ್ಣುಮಕ್ಕಳು, ವಿಧವೆಯರು, ಕಾರಣಾಂತರಗಳಿಂದ ಗಂಡನನ್ನು ಬಿಟ್ಟಂತಹ ಹೆಣ್ಣುಮಕ್ಕಳು ಬಹಳ ಕಷ್ಟದಲ್ಲಿದ್ದಾರೆ. ಇವೊತ್ತಿನ ದಿವಸ ಹೆಣ್ಣುಮಕ್ಕಳು ಜೀವನ ಮಾಡಬೇಕು ಎಂದರೆ ಬಹಳ ಕಷ್ಟ ಎನ್ನುವುದು ಎಲ್ಲರಿಗೂ ಗೊತ್ತು. ಮೊದಲು ನಮ್ಮಲ್ಲಿ ಎಲ್.ವಿ. ಪಾಲಿಟೆಕ್ನಿಕ್‌ನಲ್ಲಿ ಟೈಲರಿಂಗ್ ಸೆಕ್ಷನ್ ಇತ್ತು. ಅಲ್ಲಿ ಟೈಲರಿಂಗ್ ಮೆಷಿನ್‌ಗಳಿವೆ, ಎಲ್ಲಾ ವ್ಯವಸ್ಥೆ ಇದೆ, ಗವರ್ನ್‌ಮೆಂಟ್ ಗ್ರಾಂಟ್ಸ್ ಇದೆ, ಇಷ್ಟೆಲ್ಲಾ ಇದ್ದರೂ ಅಲ್ಲಿ ಅದನ್ನು ಮುಚ್ಚಲಾಗಿದೆ. ಈ ಬಗ್ಗೆ ನಾನು ಸಚಿವರಿಗೆ ಕಾಗದ ಬರೆದಿದ್ದೇನೆ, ಹಿಂದೆ ಇದ್ದ ಶಾಸನ ಸಭಾ ಸದಸ್ಯರು ಕಾಗದವನ್ನು ಬರೆದಿದ್ದಾರೆ. ಟೈಲರಿಂಗ್ ಸೆಕ್ಷನ್ ತೆರೆಯಬೇಕು ಎಂದು ಪದೇ ಪದೇ ಹೇಳಿದರೂ ಕೂಡ ಅದನ್ನು ಇನ್ನೂ ಕ್ಲೋಸ್ ಮಾಡಿಕೊಂಡೇ ಇದ್ದಾರೆ. ಅದನ್ನು ಯಾವ ಪುರುಷಾರ್ಥಕ್ಕೋಸ್ಕರ ಕ್ಲೋಸ್ ಮಾಡಿದರು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಬೇಕಾಗಿದೆ.

ಶ್ರೀ ಜಿ. ಬಿ. ಶಂಕರರಾವ್.—ನಾವು ಇದ್ದಾಗ ಮಾಡಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಅಧ್ಯಕ್ಷರೆ, ಇದು ಕಂಟಿನ್ಯೂಯಿಂಗ್ ಬಾಡಿ ಅಲ್ಲವೇ ? ಸುಮಾರು ಎರಡು ವರ್ಷಗಳಿಂದಲೂ ಪದೇ ಪದೇ ಅನೇಕಸಾರಿ ಇವರ ಗಮನಕ್ಕೆ ತಂದು, ಈ ಟೈಲರಿಂಗ್ ಸೆಕ್ಷನ್ ತೆರೆಯಬೇಕೆಂದು ಹೇಳಿದರು ಇವರು ಇನ್ನೂ ಮಾಡಿಲ್ಲ.

ಶ್ರೀ ಜಿ. ಬಿ. ಶಂಕರರಾವ್.—ಅವಶ್ಯಕತೆ ಇದ್ದರೆ ಮಾಡುತ್ತೇವೆ.

† ಶ್ರೀ ಕೆ. ಹೆಚ್. ಹನುಮೇಗೌಡ.—ಅಧ್ಯಕ್ಷರೆ, ಇದರ ಬಗ್ಗೆ ಬಹಳ ಅವಶ್ಯಕತೆ ಇದೆ. ಹೆಣ್ಣು ಮಕ್ಕಳ ಅರ್ಜಿ ಇದೆ ; ಇದನ್ನು ಆದಷ್ಟು ಬೇಗ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ವಿದ್ಯಾಭ್ಯಾಸದ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ತಿಳಿಸಿದ್ದಾರೆ. ಕಳೆದ ೩೦-೩೫ ವರ್ಷದಿಂದಲೂ ಅನೇಕ ಜನ ಮಾತನಾಡಿ ವಿದ್ಯಾಭ್ಯಾಸದ ಪದ್ಧತಿಯಿಂದ ದೇಶದ ಕ್ಷೇಮ ಇಲ್ಲ, ಇದರಿಂದ ಯುವಕ ಯುವತಿಯರಿಗೆ ನೌಕರಿ ಸಿಕ್ಕುವುದಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆರ್ಥಿಕವಾಗಿ ಈ ದೇಶ ಕಷ್ಟಕ್ಕೆ ಸಿಲುಕಿದೆ, ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು ಎನ್ನುವ ವಿಚಾರಗಳು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾವು ನೀವು ಕೇಳಿದ್ದೇವೆ. ನಮ್ಮಲ್ಲಿ ಬೇಕಾದಷ್ಟು ಜನರು ತಜ್ಞರು ಇದ್ದರೂ ವಿದ್ಯಾಭ್ಯಾಸ ಪದ್ಧತಿ ಇದೇ ರೀತಿ ಮುಂದುವರಿಯುತ್ತಿದೆ. ಪ್ರತಿ ವರ್ಷವೂ ಸಾವಿರಾರು ಜನ ವಿದ್ಯಾರ್ಥಿಗಳು ಹೈಸ್ಕೂಲು, ಕಾಲೇಜುಗಳಿಂದ ಹೊರಬಂದು ತಮ್ಮ ನಿತ್ಯ ಜೀವನದಲ್ಲಿ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಆಗುತ್ತಿಲ್ಲ. ಈಗಿನ ಕಾಲೇಜಿನಲ್ಲಿ ಓದಿದಂಥ ವಿದ್ಯಾರ್ಥಿಗಳು ಸರ್ಕಾರಿ ಗುಮಾಸ್ತೆ ಕೆಲಸ ಮಾಡಲಿಕ್ಕೆ ಲಾಯಕ್ಕೆ ವಿನಹ ಬೇರೆ ಯಾವುದನ್ನೇ ಕೆಲಸ ಮಾಡಲಿಕ್ಕೆ ಅವರಿಗೆ ಸಾಧ್ಯವಿಲ್ಲ. ಇಷ್ಟು ಜನ ತಜ್ಞರು ಇದ್ದು, ಮಂತ್ರಿಗಳು ಇದ್ದು ವಿದ್ಯಾಭ್ಯಾಸ ಮಾಡಿದಂಥ ಮಕ್ಕಳು ತಮ್ಮ ಸ್ವಂತ ಕಾಲಿನ ಮೇಲೆ ತಾವು ನಿಲ್ಲುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ಪ್ರತಿ ವರ್ಷವು ಲಕ್ಷಾಂತರ ವಿದ್ಯಾರ್ಥಿಗಳು ನಿರುದ್ಯೋಗಿಗಳಾಗಿ ಹೊರಗೆ ಬರುತ್ತಿದ್ದಾರೆ. ಇವರಲ್ಲಿ ನೂರಕ್ಕೆ ಎಂಭತ್ತು ಭಾಗ ಯಾರು ಇದ್ದಾರೆ ಎಂದರೆ, ಪಟ್ಟಣದ ಸ್ಲಮ್‌ನಲ್ಲಿರತಕ್ಕವರೆ

ನಿರುದ್ಯೋಗಿಗಳು. ಶ್ರೀಮಂತ ವರ್ಗಕ್ಕೆ ಸೇರಿದವರೆಲ್ಲರೂ ಅವರ ಮಕ್ಕಳನ್ನು ಕಾನ್‌ವೆಂಟ್‌ಗೆ ಕಳುಹಿಸಿ ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ಉತ್ತಮ ಎಜುಕೇಷನ್ ಕೊಡಿಸುವುದರಿಂದ, ಅವರು ಒಳ್ಳೆಯ ಸ್ಥಾನಮಾನಕ್ಕೆ ಬರಲಿಕ್ಕೆ ಅವಕಾಶವಿದೆ. ಈ ಮೆರಿಟ್ ಸಿಸ್ಟಮ್ ಇರುವುದರಿಂದ ಡಿಸ್ಕ್ರಿಮಿನೇಟ್ ಮಾಡಲಿಕ್ಕೆ ಆಗುವುದಿಲ್ಲ ; ಈ ಮೆರಿಟ್ ವಿಚಾರ ಇರುವುದರಿಂದ ಬೇರೆ ಮಕ್ಕಳಿಗೆ ಅವಕಾಶವಾಗುತ್ತಿಲ್ಲ.

ಈಗ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಬಡವರ ಮಕ್ಕಳು ಎರಡು ಅಟೆಂಪ್ಟ್‌ಗೆ ಕಷ್ಟಪಟ್ಟು ೩೫ ಪರ್ಸೆಂಟ್ ತೆಗೆದುಕೊಂಡು ಎಸ್.ಎಸ್.ಎಲ್.ಸಿ.ಯನ್ನು ಪಾಸ್ ಮಾಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ನಾನು ಹೇಳುವುದಾದರೆ ನಮ್ಮ ರಾಜ್ಯದಲ್ಲಿರತಕ್ಕ ವಿದ್ಯಾಭ್ಯಾಸ ಪದ್ಧತಿಯನ್ನು ಆದಷ್ಟು ಬೇಗ ಮಾರ್ಪಾಡು ಮಾಡದಿದ್ದರೆ ಇನ್ನು ಕೆಲವೇ ದಿವಸಗಳಲ್ಲಿ ಈ ನಿರುದ್ಯೋಗ ಸಮಸ್ಯೆಯು ಬೃಹದಾಕಾರವಾಗಿ ಬೆಳೆದು ಕೊನೆಗೆ ಈ ಸರ್ಕಾರವನ್ನೇ ನುಂಗುವಂಥ ಸ್ಥಿತಿ ಬರುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ನಮ್ಮ ದೇಶದಲ್ಲಿ ಅನೇಕ ಜನ ವಿದ್ಯಾಕ್ಷೇತ್ರದಲ್ಲಿ ನುರಿತಿರತಕ್ಕ ಪರಿಣತರಿದ್ದಾರೆ. ಇಷ್ಟೇ ಅಲ್ಲದೆ ಅನೇಕಮಂದಿ ಹೊರದೇಶಗಳಿಗೂ ಕೂಡ ಹೋಗಿ ಅಲ್ಲಿನ ವಿದ್ಯಾಭ್ಯಾಸ ಪದ್ಧತಿ ಯಾವರೀತಿ ಇದೆ ಎಂಬುದನ್ನು ನೋಡಿಕೊಂಡು ಬಂದಿದ್ದಾರೆ. ಇಷ್ಟಾದರೂ ನಮ್ಮ ದೇಶಕ್ಕೆ ಸಹಾಯಕವಾಗುವಂಥ ವಿದ್ಯಾಭ್ಯಾಸ ಪದ್ಧತಿಯನ್ನು ತರಲು ಸಲಹೆ ನೀಡದಿದ್ದರೆ ಇವರು ಇರುವುದಾದರೂ ಏತಕ್ಕೆ ? ಬೇರೆ ದೇಶಗಳಲ್ಲಿರುವಂತೆ ನಮ್ಮ ದೇಶದ ವಿದ್ಯಾಭ್ಯಾಸವನ್ನೂ ಬದಲಾವಣೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವೆಯವರಾಗಿ ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಆದರೂ ಕಳೆದ ಹತ್ತಾರು ವರ್ಷಗಳಿಂದ ವಿದ್ಯಾಭ್ಯಾಸ ಪದ್ಧತಿಯಲ್ಲಿರತಕ್ಕ ನ್ಯೂನತೆಯನ್ನು ಒಂದೇಸಾರಿ ಸರಿಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಅವರು ಈ ಸಮಸ್ಯೆಯನ್ನು ಪರಿಹರಿಸಲು ವಿದ್ಯಾಕ್ಷೇತ್ರದಲ್ಲಿ ನುರಿತಿರತಕ್ಕ ಪರಿಣತರಿಂದ ಸಲಹೆಗಳನ್ನು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇವರು ಮಾಡಿರುವ ಒಂದು ಮಹತ್ತರ ಕೆಲಸವೆಂದರೆ, ಡಿ.ಎಲ್.ಆರ್.ಸಿ. ವಿಚಾರದಲ್ಲಿ ಒಂದು ದಿಟ್ಟ ಹೆಜ್ಜೆಯನ್ನು ಮುಂದಿಟ್ಟು ಎಲ್ಲರ ಮನ್ನಣೆಗೂ ಪಾತ್ರರಾಗಿದ್ದಾರೆ, ಎಂದರೆ ತಪ್ಪಾಗಲಾರದು. ಈ ದೇಶದಲ್ಲಿ ಉಪಾಧ್ಯಾಯರ ವೃತ್ತಿಗೆ ಬರಬೇಕಾದರೆ ತಮ್ಮ ಹೆಂಗಸರ ಕೊರಳಲ್ಲಿದ್ದ ತಾಳಿಯನ್ನು ಬೇರೆಯವರ ಹತ್ತಿರ ಅಡವು ಇಟ್ಟು ಕೆಲಸಕ್ಕೆ ಸೇರಬೇಕಾಗಿತ್ತು. ಇವತ್ತು ಅದು ಇಲ್ಲದಂತಾಗಿದೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಹೇಳಬೇಕೆಂದರೆ ಹೈಸ್ಕೂಲ್‌ನ ವಿದ್ಯಾರ್ಥಿಗಳು ಸಾಮಾನ್ಯವಾಗಿ ಎಲ್ಲರೂ ಪ್ರಾಯಕ್ಕೆ ಬಂದವರು, ಅಂದರೆ ೧೬-೨೦ ವರ್ಷದ ಮಕ್ಕಳು. ಈ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ನಾವು ವಿದ್ಯಾಭ್ಯಾಸವನ್ನು ಕೊಟ್ಟರೆ ಮುಂದೆ ಅವರು ಉತ್ತಮ ಜೀವನವನ್ನು ನಡೆಸುವುದಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆಂದು ಹೇಳ ಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಬೆಂಗಳೂರು ನಗರದಿಂದ ೧೫-೨೦ ಮೈಲಿ ದೂರದಲ್ಲಿ ಲಾರೆನ್ಸ್ ಸ್ಕೂಲ್ ಎಂದು ಇದೆ. ಅಲ್ಲಿ ಸುಮಾರು ೨೮೦೦ ವಿದ್ಯಾರ್ಥಿಗಳಿದ್ದಾರೆ. ಅವರೆಲ್ಲಾ ಸ್ವಲ್ಪ ಹೆಚ್ಚೂ ಕಡಿಮೆ ಬಡವರ ಮನೆಯಿಂದ ಬಂದವರು. ರಾಜ್ಯಸರ್ಕಾರದವರು ಏನು ಪಠ್ಯಕ್ರಮವನ್ನಿಟ್ಟಿದ್ದಾರೆ ಅದರ ಪ್ರಕಾರವೇ ಅಲ್ಲಿ ಪಾಠಪ್ರವಚನಗಳನ್ನು ಮಾಡುತ್ತಾರೆ. ಆ ಶಾಲೆಗೆ ೨೦ ಎಕರೆ ಜಮೀನು ಇದ್ದು, ಅಲ್ಲಿ ಪಶುಸಂಗೋಪನೆ, ದ್ರಾಕ್ಷಿ ಬೆಳೆಯುವುದು ತರಕಾರಿ ಬೆಳೆಯುವುದು, ತೋಟಗಾರಿಕೆ, ಪ್ರಿಂಟಿಂಗ್ ಇನ್ನೂ ಮುಂತಾದ ಉಪಕಸುಬುಗಳ ಬಗ್ಗೆ ತರಬೇತಿಯನ್ನು ಕೊಡುತ್ತಿದ್ದಾರೆ. ಪ್ರತಿ ದಿವಸ ಕನಿಷ್ಟ ೨-೩ ಗಂಟೆಕಾಲ ಕಡ್ಡಾಯವಾಗಿ ಇದನ್ನು ಮಾಡಬೇಕಾಗುತ್ತದೆ. ಇದರಿಂದ ಬಂದಂಥ ಹಣವನ್ನು ಅಲ್ಲಿಯ ಮಕ್ಕಳ ಕ್ಷೇಮಾಭಿವೃದ್ಧಿಗೇ ಖರ್ಚುಮಾಡುತ್ತಾರೆ. ನಾನು ಒಂದುಸಾರಿ ಅಲ್ಲಿ ಹೋಗಿ ನೋಡಿದಾಗ ಪ್ರತಿವರ್ಷ ೬೦-೭೦ ಪರ್ಸೆಂಟ್ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ತೆಗೆದುಕೊಂಡು ತೇರ್ಗಡೆಯಾಗುತ್ತಿರುವುದಾಗಿ ತಿಳಿದುಬಂತು. ಇಷ್ಟೇ ಅಲ್ಲದೆ ಆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಹೊರಗೆ ಹೋದಂಥ ವಿದ್ಯಾರ್ಥಿಗಳು ಪ್ರತಿಯೊಬ್ಬರೂ ಒಂದೊಂದು ರೀತಿಯ ಕಸಬುಗಳನ್ನು ಅಂದರೆ ತೋಟಗಾರಿಕೆ ಡೈರಿ, ದ್ರಾಕ್ಷಿ ಬೆಳೆಯುವುದು, ವ್ಯವಸಾಯ ಮಾಡುವುದು ಇನ್ನೂ ಮುಂತಾದುವುಗಳನ್ನು ಮಾಡಿಕೊಂಡು ತಮ್ಮ ಜೀವನವನ್ನು ಸ್ವತಂತ್ರವಾಗಿ ನಡೆಸುತ್ತಿದ್ದಾರೆ.

ಆದ್ದರಿಂದ ನಾನು ಮಾನ್ಯ ವಿದ್ಯಾ ಸಚಿವರಲ್ಲಿ ಬಹಳ ವಿನಯದಿಂದ ಕೇಳಿಕೊಳ್ಳುವುದೇನೆಂದರೆ ಇನ್ನು ಮುಂದೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಆ ಶಾಲೆಗೆ ಸಂಬಂಧ ಪಟ್ಟಂತೆ ಕನಿಷ್ಟ ೧೫–೨೦ ಎಕರೆ ಜಮೀನನ್ನು ಕೊಟ್ಟು ದ್ರಾಕ್ಷಿ ಬೆಳೆಯುವುದು. ತೋಟಗಾರಿಕೆ ಇನ್ನೂ ಮುಂತಾದುವನ್ನು ಮಾಡಿ ಅನಂತರ ತಮ್ಮ ತಮ್ಮ ತಂದೆತಾಯಿಗಳು ಮಾಡತಕ್ಕ ಕೆಲಸಗಳಲ್ಲಿ ಇವರು ಸಹಾಯ ಮಾಡುವಂಥ ವೃತ್ತಿಶಿಕ್ಷಣವನ್ನು ಕೊಡಬೇಕೆಂದು ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಇಂಥ ಸ್ಕೂಲುಗಳು ನಮ್ಮಲ್ಲಿ ಬಹಳ ಇವೆ. ಉದಾಹರಣೆಗೆ ಕ್ರಿಶ್ಚಿಯನ್ ಮಿಷನ್ ಸ್ಕೂಲುಗಳು. ಇವು ಬಹಳ ಒಳ್ಳೆಯ ಹೆಸರುಗಳನ್ನು ತೆಗೆದುಕೊಂಡಿವೆ, ಇಲ್ಲಿ ವಿದ್ಯಾಭ್ಯಾಸ ಮಾಡಿದಂಥ ವಿದ್ಯಾರ್ಥಿಗಳು ಬಹಳ ಉತ್ತಮ ಜೀವನವನ್ನು ನಡೆಸುತ್ತಿದ್ದಾರೆ. ಇದನ್ನು ಮಾನ್ಯ ಸಚಿವರು ಗಮನಿಸಬೇಕು,

ಮಾನ್ಯ ಅಧ್ಯಕ್ಷರೇ, ತಮಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಧಾರವಾಡದಲ್ಲಿ ಇಂಥದ್ದೇ ಒಂದು ಶಾಲೆಯನ್ನು ತೆರೆಯಬೇಕೆಂದು ಗ್ರಾಮಾಂತರಪ್ರದೇಶದಿಂದ ಬಂದಿದ್ದಂಥ, ಬಹಳ ಬಡತನದಿಂದ ಉನ್ನತ ಹುದ್ದೆಗೆ ಬಂದಿದ್ದಂಥ ಒಬ್ಬ ಹಿರಿಯ ಅಧಿಕಾರಿಯೊಬ್ಬರು ಗ್ರಾಮಾಂತರ ಪ್ರದೇಶದ ಮಕ್ಕಳ ಬಗ್ಗೆ ಅನುಕಂಪವನ್ನು ಇಟ್ಟು ಕೊಂಡು ಒಂದು ರಿಪೋರ್ಟ್‌ನ್ನು ಕೊಟ್ಟರು. ನನಗೆ ತಿಳಿದಪ್ರಕಾರ ಆ ರಿಪೋರ್ಟ್ ಕ್ಯಾಬಿನೆಟ್‌ಗೆ ಬಂದಿತ್ತಂತೆ. ಆದರೆ ಅನಂತರ ಅದು ಏನಾಯಿತೋ ನನಗೆ ತಿಳಿಯದು. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಆ ಅಧಿಕಾರಿ ಕೊಟ್ಟಿದಂಥ ರಿಪೋರ್ಟನ್ನು ದಯವಿಟ್ಟು ತರಿಸಿಕೊಂಡು ಪರಿಶೀಲಿಸಿ ಪ್ರತಿಯೊಂದು ಹಳ್ಳಿಗೂ ಇಂಥ ಒಂದೊಂದು ಶಾಲೆಗಳನ್ನು ಮಂಜೂರು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುವುದರ ಜೊತೆಗೆ ಈಗಿನ ವಿದ್ಯಾಭ್ಯಾಸ ಪದ್ಧತಿಯನ್ನು ಮಾರ್ಪಾಡು ಮಾಡಿ ಮುಂದೆ ಅದರಿಂದ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ತಮ್ಮ ಕಾಲಮೇಲೆ ತಾವು ನಿಂತುಕೊಳ್ಳಲು ಸಾಧ್ಯವಾಗುವಂತೆ ಮಾಡಬೇಕೆಂದು ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI PRABHAKAR TELKAR (Chithapur).—While supporting the demands put forth by the Education Department and the Department of Information and Youth Services, I would like to submit a few things. Several of my friends opined that the present system of education is very old and that there should be a change in the existing system of education in order to strengthen the national unity, to promote national integration, to accelerate economic growth, etc. Now what we have seen, as some of the Speakers have observed, is that the student population is not at all obeying or respecting the teachers or elders, as they need to in the olden days and there are several reasons for that. We have obtained freedom and the children born after freedom, do not know the importance of the freedom struggle that has taken place. Under these circumstances we see that the student population is not up to the mark as we had expected then to be. In our educational system, I feel what we are lacking is the patriotism which is quite essential for each and every citizen of India.

6-00 P.M.

The education that is being imparted in the schools, particularly in primary schools, the children are not at all taught. If the children learn patriotism, and love for the country I feel that they will become dutiful and definitely they may, instead of claiming rights,

be just doing their work for the nation. What we have seen in the recent past is, the student population as well as the persons who are citizens, are just destroying public property. We have seen them smashing tube-lights or the properties which belong to the Government. So, under these circumstances, what I feel this that the patriotism or the love for the nation and the property, should be taught from the childhood, itself. There have been some suggestions as to what kind of education should be given to the students. There is one new scheme which has become popular in America and western countries, that is, regarding 'Team Teaching.' In this rapidly changing world, expansion of knowledge, new inventions, fresh technological advantages which are taking place with great speed, the traditional class room, teaching looks stereo-typed. What we see in classes is that there are about 40 to 50 students and only one teacher willbe there. We have got only limited time and in that limited time we see that the students are taught. If you take any subject which has got several aspects, if we just think of the age old system which was Guru Kula or Bhuddist teaching and the other Islamic teaching, it was not like the class room teaching. We should take up subjects which have got historical background, which have got geographical importance, etc.

MR. SPEAKER.—Do you want to go back to Guru Kula system ?

SRI PRABHAKAR TELKAR.—Not that. It is the system which was there. Now, at present teaching in a class is not correct. In America they have been coming to the Team Teaching. May I suggest the advantages that are there under the Team Teaching? I will just read two or three points.

> "There can be alternatives to the present grouping. Some time in instructions may be spent in large groups of 100 or 150,and some time in very small groups. Already this is done in Morning Assembly, Science Demonstrations, Craft work and co-curricular activities. Thus distribution in large groups, or small groups could be daily routine or a frequent set up of the daily schedule.
>
> Alternatives to the present room-allocation could be arranged, so that some classes meet in some periods in big halls in large groups, some in usual classes, and some in small rooms for practical or remedial or individual work.
>
> Alternatives to the present duration of periods could be followed so that some periods may be of one hour or 80 and some of 30 minutes.

Alternatives could be arranged to the present subject teaching, so that there could be individual teacher system or multiple teacher system. In multiple teacher system a number of teachers may join hands and teach the same class minutes, some of 40 minutes, in a corporate manner.

Alternatives could be possible to the present grouping of students. At present, due to explosion of population, concomitant increasing demands on education and expansion of enrolment, mass teaching has assumed significance. Already mass teaching is taking place in certain schools, and a hundred pupil attend the same class. Pedagogicaly, mass teaching suffers from the drawback of lack of individual attention by the teacher. So some sort of compromise is necessary. That way for some topics in the curiculum, we may have mass teaching, and for others sectional teaching in sections of 30, and for others small grouping or individualised teaching.

Alternatives could be possible for the present methods of teaching. Lecture method could not be the only method. Programmed instruction, films and television and later on teaching machine could be used. Visits to places, exhibitions and demonstrations, could be other media. In using media other than teaching, the present system one teacher for 30 students and the present time table does not suit."

So, what I submit is that the Team Teaching will definitely improve the standard of the students. We are just seeing that they are anable to pnswer in the interviews or in the examinations one can be wonderful to see such answers from the students who are the graduates or more than that. In this system, I think, the Team Teaching will definitely help to take up the standard of the students who are taking education.

Regarding Adult Education, if we go through the report, I think no Adult Education Centres have been taken up in Gulbarga. I do not know why the percentage of literacy in Gulbarga is very less and I request the Government and our Minister to see that the Adult Education Centre is taken up.

Regarding the construction of school buildings so manyMembers have taken this plea. What I think is that in Gulbarga, particularly in Chittapur taluk there are school buildings which are in dilapidated condition and because of that students do not go to the school or the parents apprehend to send their children to the school. One primary school at Dhandothi village fell down and the teacher was injured.

Similar is the case in Tholasahalli. There are school buildings in which even though the students want to go because of the apprehension they are not going. Therefore, it is quite essential that something should be done and these schools which are in dilapidated condition must be repaired immediately. If that is not done in rural areas, the students are not at all going to the schools.

MR. SPEAKER.—Why don't you get it done under the E.A.S. Scheme, since the other day the Hon. Minister was telling that the work could be done under the scheme also? Why don't you make a list of all those things ? I was told that the scheme is used for the constructions of buildings, construction of the panchayats.

SRI PRABHAKAR TELKAR.—That requires material for that. It is not possible under the scheme because they just employ for this and do some work.

One important thing is the Archaeological Department, I think, in Gulbarga we found about 60 Kgs. of gold coins, out of which 5 Kgs. of gold coins have been taken to custody. They are of about 500 and 600 years back. Regarding the other excavation, I think, the Department should take interest in this and immediately see what best can be achieved in that area where these gold coins have been found.

Regarding the transfer of teachers under article 32 of the Act, about 51 teachers have been transferred saying that they have been promoted. But, not monetary help is given to them. One person from Kolar was transferred to Ranibennur about 700 Kms, but no monetary help is given to him. If that is the case, then how do you expect that they will be in a position to teach the students, leaving his family about 700 Kms. and absolutely no monetary benefit to him?

I have written a letter to the Secretary in this regard. I am now requesting you to look into the grievances of such of the teachers who have been transferred on promotion to far away places under the existing scale of pay. Lot of injustices has been done by transferring them to far off places. It is a sort of harassness to such of the family members who have been transferred on promotion. So, I request the Honble Minister to look into their grievances. Then Sir, in Yadgir a degree college has been opened, Since its inception there is no staff. No rent is being paid. There is no furniture at all. Some staff members have not got their salaries for the last three years. In such a situation, how do you expect those people to work there ? Similar is the case in respect of Gulbarga also. Sir, in Government Multipurpose High School, Gulbarga, which is running a composite junior

college, there are about 2,000 students and there are about 40 class rooms. But there are no adequate furniture at all in the class rooms. The institution has represented to the Government to provide furniture but so far no action has been taken in this regard. Hon'ble Minister for Revenue also visited that place and till today nothing has been done. Further Sir, the Institution has printed application forms in which it is stated that the students have to squat on the ground due to non-availability of furniture. So, I request the Hon'ble Minister to immediately look into this. Lastly, I would like to say that arrangements should be made to teach Urdu, Marathi, Telugu, Hindi etc. in all the schools of border areas, particularly of Hyderabad Karnataka area. Similarly, we can request the Government of Andhra Pradesh, Maharashra to teach Kannada in their schools situated in border areas. With these words I conclude my speech. Thank you.

† ಶ್ರೀ ಜಿ.ಕೆ. ತಕ್ಕೇಡ್ (ಪರಸಗಡ).––ಮಾನ್ಯಸಭಾಧ್ಯಕ್ಷರೇ, ಶಿಕ್ಷಣ ಯುವಜನ ಹಾಗೂ ಸುದ್ದಿ ಮತ್ತು ಪ್ರಸಾರ ಶಾಖೆಗಳ ತ್ರಿಮೂರ್ತಿಗಳು ಮಂಡಿಸಿದಂತಹ ನಮ್ಮ ರಾಜ್ಯದ ಈ ಮುಂಗಡ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಮ್ಮ ರಾಜ್ಯದಲ್ಲಿ ಪದಪೀಧರ ಶಿಕ್ಷಣವನ್ನು ಒಂದು ಯೋಗ್ಯ ಮಟ್ಟದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಬಹಳ ಪ್ರಗತಿಪರವಾದ ರೀತಿಯಲ್ಲಿ ಕಾರ್ಯರೂಪ ಗೊಳಿಸಲಾಗಿವೆಯೆಂದು ನಾನು ಹೇಳುತ್ತೇನೆ. ಕೆಲವೊಂದು ಖಾಸಗೀ ಸಂಸ್ಥೆಗಳಲ್ಲಿ ಹಣದ ಅಪವ್ಯಯ ನಡೆಯುತ್ತಿರಬಹುದು. ಮಾನ್ಯ ಮಳ್ಳೂರು ಆನಂದರಾವ್ ಅವರು ಅನೇಕ ಖಾಸಗೀ ಸಂಸ್ಥೆಗಳ ಬಗ್ಗೆ ತಮ್ಮ ವಾದವನ್ನು ಪ್ರತಿಸಲವೂ ಮಂಡಿಸುತ್ತಾ ಬರುತ್ತಿದ್ದಾರೆ. ನಮ್ಮ ಅಧಿಕಾರಗಳನ್ನು ಅಷ್ಟೊಂದು ಲಘುವಾಗಿ ಕಾಣಬಾರದೆಂದು ನಾನು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ತಂದಿರುವಷ್ಟು ಶಿಕ್ಷಣ ಮಟ್ಟವನ್ನು, ದೇಶದ ಇನ್ನಾವುದೇ ರಾಜ್ಯಗಳಲ್ಲಿ ಇಷ್ಟೊಂದು ಉಚ್ಚ ಮಟ್ಟಕ್ಕೆ ತಂದಿರುವುದಿಲ್ಲವೆನಿಸುತ್ತದೆ. ಏಕೆಂದರೆ ನಾನು ನೆರೆಯ ರಾಜ್ಯವಾದ ಮಹಾರಾಷ್ಟ್ರದಲ್ಲಿನ ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿನ ಬಡ್ಜೆಟ್ಟನ್ನು ಹಾಗೂ ಅಲ್ಲಿಯ ಕಾಲೇಜು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿನ ತೊಂದರೆಗಳನ್ನು ನಾನು ನೋಡಿದ್ದೇನೆ. ಅವುಗಳನ್ನು ಅಭ್ಯಾಸ ಮಾಡಿದ್ದೇನೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ನಮ್ಮ ಅಧಿಕಾರಿಗಳು ಇವತ್ತು ಶಿಕ್ಷಣ ಮಟ್ಟವನ್ನು ಯಾವ ರೀತಿಯಿಂದಲೂ ಕೆಳಮಟ್ಟಕ್ಕೆ ತಂದಿದ್ದಾರೆನಿಸುವುದಿಲ್ಲ. ಇವತ್ತು ೧೭೫ ಕೋಟಿ ರೂಪಾಯಿಗಳನ್ನು ಪ್ರಾಮಾಣಿಕ ರೀತಿಯಿಂದ ಎಲ್ಲಾ ಖಾತೆಗಳಿಗೂ ಹಂಚಲಾಗಿದೆ. ಇವತ್ತು ಶಿಕ್ಷಣ ಇಲಾಖೆಯಲ್ಲಿ ಯೂನಿವರ್ಸಿಟಿ ಮಟ್ಟದವರೆಗೆ ದಕ್ಷರಾದಂತಹ ಅಧಿಕಾರಗಳು ಇದ್ದಾರೆ. ನಿರ್ದೇಶಕರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇಬ್ಬರು ಸಹ ನಿರ್ದೇಶಕರು ಅವರಿಗೆ ಸಹಾಯ ಮಾಡುತ್ತಿದ್ದಾರೆ. ಮತ್ತು ಆಹಾರವನ್ನು ಕೊಡುವ ವ್ಯವಸ್ಥೆಯನ್ನೂ ನಿರ್ದೇಶಕರೇ ಮಾಡುತ್ತಿದ್ದಾರೆ. ವಿಭಾಗೀಯ ಮಟ್ಟದಲ್ಲಿ ೪ ಜನ ಸಹ ನಿರ್ದೇಶಕರು ಕೆಲಸ ನಿರ್ವಹಿಸುತ್ತಿದ್ದಾರೆ. ೨೧ ಜನ ಉಪ ನಿರ್ದೇಶಕರು ಇದ್ದಾರೆ. ೧೮೭ ಜನ ಸಹಾಯಕ ನಿರ್ದೇಶಕರು ತಾಲ್ಲೂಕು ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಪ್ರೌಢ ಶಿಕ್ಷಣ ನನ್ನ ವಿಭಾಗದಲ್ಲಿ ಸಾಕಷ್ಟು ಪ್ರಗತಿಪರ ಹೊಂದಿದೆ. ನನ್ನ ಕ್ಷೇತ್ರದಲ್ಲಿ ಇವತ್ತು ಸುಮಾರು ೧೫೭ ಶಾಲೆಗಳು ನಡೆಯುತ್ತಿವೆ. ನಮ್ಮಲ್ಲಿ ಬರೀ ಕ, ಖ, ಕಿ, ಖಿ, ಅಷ್ಟನ್ನೇ ಹೇಳಿಕೊಡದೇ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಆಟಪಾಠ, ಈಜುವುದು, ಕೊಳಲು ನುಡಿಸುವುದು, ಮುಂತಾದ ಕಲೆಗಳಲ್ಲೂ ತರಪೇತನ್ನು ನೀಡಲಾಗುತ್ತಿದೆ. ಇಷ್ಟು ಕೆಲಸವನ್ನು ೪ ಜನ ನಿರ್ದೇಶಕರು ನಿರ್ವಹಿಸುತ್ತಿರುವಾಗ ಇವರ ಮೇಲೆ ಒಬ್ಬರು ಕಮಿಷನರ್ ಇದ್ದಾರೆ ಈ ಇಲಾಖೆಗೆ ಕಮಿಷನರ್ ಹುದ್ದೆ ಏಕೆ ಬೇಕು ? ಆ ಹುದ್ದೆಯನ್ನು ತೆಗೆದು ಹಾಕಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ. ನಿರ್ದೇಶಕರು ಒಬ್ಬರೇ ತಮ್ಮ ೩೦ ವರ್ಷಗಳ ನಿಸ್ವಾರ್ಥ ಸೇವೆಯಿಂದ ಇಲಾಖೆಯನ್ನು ಮುಂದೆ ತಂದಿದ್ದಾರೆ. ಇವತ್ತು ಅವರ ಮೇಲೆ ಒಬ್ಬ ಐಎಎಸ್ ಅಧಿಕಾರಿಯನ್ನು

ತಂದು ಅವರ ಮೇಲೆ ಹಾಕುವುದು ಏಕೆ ಇವತ್ತು ಕಮಿಷನರ್‌ಗಿರಿ ಬೇಡ. ಕೊಲಿಜಿಯೇಟ್ ಒಬ್ಬರಿದ್ದಾರೆ ಶ್ರೀಮತಿ ಶೆಲ್ವಿದಾಸ್ ಅವರು ಉತ್ಕೃಷ್ಟ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹವರು ಬಹಳ ಹಾನೆಸ್ಟಾಗಿ, ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸುತ್ತಿರುವಾಗ ಅವರಿಗೇ ಎಲ್ಲಾ ಕಾಲೇಜುಗಳನ್ನು ಕೊಡಬೇಕು. ಈ ದಿನ ವಿಶ್ವವಿದ್ಯಾನಿಲಯದ ಶಿಕ್ಷಣದಲ್ಲಾಗಲೀ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದಲ್ಲಾಗಲೀ ಪರಿಣಾಮಕಾರಿಯಾದ ಡೈರೆಕ್ಟರ್ ಇರುವಾಗ ಈ ಕಮಿಷನರ್ ಹುದ್ದೆ ಏಕೆ ಬೇಕು? ಇಂತಹ ಬಿಳಿ ಆನೆಯನ್ನು ಇಟ್ಟುಕೊಂಡು ಏಕೆ ಸಾಕಬೇಕು? ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಒಂದು ಗುಣಮಟ್ಟವನ್ನು ಕಾಪಾಡಬೇಕಾದರೆ ಅದರಲ್ಲಿ ಜಾಸ್ತಿ ಅಧಿಕಾರಿಗಳನ್ನು ನೇಮಕ ಮಾಡಿದರೆ "ಹೆಚ್ಚು ಜನ ಅಡಿಗೆ ಮಾಡಲು ಅಡಿಗೆ ಮನೆ ಸೇರಿ. ಅಡಿಗೆಯ ಹದವನ್ನು ಕೆಡಿಸಿದರು'' ಎಂಬಂತಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಬಹಳ ಜನರು ಇರುವುದು ಅಡಚಣೆಯಾಗುತ್ತದೆ. ನಮ್ಮ ಶಿಕ್ಷಣ ಇಲಾಖೆಯಲ್ಲಿ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿರತಕ್ಕ ಮಂದಿ ಏನು ಇದ್ದಾರೆ ಅವರು ನಿರ್ದೇಶಕರಾಗಬೇಕು. ಅವರು ಶಿಕ್ಷಣ ಇಲಾಖೆಯಲ್ಲಿ ನುರಿತವರಾದುದರಿಂದ ಕೆಲಸಕಾರ್ಯಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುತ್ತಾರೆ. ಕಮಿಷನರ್‌ರವರನ್ನು ಏತಕ್ಕೆ ಇಟ್ಟಿದ್ದೀರಿ. ಡೈರೆಕ್ಟರೇ ಅವರ ಕೆಲಸವನ್ನೂ ನಿರ್ವಹಿಸಿದರೆ ಸಾಲದೆ. ಕಮಿಷನರ್ ಎಂದು ಏನು ಇಟ್ಟಿದ್ದೀರಿ ಅವರು ಸುಮ್ಮನೆ ಕಾಳಿತುಕೊಂಡು ಹೋಗುತ್ತಾರೆ. ಅವರಿಗೆ ಶಿಕ್ಷಣ ಕ್ಷೇತ್ರದ ಅನುಭವ ಇರುವುದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ನಾಲ್ಕು ವಿಭಾಗಗಳನ್ನು ಮಾಡಲಾಗಿದೆ. ಬೆಳಗಾವಿ, ಮೈಸೂರು, ಗುಲ್ಬರ್ಗಾ ಮತ್ತು ಬೆಂಗಳೂರು. ಕಳೆದ ವರ್ಷ ನಮ್ಮ ಶಿಕ್ಷಣ ಸಚಿವರು ನಾಲ್ಕು ಕಾಲೇಜುಗಳನ್ನು ಕೊಟ್ಟಿದ್ದರು ಆ ಕಾಲೇಜುಗಳನ್ನು ಎಲ್ಲಿಗೆ ಕೊಟ್ಟಿದ್ದಾರೆ? ಒಂದು ಆನೇಕಲ್‌ಗೆ, ಚನ್ನಗಿರಿ, ಹೊಳೇನರಸೀಪುರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಲಾಗಿದೆ; ಆನೇಕಲ್‌ಗೆ ಕೊಟ್ಟಿರುವುದು ಕಾನೂನು ಮಂತ್ರಿಗಳ ಪ್ರಭಾವ, ಮತ್ತು ಹೊಳೇನರಸೀಪುರಕ್ಕೆ ಕೊಟ್ಟಿರುವುದು ಮಾನ್ಯ ದೇವೇಗೌಡರ ಪ್ರಭಾವ ಮತ್ತು ಚನ್ನಗಿರಿಗೆ ಕೊಟ್ಟಿರುವುದು ಮಾನ್ಯ ಜೆ.ಎಚ್ ಪಟೇಲರ ಕ್ಷೇತ್ರಕ್ಕೆ ಅವರೂ ಕೂಡ ಪ್ರಭಾವಶಾಲಿಗಳು, ಇನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಟ್ಟಿರುವುದು ನಮ್ಮ ಮೊಯಿಲಿಯವರ ಪ್ರಭಾವ ಮತ್ತೊಂದನ್ನು ಮಾನ್ಯ ಮುಖ್ಯಮಂತ್ರಿಗಳ ಊರಾದ ಕುಶಾಲನಗರಕ್ಕೆ ಕೊಡಲಾಗಿದೆ. ಇನ್ನು ಮುಂದೆ ಈ ರೀತಿ ಶಾಲೆ ಕಾಲೇಜುಗಳನ್ನು ಮಂಜೂರು ಮಾಡದೇ ನಮ್ಮ ಶಿಕ್ಷಣ ಮಂತ್ರಿಗಳು ನಮ್ಮ ಕಡೆಗೂ ಸ್ವಲ್ಪ ನಿಗಾ ಇಟ್ಟು ಕೆಲಸ ಮಾಡಿದರೆ ಒಳ್ಳೆಯದು. ನಮ್ಮ ಕಡೆಗೆ ಯಾವ ಕಾಲೇಜನ್ನು ಮಂಜೂರು ಮಾಡಿಲ್ಲ. ದಯಮಾಡಿ ಇನ್ನು ಮುಂದೆ ಶಾಲಾಕಾಲೇಜುಗಳನ್ನು ಕೊಡುವಾಗ ಬೆಳಗಾವಿ ವಿಭಾಗಕ್ಕೆ ಗುಲಬರ್ಗಾ ವಿಭಾಗಕ್ಕೆ ಮಂಜೂರು ಮಾಡಬೇಕು. ಈ ತರಹ ಅಸಮಾನತೆ ಆಗಬಾರದು. ಶ್ರೀಮತಿ ಶೆಲ್ವಿದಾಸ್‌ರವರು ನಿರ್ದೇಶಕರಾಗಿ ಬಹಳ ಶ್ರದ್ಧೆಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಮನೆಯ ಸದಸ್ಯರಲ್ಲದವರ ಹೆಸರನ್ನು ಹೇಳಬಾರದು. ಡೈರೆಕ್ಟರ್ ಎಂದು ಹೇಳಬೇಕು.

ಶ್ರೀ ಜಿ.ಕೆ. ತಕ್ಕೇಡ್.—ಇನ್ನು ಯುವಜನ ಸೇವಾ ಇಲಾಖೆಯವರು ಸಾಕಷ್ಟು ರೀತಿಯಿಂದ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ, ನಮ್ಮ ಯುವಜನ ಸೇವಾ ಇಲಾಖೆಯ ಮಂತ್ರಿಗಳು ಮಂಗಳೂರಿಗೆ ಮಾತ್ರ ಅನುಕೂಲ ಮಾಡದೇ ಬೇರೆ ಕಡೆಗಳಿಗೂ ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಂತ್ರಿಗಳಾದ ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿಯವರು ಬಹಳ ಉತ್ಕೃಷ್ಟತೆಯಿಂದ ಕೆಲಸ ಮಾಡುತ್ತಿದ್ದಾರೆ. ಶ್ರೀಮತಿ ನಾಗಮ್ಮ ಸಿ.ಕೇಶವ ಮೂರ್ತಿಯವರು ದಾವಣಗೆರೆಗೆ ಹೋಗುತ್ತಾರೆ. ನಮ್ಮ ಶಂಕರರಾವ್‌ರವರು ಧಾರವಾಡಕ್ಕೆ ಹೋಗುತ್ತಾರೆ, ಯಾರೇ ಆಗಲೀ ಮಂತ್ರಿಗಳಾದರೆ ಅವರು ಇಡೀ ಕರ್ನಾಟಕ ರಾಜ್ಯಕ್ಕೆ ಮಂತ್ರಿಗಳು ಎಂದು ತಿಳಿದುಕೊಂಡು ಎಲ್ಲಾ ಕಡೆಗೂ ಪ್ರವಾಸ ಮಾಡಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು. ಪ್ರಾಥಮಿಕ ಮತ್ತು ಮಾಧ್ಯಮಿಕ ಸಚಿವರಾದ ಶ್ರೀಮತಿ ನಾಗಮ್ಮನವರು ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಮೊನ್ನೆ ಆಯ್ಕೆ ಮಾಡಿದ್ದಾರೆ. ಅವರು ಬಹಳ ಒಳ್ಳೆಯ ರೀತಿಯಲ್ಲಿ ಆಯ್ಕೆ ಮಾಡಿ ನೇಮಕ ಮಾಡಿದ್ದಾರೆ. ಈ ಸಾರಿ ಯಾವುದೇ ರೀತಿಯ ತಕರಾರು ಇಲ್ಲದ ರೀತಿಯಲ್ಲಿ ಯೋಗ್ಯವಾದ ಮಾರ್ಗದಲ್ಲಿ ಪ್ರತಿಯೊಂದು ಕೆಲಸವನ್ನು ಮಾಡಿದ್ದಾರೆ. ಇದಕ್ಕೆ ನಾವು ಶಹಭಾಷ್‌ಗಿರಿಯನ್ನು ಕೊಡಬಹುದು. ಹೋದ ಸಲ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಆಯ್ಕೆಮಾಡುವಾಗ ತಕರಾರು ಬಂದಿತು. ಈ ಸಾರಿ ಅದು ಆ ರೀತಿ ಆಗದೇ ನಿಷ್ಪಕ್ಷಪಾತವಾದ ರೀತಿಯಲ್ಲಿ ಎಲ್ಲಾ ಕಡೆ ಕಾರ್ಯನಿರ್ವಾಹಕ ಅಧಿಕಾರಿಗಳು

ಕೆಲಸ ಮಾಡಿದ್ದಾರೆ, ಅಧಿಕಾರಿಗಳಾಗಲೀ, ಮಾನ್ಯ ಮಂತ್ರಿಗಳಾಗಲೀ ಅಲ್ಲೋ ಇಲ್ಲೋ ಸ್ವಲ್ಪ ದೋಷವಾಗಿರಬಹುದು ಕ್ಲಾಸ್ ವಗೈರೆ ಮಾಡುವಾಗ. ಯಾವುದೇ ರೀತಿಯ ದೂರು ಇಲ್ಲದಂತೆ ಕೆಲಸ ಮಾಡಲಾಗಿದೆ. ನಮ್ಮಲ್ಲಿ ೧೫೭ ಪ್ರಾಥಮಿಕ ಶಾಲೆಗಳಿವೆ, ೧೩೭ ಶಾಲೆಗಳು ಸರ್ಕಾರಿ ಶಾಲೆಗಳಾಗಿವೆ, ೧೩ ಶಾಲೆಗಳಿಗೆ ಶಾಲಾ ಕಟ್ಟಡಗಳಿಲ್ಲ, ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಗಿದೆ. ಶಾಲಾ ಕಟ್ಟಡ ಉರ್ದು ಶಾಲೆ, ಕನ್ನಡ ಶಾಲೆ ಮತ್ತು ಮರಾಠಿ ಶಾಲೆಗಳಿಗೆ ಸರಿಯಾದ ರೀತಿಯಲ್ಲಿ ಹಂಚುವ ವ್ಯವಸ್ಥೆಯಾಗಬೇಕು. ಕಡ್ಡಾಯ ಶಿಕ್ಷಣ ಜಾರಿಗೆ ಬಂದಮೇಲೆ ೫೮೦ ಹುಡುಗರು ಎಂದು ಪಟ್ಟಿ ಮಾಡಿರುತ್ತಾರೆ ಅಲ್ಲಿ ಹೋಗಿ ನೋಡಿದರೆ ೩೦೦ ಹುಡುಗರು ಸಹ ಇರುವುದಿಲ್ಲ. ೧೫೦ ಜನ ಎಂದು ಪಟ್ಟಿ ಮಾಡಿರುವ ಕಡೆ ೨೫ ಜನ ಸಹ ಸರಿಯಾಗಿ ಶಾಲೆಗೆ ಬರುವುದಿಲ್ಲ.

ಅಧ್ಯಕ್ಷರು.—ಕರ್ನಾಟಕ ಏಕೀಕರಣವಾಗಿ ೨೫ ವರ್ಷಗಳಾದರೂ ತಾವು ಸಾಲಿ ಎನ್ನುವುದನ್ನು ಬಿಟ್ಟಿಲ್ಲಿ. ಸಾಲಿ ಅಲ್ಲ ಶಾಲೆ ಎಂದು ಹೇಳಿ.

ಶ್ರೀ ಜಿ.ಕೆ. ತಕ್ಕೇಡ್.—ಶಾಲೆಗಳಿಗೆ ಬರುವಂತಹ ವಿದ್ಯಾರ್ಥಿಗಳ ಸಂಖ್ಯೆ ೧೦೦ ಎಂದು ಪುಸ್ತಕದಲ್ಲಿರುತ್ತದೆ. ಆದರೆ, ಶಾಲೆಗೆ ಬರತಕ್ಕ ಮಕ್ಕಳು ಕೇವಲ ೨೫ ಕೂಡ ಇರುವುದಿಲ್ಲ. ಕೆಲವು ಶಾಲೆಗಳಲ್ಲಿ ಉಪಾಧ್ಯಾಯರ ಸಂಖ್ಯೆ ಕೂಡ ಇದೇ ರೀತಿ ಇಟ್ಟು ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಅಂತೂ ಮಾರ್ಚಿ ೩೧ನೇ ತಾರೀಖಿಗೆ ೩೦೦ ಜನ ಹುಡುಗರು ಇರುತ್ತಾರೆಂದು ಹಾಜರಿ ತೋರಿಸುತ್ತಾರೆ ಇಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿ ಹಣ ಅಪವ್ಯಯವಾಗಬಾರದು. ಯುವಜನ ಸೇವಾ ಇಲಾಖೆಯಿಂದ ಕುಸ್ತಿ ಕ್ರೀಡಾಂಗಣಗಳನ್ನು ಕಟ್ಟಿಸುತ್ತಿದ್ದಾರೆ. ಅವು ಕೇವಲ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಮೀಸಲಿರದೆ ಎಲ್ಲಾ ಕಡೆಗೂ ವಿಸ್ತರಿಸಬೇಕು. ಒಂದೊಂದು ತಾಲ್ಲೂಕಿಗೂ ವಿಸ್ತರಿಸಿ, ಕುಸ್ತಿ ಪೈಲ್ವಾನರುಗಳಿಗೆ ಅಕಾಡಗಳನ್ನು ತಯಾರು ಮಾಡಬೇಕು. ಕುಸ್ತಿ ಆಡುವುದು ಇಲ್ಲಿಯವರೆಗೆ ಸರಿಯಾಗಿ ಗೊತ್ತಾಗುವುದಿಲ್ಲ. ಮಹಾರಾಷ್ಟ್ರದಲ್ಲಿ ಯುವಜನ ಶಾಖೆಯವರು ಕುಸ್ತಿ ಪೈಲ್ವಾನರುಗಳಿಗೆ ಒಳ್ಳೆಯ ಸ್ಕೋಪ್ ಕೊಡುತ್ತಿದ್ದಾರೆ. ಅಲ್ಲಿ ಒಳ್ಳೆಯ ಪೈಲ್ವಾನರುಗಳನ್ನು ತಯಾರು ಮಾಡುತ್ತಿದ್ದಾರೆ. ನಮ್ಮಲ್ಲೂ ಕೂಡ ಅದೇ ರೀತಿ ಮಾಡಿ, ಬಡ ಹುಡುಗರಿಗೆ ಒಳ್ಳೆಯ ಹಾಲು, ಮೊಟ್ಟೆ ಊಟೋಪಚಾರಗಳನ್ನು ಒದಗಿಸಿಕೊಟ್ಟು ನಮ್ಮ ರಾಜ್ಯದಲ್ಲಿ ಮುಂದುವರಿಸುವುದಲ್ಲದೆ ಅಖಿಲ ಭಾರತ ಮಟ್ಟದವರೆಗೂ (ನಮ್ಮ ಕರ್ನಾಟಕ) ನಮ್ಮ ನಾಡು ಶೂರರ ನಾಡು ಹೌದು ಎಂಬುದನ್ನು ತೋರಿಸಿಕೊಡಬೇಕು. ನಾವು ಪದವೀಧರರನ್ನು ತಯಾರು ಮಾಡುವುದರ ಜೊತೆಗೆ ಶೂರರನ್ನು ಕೂಡ ತಯಾರು ಮಾಡಬೇಕು. ಉತ್ಕೃಷ್ಟವಾದ ಮುಂಗಡ ಪತ್ರವನ್ನು ತಂದಂತಹ ನಮ್ಮ ಶಿಕ್ಷಣ ಮಂತ್ರಿಗಳನ್ನು ಮತ್ತು ಉತ್ಕೃಷ್ಟ ರೀತಿಯಲ್ಲಿ ಕೆಲಸ ಮಾಡಿರತಕ್ಕ ಅಧಿಕಾರಿಗಳನ್ನು ಮೆಚ್ಚುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—Now, the House stands adjourned to meet at 12-00 Noon tomorrow.

The House adjourned at Twentyeight Minutes past Six of the clock to meet again at Twelve of the Clock on Wednesday, the 1st July 1981.